UNIVERSAL
LIBRARY
OU_198966
UNIVERSAL
LIBRARY

Damage Book

ಶ್ರೀ ಶೇಷಾಚಲ ಗ್ರಂಥಮಾಲೆ, ಆನಂದವನ

# ಭಾಗ್ಯೋದಯ.

[ಐತಿಹಾಸಿಕ ಕಾದಂಬರಿ]

ಲೇ:

ನಾ ಗೇ ಶ.

ಪ್ರಕಾಶಕರು:

ಯ. ಗು. ಕುಲಕರ್ಣಿ

ಸಂಪಾದಕ ಸ. ಚಂದ್ರಿಕೆ,

ಆ ನ ಂ ದ ವ ನ

೧ ೯ ೩ ೩

ಬೆಲೆ ೮ ಆಣೆ

ಇದನ್ನು ಭಿ. ಪ. ಕಾಳೆ ಇವರು ಆನಂದವನ-
ಅಗಡಿಯೊಳಗಿನ ತಮ್ಮ ಶ್ರೀ ಶೇಷಾಚಲ
ಪ್ರಿಂಟಿಂಗ ಪ್ರೆಸ್ಸಿನಲ್ಲಿ
ಮುದ್ರಿಸಿದರು.

ಶ್ರೀಯುತ ನಾಗೇಶರವರು ಬರೆದ ಈ ಕೆಳಗಿನ
ಐತಿಹಾಸಿಕ ಕಾದಂಬರಿಗಳು
ನಮ್ಮಲ್ಲಿ ಸಿಗುತ್ತವೆ.

| | | |
|---|---|---|
| ೧ | ಪ್ರಾರಬ್ಧ ಪ್ರಹಾರ | ಬೆಲೆ ೪ ಆಣೆ |
| ೨ | ಪತಿತೋದ್ಧರಣ | ಬೆಲೆ ೪ ಆಣೆ |
| ೩ | ಪರಾವರ್ತನ | ಬೆಲೆ ೮ ಆಣೆ |
| ೪ | ರಕ್ತಸಿಂಚನ | ಬೆಲೆ ೨ ಆಣೆ |
| ೫ | ಸತ್ಯಮೇವ ಜಯತೇ | ಬೆಲೆ ೧೨ ಆಣೆ |
| ೬ | ಈಶ ಸಂಕಲ್ಪ | ಬೆಲೆ ೧೨ ಆಣೆ |
| ೭ | ಅಮಾತ್ಯ ರಾಕ್ಷಸ | ಬೆಲೆ ೪ ಆಣೆ |

ಸಿಗುವ ವಿಳಾಸ: — ಭಿ. ಪ. ಕಾಳೆ, ಪೊ. ಆನಂದವನ, ಡಿ. ಧಾರವಾಡ

# ಮುನ್ನುಡಿ.

ಹಿಂದುಪದ ಪಾತಶಾಹಿಯ ಕಾಲದಲ್ಲಿ ಜರುಗಿದ ಇದೊಂದು ಬಹುತಂತ್ರಗಳಿಂದ ಯುಕ್ತವಾದ ಕಾದಂಬರಿಯು. ಛತ್ರಪತಿ ರಾಜಾರಾಮ ಮಹಾರಾಜರು ಅಕಾಲದಲ್ಲಿ ಮರಣ ಹೊಂದಲು, ಅವರ ಇಬ್ಬರು ಹೆಂಡಂದಿರೂ ತಮ್ಮ ಮಗನೇ ಛತ್ರಪತಿಯು ಪಟ್ಟಕ್ಕೆ ಬಾಧ್ಯಸ್ತನಾಗಬೇಕೆಂದು ಕಾರಸ್ಥಾನವೆಸಗಿದರು. ರಾಜಸಬಾಯಿಯ ಕಾರಸ್ಥಾನಕ್ಕೆ ಸಕೃತ ದರ್ಶನಕ್ಕೆ ಫಲವೃತ್ತಿಯಾದ್ದರಿಂದ, ಆಕೆಯ ಮಗನೇ ಕೊಲ್ಲಾಪುರದ ಪಟ್ಟಕ್ಕೆ ಕುಳಿತನು; ಆದರೆ ರಾಜಸಬಾಯಿಯು ಮಹಾ ಕುತಂತ್ರಗಾರಳಾದ್ದರಿಂದ ಅವಳು ತನ್ನ ಸವತಿಯಾದ ತಾರಾಬಾಯಿಯ ವಂಶವು ಕೂಡ ಉಳಿಯಬಾರದೆಂಬ ದುಷ್ಟ ಹೇತುವಿನಿಂದ ಆಕೆಯ ಮೊಮ್ಮಕ್ಕಳಿಗೆ ಉಪಟಳ ಕೊಡಹತ್ತಲು, ಧೂರ್ತ ತಾರಾಬಾಯಿಯು ತನ್ನ ರಾಮರಾಜನೆಂಬ ಹೆಸರಿನ ಮೊಮ್ಮಗನನ್ನು ಮಹಾತಂತ್ರದಿಂದ ಗುಪ್ತವಾಗಿರಿಸಿದಳು. ತಾರಾಬಾಯಿಯ ದೈವಬಲದಿಂದ ಆಕೆಗೆ ಶ್ರೀ ಬಂಕಟಸ್ವಾಮಿಗಳಂಥ ಸತ್ಪುರುಷರೂ, ಚಂದ್ರಿಕೆ ಮೊದಲಾದ ಸ್ವಾಮಿನಿಷ್ಠರೂ ಸಹಾಯಕರಾಗಿದ್ದರು. ಅದರಿಂದಲೇ ಅವಳ ಬೇಳೆಯು ಸಾತಾರೆಯ ಶ್ರೀ ಶಾಹೂಛತ್ರಪತಿಯಲ್ಲಿ ಬೆಯ್ದು, ಅವನು ಆಕೆಯ ಮೊಮ್ಮಗನಾದ ರಾಮರಾಜನನ್ನು ತನ್ನ ದತ್ತಕ ಪುತ್ರನನ್ನಾಗ ಮಾಡಿಕೊಂಡನು.

ತಾರಾಬಾಯಿಯ ದೀರ್ಘ ಸಾಹಸದ ಮೂಲಕ ಶ್ರೀ ರಾಮರಾಜನ ಭಾಗ್ಯೋದಯವಾದ ಕಥಾನಕವು ಇದರಲ್ಲಿ ಅಡಕಾಗಿರುವದರಿಂದ, ಈ ಪುಸ್ತಕಿಗೆ **ಭಾಗ್ಯೋದಯ**ವೆಂದು ಲೇಖಕರಿಟ್ಟ ಹೆಸರು ಸಾರ್ಥಕವಾಗಿರುವದೆಂದು ಹೇಳದಿರೆವು.

ಆನಂದವನ, ಸಜ್ಜನ ವಿಧೇಯ,

ತಾ|| ೨೮-೧ ೧೯೩೩ ಭಿ. ಪ. ಕಾಳೆ.

# ವಿಷಯಾನುಕ್ರಮಣಿಕೆ.


| | ಪ್ರಕರಣ | ಪುಟ |
|---|---|---|
| ೧ | ದೈವದ ವಿಚಿತ್ರ ಯೋಗಾಯೋಗ | ೧ |
| ೨ | ಪರದುಃಖ ಶೀತಲವು | ೭ |
| ೩ | ನಾಮಕರಣ | ೧೨ |
| ೪ | ಸದ್ಬೋಧ ಚಂದ್ರಿಕೆ | ೧೮ |
| ೫ | ಅದಾವ ಮಾತು? | ೨೪ |
| ೬ | ಕರ್ಮಫಲ | ೨೯ |
| ೭ | ಭೀಷಣವಾದ ಸ್ವಪ್ನ | ೩೫ |
| ೮ | ಕರ್ಮಕಥೆ | ೪೦ |
| ೯ | ಚಂದ್ರಸೇನ | ೪೬ |
| ೧೦ | ಅಮ್ಮಾ! ಇವರು ಯಾರೆ? | ೫೨ |
| ೧೧ | ಭಾಗ್ಯೋದಯದ ಆಶಾಂಕುರ | ೫೭ |
| ೧೨ | ನೀವು ನಿಜವಾಗಿಯೇ ರಾಮರಾಜರು | ೬೩ |
| ೧೩ | ದೈವದ ಅಗಾಧ ಲೀಲೆ! | ೬೮ |
| ೧೪ | ಅವ್ವಯ್ಯಾ! ಇದೇನೆ? | ೭೧ |
| ೧೫ | ಆಯೊ ಅಂಬಾ, ಜಗದಂಬಾ! ಜೆ-ಜೆ-ಜೆ-ಜೆ! | ೭೯ |
| ೧೬ | ಭಾಗ್ಯೋದಯ | ೮೪ |

# ಭಾಗ್ಯೋದಯ!

ಶ್ರೀ

## ದೈವದ ವಿಚಿತ್ರ ಯೋಗಾಯೋಗ.

ಶಿವಛತ್ರಪತಿಯು ಅಲೌಕಿಕ ಬುದ್ಧಿಸಾಮರ್ಥ್ಯದಿಂದಲೂ, ಪರಾಕ್ರಮದಿಂದಲೂ ಮೊಗಲ ಸಮ್ರಾಟನಾದ ಔರಂಗಜೇಬನಂತಹ ಪ್ರಚಂಡ ಬಲಶಾಲಿಯನ್ನು ಹಣ್ಣು ಮಾಡಿ, ದಕ್ಷಿಣದ ಹಿಂದುಪದ ಪಾತಶಾಹಿಯ ವಿಜಯ ದುಂದುಭಿರವವು ದಶದಿಶೆಗಳಲ್ಲಿ ವ್ಯಾಪಿಸುವಂತೆ ಮಾಡಿದನು. ಭಾರತೀಯರ ದುರ್ದೈವದಿಂದ ಈ ಸುದಿನಗಳು ಬಹಳ ಕಾಲ ಉಳಿಯಲಿಲ್ಲ. ಶಿವಛತ್ರಪತಿಯು ಅಲ್ಪಾಯುಷಿಯಾದನು. ಅವನ ಅಕಾಲನಿಧನದಿಂದ ಭಾರತವರ್ಷವು ದುಃಖಾಬ್ಧಿಯಲ್ಲಿ ಮುಳುಗಿತು. ಶಿವಪ್ರಭುವಿನ ಶೋಚನೀಯವಾದ ಮರಣದಿಂದ ಔರಂಗಜೇಬಬಾದಶಹನಲ್ಲಿ ನವ್ಯಸ್ಫೂರ್ತಿಯು ಉದಯಿಸಿತು. ಅಮೃತೋಪಮವಾದ ಈ ಸಂಧಿಯಲ್ಲಿ ದಕ್ಷಿಣವನ್ನು-ಮಹಾರಾಷ್ಟ್ರವನ್ನು ಪಾದಾಕ್ರಾಂತಮಾಡಿಕೊಳ್ಳಬೇಕೆಂದು ಅವನು ಸಡ್ಡು ಹೊಡೆಯತೊಡಗಿದನು. ಉದಯೋನ್ಮುಖವಾದ ಸ್ವರಾಜ್ಯದ ವರ್ಚಸ್ಸನ್ನು ನಿರ್ಮೂಲ ಮಾಡಬೇಕೆಂದು, ದೀರ್ಘಾಯುಷಿಯಾದ ಬಾದಶಹನು ಅಮೋಘವಾದ ಸೈನ್ಯವನ್ನು ತೆಗೆದುಕೊಂಡು ದಕ್ಷಿಣಮಹಾರಾಷ್ಟ್ರವನ್ನು ಪ್ರವೇಶಿಸಿದನು. ಆಗ ಸ್ವರಾಜ್ಯಸಿಂಹಾಸನದ ಮೇಲೆ ಶಿವಛತ್ರಪತಿಯ ಕುಮಾರನಾದ ಸಂಭಾಜಿ ಮಹಾರಾಜನು ವಿಭೂಷಿತನಾಗಿದ್ದನು. ಇವನು ತಂದೆಯಂತೆ ಶೂರನೂ ಸಾಹಸಿಯೂ ಆಗಿದ್ದನು. ಇವನ ಕೈಕೆಳಗಿನ ಸರದಾರರಾದರೂ ಅತ್ಯಂತ ಸ್ವಾಮಿನಿಷ್ಠರಿದ್ದರು. ವಸ್ತುಸ್ಥಿತಿಯು ಹೀಗಿದ್ದರೂ, ಭೇದನೀತಿನಿಪುಣನಾದ ಬಾದಶಹನು ಅಮಾತ್ಯರಾಕ್ಷಸನಾದ ಕಲುಷನನ್ನು ಕೈಯಲ್ಲಿ ತೆಗೆದುಕೊಂಡು, ಸಂಭಾಜಿಮಹಾರಾಜನ ದುರ್ವ್ಯಸನಾಧೀನತೆಯ ಲಾಭವನ್ನು ಪಡೆದು ಅವನನ್ನು ಸೆರೆಹಿಡಿದನು. ಧರ್ಮದುರಭಿಮಾನಿಯಾದ ಬಾದಶಹನು ಛತ್ರಪತಿಗೆ ಮುಹಮ್ಮದೀಯ ಧರ್ಮದೀಕ್ಷೆಯನ್ನು ಕೊಟ್ಟರೆ, ತನ್ನ ಮಹತ್ವಾಕಾಂಕ್ಷೆಯು ಸಫಲವಾಗುವದೆಂದು ಭಾವಿಸಿ

ದನು. ಅವನು ಅಮಾನುಷವಾದ ಅತ್ಯಾಚಾರಗಳಿಂದ ಸಂಭಾಜಿ ಮಹಾರಾಜನನ್ನು ಜರ್ಜರಿತನನ್ನಾಗಿ ಮಾಡಿದರೂ, ಆ ಸ್ವಧರ್ಮಾಭಿಮಾನಿಯು ತನ್ನ ಶೀಲದಿಂದ ಚ್ಯುತನಾಗಲಿಲ್ಲ. ಕಡೆಗೆ ಬಾದಶಹನು ಭೀಷಣವಾದ ಅತ್ಯಾಚಾರಗಳಿಂದ ಅವನ ಕೊಲೆ ಮಾಡಿಸಿ, ಕೃತಕೃತ್ಯನಾದೆನೆಂದು ಭಾವಿಸಿದನು. ರಾಕ್ಷಸೀ ಮಹತ್ವಾಕಾಂಕ್ಷೆಯುವನಾದ ಬಾದಶಹನು ಇಷ್ಟರಿಂದಲೆ ತೃಪ್ತನಾಗದೆ ಹಿಂದುಪದಪಾತಶಾಹಿಯ ವೃಕ್ಷವನ್ನು ಸಮೂಲವಾಗಿ ಉಚ್ಛೇದಗೊಳಿಸಬೇಕೆಂದು ಹವಣಿಸಿದನು. ಅವನು ಝುಲ್ಫಿಕಾರಖಾನನೆಂಬ ಬಲಾಢ್ಯ ಸರದಾರನನ್ನು ರಾಯಗಡವನ್ನು ಮುತ್ತುವದಕ್ಕಾಗಿ ಕಳುಹಿಸಿದನು. ಈ ಖಾನನು ಸೂರ್ಯಾಜಿ ಪಿಸಾಳನೆಂಬ ದೇಶದ್ರೋಹಿಯನ್ನು ಒಡೆದುಕೊಂಡು, ರಾಯಗಡವನ್ನು ಸ್ವಾಧೀನದಲ್ಲಿ ತೆಗೆದುಕೊಂಡನು. ಅನಂತರದಲ್ಲಿ ಅವನು ರಾಜಪತ್ನಿಯಾದ ಏಸೂಬಾಯಿಯನ್ನೂ ಯುವರಾಜನಾದ ಬಾಲಶಿವಾಜಿಯನ್ನೂ ಸೆರೆಹಿಡಿದುಕೊಂಡು ಹೋಗಿ ಬಾದಶಹನ ವಶಕ್ಕೆ ಕೊಟ್ಟನು. ಆಗ ಬಾದಶಹನ ರಾಕ್ಷಸೀ ಹೃದಯವು ಅರ್ಧಮರ್ಧ ಶಾಂತವಾದಂತಾಗಿ ಸೆರೆಸಿಕ್ಕ ರಾಜಕುಟುಂಬವನ್ನು ಸಂಗಡ ತೆಗೆದುಕೊಂಡು ದಿಲ್ಲಿಗೆ ಹೋದನು.

ತನ್ನ ಈ ಕೃತಿಯಿಂದ ದಕ್ಷಿಣದ ಹಿಂದುಗಳು ಬೆದರಿ ಸ್ವರಾಜ್ಯಸ್ಥಾಪನೆಯ ಹಾಗು ಅದರ ಆಡಳಿತದ ಉಸಾಬರಿಯನ್ನು ಬಿಡುವರೆಂದು ಬಾದಶಹನ ಭಾವನೆಯಾಗಿತ್ತು. ಸ್ವಲ್ಪ ದಿನಗಳಲ್ಲಿ ಅವನ ತಿಳುವಳಿಕೆಯು ಪೂರ್ಣವಾಗಿ ತಪ್ಪಿಹೋಯಿತು. ತನ್ನ ಅತ್ಯಾಚಾರಗಳಿಂದ ಪ್ರಜಾಕ್ಷೋಭೆಯು ಹೆಚ್ಚಾಗಿ ಸ್ವರಾಜ್ಯದ ಕಾರ್ಯಕರ್ತರು ಶತಗುಣಿತ ಉತ್ಸಾಹದಿಂದಲೂ ದೃಢನಿಶ್ಚಯದಿಂದಲೂ ಸ್ವಕರ್ತವ್ಯವನ್ನು ಜರುಗಿಸುತ್ತ ಹೋಗುವರೆಂಬದನ್ನು ಅವನು ಅರಿತಿರಲಿಲ್ಲ. ಅಸ್ತವ್ಯಸ್ತವಾದ ಸ್ವರಾಜ್ಯದ ಏಕೀಕರಣದ ದೃಢೀಕರಣಕ್ಕಾಗಿ ರಾಜಾರಾಮ ಮಹಾರಾಜನೂ, ಅವನ ಸೇನಾಪತಿಗಳೂ, ಸರದಾರರೂ, ಮಂತ್ರಿಗಳೂ ಆದ ಧನಾಜಿ ಜಾಧವ ಸಂತಾಜಿ ಘೋರಪಡೆ, ರಾಮಚಂದ್ರಪಂತ ಅಮಾತ್ಯ, ಪ್ರಹ್ಲಾದ ನೀರಾಜಿ ಮೊದಲಾದ ಸ್ವರಾಜ್ಯನಿಷ್ಠರೂ ಅವ್ಯಾಹತವಾದ ಸಾಹಸ ಮಾಡಿ ಕಾರ್ಯಸಾಫಲ್ಯ ಮಾಡಿಕೊಂಡರು. ದಕ್ಷಿಣಾತ್ಯರ ಪುಂಡುಗಾರಿಕೆಯಿಂದ ಔರಂಗಜೇಬನ ದಕ್ಷಿಣ ದಿಗ್ವಿಜಯದ ಉತ್ಸಾಹವು ಕುಗ್ಗಿಹೋಯಿತು! ಅವರ ತಂತ್ರಯುದ್ಧದಿಂದ ಬಾದಶಹನ ಪ್ರಚಂಡವಾದ ಸೈನ್ಯವು ಹಣ್ಣಾಯಿತು. ಅವನು ದಕ್ಷಿಣ ದೇಶಕ್ಕೆ ಕಡೆಯ ವಂದನೆಯನ್ನರ್ಪಿಸಬೇಕೆಂದು ನಿರ್ಧರಿಸಿಕೊಂಡಿದ್ದನು. ಅಷ್ಟ

ರಲ್ಲಿ ದೈವದುರ್ವಿಲಾಸದಿಂದ ಸ್ವರಾಜ್ಯದ ಛತ್ರಪತಿಯಾದ ರಾಜಾರಾಮಮಹಾರಾಜನು ತನ್ನ ವಯಸ್ಸಿನ ಇಪ್ಪತ್ತೊಂಭತ್ತನೆಯ ವರ್ಷದಲ್ಲಿ ಮೃತ್ಯುಮುಖಿಯಾದನು!

ರಾಜಾರಾಮ ಮಹಾರಾಜನ ಅಕಾಲ ನಿಧನದಿಂದ ಸ್ವರಾಜ್ಯಕ್ಕೆ ಬಲವಾದ ಹಾನಿಯಾಯಿತು. ಈ ದುರ್ಧರ ಪ್ರಸಂಗದಲ್ಲಿ ರಾಜಪತ್ನಿಯಾದ ತಾರಾಬಾಯಿಯು ಮಂತ್ರಿ ಸೇನಾನಾಯಕರ ಸಹಾಯದಿಂದ ರಾಜ್ಯಶಕಟವನ್ನು ಸಾಗಿಸಬೇಕೆಂದು ನಿರ್ಧರಿಸಿಕೊಂಡಳು. ಅವಳು ತನ್ನ ಮಗನಾದ ಶಿವಾಜಿ ಮಹಾರಾಜನನ್ನು ಪಟ್ಟಕ್ಕೆ ಕುಳ್ಳಿರಿಸಿ ರಾಜ್ಯಸೂತ್ರಗಳನ್ನು ತನ್ನ ಕೈಯಲ್ಲಿ ತೆಗೆದುಕೊಂಡಳು.

ರಾಜಾರಾಮನ ಮರಣದಿಂದ ಔರಂಗಜೇಬ ಬಾದಶಹನು ಉತ್ಸಾಹಗೊಂಡನು. ದಕ್ಷಿಣವನ್ನು ಪಾದಾಕ್ರಾಂತ ಮಾಡಿಕೊಳ್ಳಬೇಕೆಂದು ಅವನು ನವ್ಯಸ್ಫೂರ್ತಿಯಿಂದ ಸಾಹಸ ಮಾಡತೊಡಗಿದನು. ನಿರಂತರವಾಗಿ ಇಪ್ಪತ್ತೈದು ವರ್ಷಗಳ ವರೆಗೆ ಯುದ್ಧಕಾರ್ಯದಲ್ಲಿ ತೊಡಗಿದ್ದರಿಂದ, ತೊಂಭತ್ತು ವರ್ಷದ ಮುಪ್ಪಿನವನಾದ ಬಾದಶಹನು ಬಹಳೇ ದಣಿದಿದ್ದನು. ಸೈನ್ಯವಾದರೂ ಅತ್ಯಂತವಾಗಿ ಹತಾಶಗೊಂಡಿತ್ತು. ತಂತ್ರಯುದ್ಧನಿಪುಣರಾದ ದಾಕ್ಷಿಣಾತ್ಯರನ್ನು ತಂತ್ರದಿಂದಲೇ ನಾಶಗೊಳಿಸಬೇಕೆಂದು ಆಗ ಅವನು ಯೋಚಿಸಿಕೊಂಡನು. ಸ್ವರಾಜ್ಯಸಿಂಹಾಸನದ ಮೇಲೆ ತಾರಾಬಾಯಿಯು ತನ್ನ ಪುತ್ರನಾದ ಶಿವಾಜಿಯನ್ನು ಕುಳ್ಳಿರಿಸಿದ್ದರಿಂದ ಈ ಪ್ರಸಂಗದಲ್ಲಿ ಕಾರಾಗೃಹದಲ್ಲಿದ್ದ ಶಾಹೂರಾಜನ ಬಿಡುಗಡೆ ಮಾಡಿದರೆ, ಅವರೀರ್ವರಲ್ಲಿ ಸಿಂಹಾಸನದ ಸಲುವಾಗಿ ಬಡಿದಾಟವು ಪ್ರಾರಂಭವಾಗುವದೆಂದೂ, ಗೃಹಕಲಹದ ಲಾಭವು ತನಗಾಗುವದೆಂದೂಅವನು ಭಾವಿಸಿಕೊಂಡನು. ಇಪ್ಪತ್ತೈದು ವರ್ಷಗಳ ಪ್ರಯತ್ನದಿಂದ ಆಗದಂತಹ ಕಾರ್ಯವು ತನ್ನ ಈ ಕಾರಸ್ಥಾನದಿಂದ ನೆರವೇರುವದೆಂದು ಆ ಧೂರ್ತನು ನಿರ್ಧರಿಸಿಕೊಂಡನು. ಅವನಿಗೆ ಈ ಮಾರ್ಗವನ್ನು ಬಿಟ್ಟು ಲಾಭದಾಯಕವಾದ ಮತ್ತೊಂದು ಮಾರ್ಗವೇ ಉಳಿದಿರಲಿಲ್ಲ. ಯುದ್ಧವ್ಯಾಪಾರವನ್ನು ನಿಲ್ಲಿಸುವ ಪ್ರಸಂಗವು ಅವನಿಗೆ ಒದಗಿತ್ತು. ಯಾಕಂದರೆ, ಬಹುಕಾಲದ ವರೆಗೆ ಮಾಡಿದ ಕಾಳಗದಿಂದ ಬೊಕ್ಕಸವು ಬರಿದಾಗಿತ್ತು; ಸ್ವರಾಜ್ಯದೊಳಗಿನ ಕೈವಶವಾದ ಕೋಟಿಕೊತ್ತಳಗಳೆಲ್ಲ ಕೈಬಿಡತೊಡಗಿದ್ದವು; ವೇಳೆ ವೇಳೆಗೆ ವೇತನವು ದೊರೆಯದ್ದರಿಂದ, ಸೈನಿಕರು ನಿರುತ್ಸಾಹಿಗಳಾಗಿ ಕಾರ್ಯನಿವೃತ್ತರಾಗ

ತೊಡಗಿದ್ದರು. ಅನೇಕ ರೋಗೋಪದ್ರವಗಳಿಂದ ಅವನ ಸೈನ್ಯವು ಬಹು ಮಟ್ಟಿಗೆ ಕರಗಿತ್ತು. ಆದ್ದರಿಂದ ದಂಡೋಪಾಯಕ್ಕಿಂತ ಭೇದೋಪಾಯ ವನ್ನು ಕೈಕೊಳ್ಳುವದರಿಂದ ತನ್ನ ಕಾರ್ಯಸಿದ್ಧಿಯಾಗುವದೆಂದು ಅವನು ಎಣಿಕೆ ಹಾಕಿದ್ದನು. ಸ್ವರಾಜ್ಯ ಸಿಂಹಾಸನದ ಮೇಲೆ ತಾರಾಬಾಯಿಯು ತನ್ನ ಮಗ ನಾದ ಶಿವಾಜಿಯನ್ನು ಕುಳ್ಳಿರಿಸಿದ್ದಳು. ಬಹುಕಾಲದ ವರೆಗೆ ಯವನರ ಸ್ವಾಧೀನದಲ್ಲಿದ್ದ ಶಾಹೂ ರಾಜನು ಸ್ವರಾಜ್ಯಕ್ಕೆ ಬಾಧ್ಯಸ್ತನಾಗುವದಿಲ್ಲ ವೆಂದು ಅವಳು ಸಾರತೊಡಗಿದ್ದಳು; ಹಾಗು ಅತ್ಯಂತ ವಿಪನ್ನಾವಸ್ಥೆಯಲ್ಲಿ ಬಹಳೇ ಸಾಹಸದಿಂದ ಹಿಂದುಪದಪಾತಶಾಹಿಯ ಸಿಂಹಾಸನದ ರಕ್ಷಣೆಮಾಡಿದ ತನ್ನ ಪತಿಯಾದ ರಾಜಾರಾಮ ಮಹಾರಾಜನು ಸ್ವರಾಜ್ಯದ ನಿಜವಾದ ಒಡೆಯ ನೆಂದೂ, ಅವನ ತರುವಾಯ ಅವನ ವಂಶಸ್ಥರಿಗೆ ಅದು ದೊರೆಯುವದು ನ್ಯಾಯ ವಾದದ್ದೆಂದೂ ಅವಳು ಗ್ರಹಿಸಿದ್ದಳು. ಈ ಸಂಧಿಯಲ್ಲಿ ಶಾಹೂರಾಜನನ್ನು ಬಿಡುಗಡೆ ಮಾಡಿದರೆ, ಅವರೀರ್ವರಲ್ಲಿ ಕಲಹಕ್ಕೆ ಪ್ರಾರಂಭವಾಗಿ ತಮ್ಮಷ್ಟಕ್ಕೆ ತಾವೇ ನಾಶಹೊಂದುವರೆಂದು ಔರಂಗಜೇಬ ಬಾದಶಹನು ತರ್ಕಿಸಿಕೊಂಡಿ ದ್ದನು. ಇನ್ನು ಮೇಲೆ ಅವನು ತನ್ನ ವ್ಯೂಹರಚನೆಯ ತಳಹದಿಯನ್ನು ಹಾಕ ತಕ್ಕವನಿದ್ದನು; ಅಷ್ಟರಲ್ಲಿ ಮಹತ್ವಾಕಾಂಕ್ಷೆಯ ಆ ಮೊಗಲಭೂಪನು ೧೭೦೭ರಲ್ಲಿ ಅಹಮ್ಮದನಗರದೊಳಗೆ ಮರಣಹೊಂದಿದನು. ಅವನ ಈ ಆಲೋ ಚನೆಗೆ ಕಾರಸ್ಥಾನಿಯೂ ಶೂರನೂ ಆದ ಸರದಾರ ಝುಲ್ಫಿಕಾರಖಾನನು ಮೂರ್ತ ಸ್ವರೂಪವನ್ನು ಕೊಟ್ಟನು. ಅವನು ಶಾಹೂರಾಜನನ್ನು ಮುಕ್ತಮಾಡಿ ದಕ್ಷಿ ಣಕ್ಕೆ ಕಳುಹಿಸಿ ಕೊಟ್ಟನು ಶಾಹೂರಾಜನು ಮೊಗಲರ ಮಾಂಡಲಿಕನೆಂಬಂತೆ ಒಪ್ಪಿಕೊಂಡು ಸ್ವರಾಜ್ಯವನ್ನು ಪ್ರವೇಶಿಸಿದನು.

ಶಾಹೂರಾಜನೊಡನೆ ಅಂತಃಕಲಹವಾದರೂ ಸ್ವರಾಜ್ಯವನ್ನು ಪ್ರವೇಶಿ ಸಿತು. ತಾರಾಬಾಯಿಯು ತನ್ನ ವಶಕ್ಕೆ ರಾಜ್ಯವನ್ನು ಕೊಡುವದಿಲ್ಲವೆಂಬದು ಶಾಹೂರಾಜನ ಮನವರಿಕೆಯಾದ ಕೂಡಲೆ, ಅವನು ಭೇದನೀತಿಯನ್ನು ಕೈಕೊಂ- ಡನು. ಅವನು ಬಾಗಲಾಣ, ಖಾನದೇಶ ಮೊದಲಾದ ಕಡೆಯ ಸರದಾರರನ್ನು ಒಡೆದುಕೊಂಡು ಸೇನಾಸನ್ನಾಹ ಮಾಡತೊಡಗಿದನು. ತಕ್ಕ ಮಟ್ಟಿಗೆ ಸೇನಾ ಸಂಗ್ರಹವಾದೊಡನೆಯೆ, ತನ್ನ ರಾಜ್ಯವನ್ನು ಬಿಟ್ಟುಕೊಡಬೇಕೆಂದು ಅವನು ತಾರಾಬಾಯಿಗೆ ಸಂದೇಶ ಕಳಿಸಿದನು. ದಿಲ್ಲಿಯಿಂದ ಶಾಹೂರಾಜನು ಹೊರಟ ಸಂಗತಿಯನ್ನು ಕೇಳಿದಾಗಲೆ ಭಾವೀ ಪ್ರಸಂಗವನ್ನು ಚಾಣಾಕ್ಷಳಾದ ತಾರಾ

ಬಾಯಿಯು ಅರಿತಿದ್ದಳು. ಅತ್ಯಂತ ಏಪನ್ನಾವಸ್ಥೆಯಲ್ಲಿ ತನ್ನ ಪತಿಯು ಸ್ವರಾಜ್ಯರಕ್ಷಣೆ ಮಾಡಿ ಅದರ ಉತ್ಕರ್ಷೆಗಾಗಿ ದೇಹವನ್ನು ಸವಿಸಿದ್ದರಿಂದ, ಅವನ ವಂಶಜರೇ ಅದಕ್ಕೆ ನಿಜವಾದ ಬಾಧ್ಯಸ್ಥರಾಗುವರೆಂದೂ, ಮೊಗಲರ ಕಾರಾಗೃಹದಲ್ಲಿ ಕಾಲಕಳೆದು, ಅವರ ಆಧಿಪತ್ಯಕ್ಕೆ ಒಪ್ಪಿಕೊಂಡು ಬಂದ ನೀನು ಸ್ವರಾಜ್ಯಕ್ಕೆ ತಿಲಾಂಶವಾದರೂ ಸಂಬಂಧವಿಲ್ಲವೆಂತಲೂ ಅವಳು ಶಾಹೂ ರಾಜನಿಗೆ ತಿಳಿಸಿದಳು. ಇಷ್ಟರಲ್ಲಿ ಸ್ವರಾಜ್ಯದೊಳಗೆ ಎರಡು ಒಣಗಳಾಗಿದ್ದವು. ಶಾಹೂರಾಜನು ತನ್ನ ಬುದ್ಧಿಕೌಶಲ್ಯದಿಂದ ಬಹುಜನ ಸರದಾರರನ್ನು ತನ್ನ ಕಡೆಗೆ ತೆಗೆದುಕೊಂಡಿದ್ದನು. ಸಂಗ್ರಾಮವಿಲ್ಲದೆ ತನ್ನ ವಶದಲ್ಲಿ ರಾಜ್ಯವು ಬರುವದಿಲ್ಲ ವೆಂದು ಗೊತ್ತಾದೊಡನೆಯೆ, ಅವನು ತಾರಾಬಾಯಿಯ ಮೇಲೆ ತನ್ನ ಸೈನ್ಯ ವನ್ನು ಸಾಗಿಸಿದನು. ಆಗ ತಾರಾಬಾಯಿಯ ಪಕ್ಷದಲ್ಲಿ ಎಷ್ಟೋ ಜನ ಶೂರ ಸರದಾರರಿದ್ದುದರಿಂದ, ಶಾಹೂರಾಜನ ಆಟವು ನಡೆಯದಾಯಿತು. ಆಗ ಅವನ ಅಧಿಕಾರವು ಸಾತಾರೆಯ ಸುತ್ತು ಮುತ್ತು ನಾಲ್ಕೆಂಟು ಕ್ರೋಶಗಳ ವರೆಗೆ ಮಾತ್ರ ಇತ್ತು. ಬರಿಯ ಪರಾಕ್ರಮದಿಂದ ಕಾರ್ಯಭಾಗವಾಗುದಿಲ್ಲವೆಂದು ಅವನ ಮನವರಿಕೆಯಾದೊಡನೆಯೆ, ಅವನು ಯಾವದೊಂದು ಸಂಚು ಮಾಡಿ ಯಶವನ್ನು ಸಂಪಾದಿಸಬೇಕೆಂದು ಹವಣಿಸಿದನು.

ರಾಜಾರಾಮ ಮಹಾರಾಜನಿಗೆ ತಾರಾಬಾಯಿಯಲ್ಲದೆ ರಾಜಸಬಾಯಿಯೆಂಬ ಹೆಂಡತಿಯೊಬ್ಬಳಿದ್ದು, ಅವಳ ಹೊಟ್ಟೆಯಿಂದ ಸಂಭಾಜಿಯೆಂಬ ಮಗನು ಜನಿ ಸಿದ್ದನು. ಈ ಸವತಿಯರಲ್ಲಿ ಇದುವರೆಗೂ ದ್ವೈತಭಾವವು ಪ್ರಾದುರ್ಭವಿಸಿರಲಿಲ್ಲ; ಈರ್ವರೂ ಒಡಹುಟ್ಟಿದವರಂತೆ ಪ್ರೇಮಭಾವದಿಂದ ನಡೆದುಕೊಳ್ಳುತ್ತಿದ್ದರು. ರಾಜಸಬಾಯಿಯು ತಾರಾಬಾಯಿಯಷ್ಟು ರಾಜಕಾರಣತಜ್ಞಳಿರದ್ದರಿಂದಲೂ, ಅವಳಲ್ಲಿ ಹೆಚ್ಚಿನ ಕರ್ತೃತ್ವಶಕ್ತಿಯಿಲ್ಲದ್ದರಿಂದಲೂ ತನ್ನ ಮಗನಾದ ಸಂಭಾ ಜಿಗೆ ರಾಜ್ಯವು ದೊರೆಯಬೇಕೆಂದು ಸ್ವಪ್ನದಲ್ಲಿ ಸಹ ಇಚ್ಛಿಸುತ್ತಿದ್ದಿಲ್ಲ. ಶಿವಾಜಿ ಯಂತೆ ನಿನ್ನ ಮಗನಾದರೂ ಸ್ವರಾಜ್ಯಕ್ಕೆ ಅಧಿಕಾರಿಯಾಗಬೇಕೆಂದು ತನ್ನ ಇಚ್ಛೆಯಿರುವದೆಂದೂ, ಈ ವಿಷಯದಲ್ಲಿ ತನಗೆ ಸಹಾಯಮಾಡಲೊಪ್ಪಿದರೆ ರಾಜ ಪದವನ್ನು ಸಂಭಾಜಿಗೆ ದೊರಕಿಸಿಕೊಡುವೆನೆಂದೂ ಶಾಹೂರಾಜನು ಗುಪ್ತರೀತಿ ಯಿಂದ ರಾಜಸಬಾಯಿಗೆ ತಿಳಿಸಿದನು. ಕೆಲವು ದಿವಸಗಳ ವರೆಗೆ ಅವರ ಸಂಚು ನಡೆದು ಶಾಹೂರಾಜನ ಪ್ರಯತ್ನಕ್ಕೆ ಯಶಸ್ಸು ಲಭಿಸಿತು. ರಾಜಸಬಾಯಿಯು ಈ ಕಾರ್ಯಕ್ಕಾಗಿ ಮನಮುಟ್ಟಿ ಸಹಾಯ ಮಾಡಬೇಕೆಂದು ಶಾಹೂರಾಜನಿಗೆ

ನಿರೋಪ ಕಳುಹಿಸಿ ತಾರಾಬಾಯಿಯು ವಿರುದ್ಧವಾಗಿ ಒಳಸಂಚನ್ನು ಪ್ರಾರಂಭಿಸಿದಳು.

ಶಿವಾಜಿಯನ್ನು ಪದಚ್ಯುತಿಗೊಳಿಸಿ ಸಂಭಾಜಿಗೆ ರಾಜಪದವು ದೊರೆಯಬೇಕೆಂಬ ಇಚ್ಛೆಯಿಂದ ರಾಜಸಬಾಯಿಯು ಓಲಗದೊಳಗಿನ ಮಂತ್ರಿ-ಸೇನಾಪತಿಗಳಿನ್ನೂ ಎಷ್ಟೋ ಸರದಾರರನ್ನೂ ತನ್ನ ವಶಕ್ಕೆ ತೆಗೆದುಕೊಂಡಳು. ತನ್ನ ಕೆಳಗಿನ ಭೂಮಿಯು ಪೊಳ್ಳಾಗುತ್ತಲಿರುವದರ ವಾರ್ತೆಯು ತಾರಾಬಾಯಿಗೆ ತಗಲಿರಲಿಲ್ಲ. ಅವಳು ತನ್ನ ಶತ್ರುವಾದ ಶಾಹೂರಾಜನ ವಿರುದ್ಧವಾಗಿ ಅನೇಕ ವಿಧದ ಕಾರಸ್ಥಾನವನ್ನು ಪ್ರಾರಂಭಿಸಿದ್ದಳು.

ಇಷ್ಟರಲ್ಲಿ ರಾಜಸಬಾಯಿಯು ತನ್ನ ತಂತ್ರವನ್ನು ಪೂರೈಸಿದ್ದಳು. ತಾರಾಬಾಯಿಯೂ, ಅವಳ ಮಗನಾದ ಶಿವಾಜಿರಾಜನೂ, ಮೊಮ್ಮಗನಾದ ರಾಮರಾಜನೂ, ಅವಳ ಇಬ್ಬರು ಸೊಸೆಯಂದಿರಾದ ಪಾರ್ವತಿಬಾಯಿ ಭವಾನಿಬಾಯಿಯವರೂ ಪನ್ಹಾಳಗಡದ ಅರಮನೆಯಲ್ಲಿ ಇರುತ್ತಿದ್ದರು. ಅಲ್ಲಿ ತಾರಾಬಾಯಿಯ ಪಕ್ಷದವರೊಬ್ಬರಾದರೂ ಇದ್ದಿಲ್ಲ. ಎಲ್ಲ ಜನರನ್ನು ರಾಜಸಬಾಯಿಯು ತನ್ನ ಪಕ್ಷಕ್ಕೆ ತೆಗೆದುಕೊಂಡಿದ್ದಳು. ಪರಿಸ್ಥಿತಿಯು ಹೀಗಾಗಿದ್ದರೂ ತಾರಾಬಾಯಿಯು ಈ ಕಾರಸ್ಥಾನವನ್ನು ಅರಿಯದವಳಾಗಿದ್ದಳು. ರಾಜಸಬಾಯಿಗೆ ದೈವಾನುಕೂಲವಿದ್ದುದರಿಂದ, ಧೂರ್ತಳಾದ ತಾರಾಬಾಯಿಯ ವಿರುದ್ಧವಾಗಿ ಸಂಚು ನಡೆಯಿಸಿ ಯಶಸ್ವಿಯಾಗಿದ್ದಳು ಪನ್ಹಾಳಗಡದಲ್ಲಿದ್ದ ಸೇನೆಯನ್ನೂ ಸೇನಾನಾಯಕರನ್ನೂ ಅವಳು ತನ್ನ ಕಡೆಗೆ ಎಳೆದುಕೊಂಡದ್ದರಿಂದ, ಬೇಕಾದಂತಹ ಕಾರ್ಯವನ್ನಾದರೂ ಈಡೇರಿಸುವದಕ್ಕೆ ಅವಳು ಸಮರ್ಥಳಾಗಿದ್ದಳು. ಈಗ ಅವಳು ತಾರಾಬಾಯಿಯ ಪರಿವಾರವನ್ನು ಸೆರೆಹಿಡಿಯುವದಕ್ಕಾಗಿ ಸೇನಾಪತಿಗೆ ಆಜ್ಞಾಪಿಸಿದಳು. ಕೂಡಲೆ ಆ ಸೇನಾಪತಿಯು ಅರಮನೆಗೆ ಮುತ್ತಿಗೆ ಹಾಕಿ ರಾಜಪರಿವಾರವನ್ನು ಸ್ವಾಧೀನಪಡಿಸಿಕೊಂಡನು! ಶಾಹೂರಾಜನು ಬೇಕಾದಷ್ಟು ಹೋರಾಡಿದ್ದರೂ ಆಗದಂತಹ ಕಾರ್ಯವು ಅವನ ಭೇದನೀತಿಯಿಂದ ಸಾಧಿಸಿತು. ತಾರಾಬಾಯಿಯೂ ರಾಜನಾದ ಶಿವಾಜಿಯೂ ಅವನ ಪತ್ನಿ-ಪುತ್ರರೂ ಕಾರಾಗೃಹವನ್ನು ಸೇರಿದರು. ಸ್ವಲ್ಪ ವೇಳೆಯ ಹಿಂದೆ ರಾಜಪದಸೌಖ್ಯವನ್ನನುಭವಿಸುತ್ತಿದ್ದ ರಾಜಪರಿವಾರವು ದೈವದ ವಿಚಿತ್ರ ಯೋಗಾಯೋಗದಿಂದ ಸೆರೆಮನೆಯ ಸಂಗಡಿಗರಾಗಬೇಕಾಯಿತು!

# ಪರದುಃಖವು ಶೀತಲವು.

ರಾಜಸಬಾಯಿಯು ಕಾರಸ್ಥಾನವು ಸಫಲವಾಗಿ ಅವಳ ಪುತ್ರನಾದ ಸಂಭಾಜಿ ರಾಜನು ಸ್ವರಾಜ್ಯಕ್ಕೆ ಅಧಿಕಾರಿಯಾದನು. ತಾರಾಬಾಯಿಯು ರಾಜಸಬಾಯಿಗಿಂತ ಹೆಚ್ಚಿನ ಮಹತ್ವಾಕಾಂಕ್ಷೆಯುವಳೂ ತಂತ್ರಗಾರಳೂ ಆಗಿದ್ದಳಷ್ಟೆ? ಅವಳು ರಾಜಸಬಾಯಿಯಲ್ಲಿ ಯಾವ ಬಗೆಯ ಸಂಶಯವಿಲ್ಲದವಳಾದುದರಿಂದಲೂ, ಅವಳ ವಿಷಯದಲ್ಲಿ ನಿರ್ಮಲಾಂತಃಕರಣೆಯಿದ್ದುದರಿಂದಲೂ ಇಲ್ಲದ ವಿಕಲ್ಪಗಳಿಗೆ ಅವಳಲ್ಲಿ ಸ್ಥಳವು ದೊರೆಯುವಂತಿರಲಿಲ್ಲ. ಒಮ್ಮೆಲೆ ಸೆರೆಯಾಳಾದ ಮೇಲೆ ಅವಳು ರಾಜಸಬಾಯಿಯ ಕೃಷ್ಣಹೃದಯದ ಭೀಷಣ ಚಿತ್ರವನ್ನು ನೋಡಿದಳು. ಅವಳು ಈಗ ಬಲೆಯಲ್ಲಿ ಸಿಲುಕಿದ ಸಿಂಹಿಣಿಯಂತೆ ಚಡಪಡಿಸತೊಡಗಿದ್ದಳು. ಕಪಟದಿಂದ ತನ್ನನ್ನು ಬಂಧಿಸಿದ ರಾಜಸಬಾಯಿಯ ನಾಶಕ್ಕಾಗಿ ಅವಳು ಕಾರಾಗೃಹವಾಸದಲ್ಲಿಯೇ ಹಂಚಿಕೆ ಹಾಕತೊಡಗಿದ್ದಳು. ತಾರಾಬಾಯಿಯ ಮಗನಾದ ಶಿವಾಜಿರಾಜನಿಗೆ ಇಬ್ಬರು ಹೆಂಡಂದಿರಿದ್ದರು. ಹಿರಿಯ ಹೆಂಡತಿಯ ಹೆಸರು ಪಾರ್ವತೀಬಾಯಿ; ಭವಾನೀಬಾಯಿಯೆಂಬವಳು ಚಿಕ್ಕ ಹೆಂಡತಿಯು. ಪಾರ್ವತೀಬಾಯಿಗೆ ಇಬ್ಬರು ಗಂಡುಮಕ್ಕಳಿದ್ದರು. ಹಿರಿಯ ಮಗನನ್ನು ರಾಜಸಬಾಯಿಯು ಮೋಸದಿಂದ ಕೊಲ್ಲಿಸಿದಳೆಂದು ಲೋಕಪ್ರವಾದವಿತ್ತು. ಅವಳ ಚಿಕ್ಕಮಗನ ಹೆಸರು ರಾಮರಾಜನೆಂದಿತ್ತು, ಮೇಲೆ ಮೇಲೆ ವಿಶ್ವಾಸವನ್ನು ತೋರಿಸುತ್ತ ಕರಳಲ್ಲಿ ಕತ್ತರಿಯನ್ನಾಡಿಸುವ ರಾಜಸಬಾಯಿಯು ಹತ್ತು ತಿಂಗಳ ಬಾಲಕನಾದ ರಾಮರಾಜನನ್ನು ಎಲ್ಲಿ ಕೊಲೆಮಾಡಿಸುವಳೋ ಎಂದು ತಾರಾಬಾಯಿಯು ಅಂಜಿದ್ದಳು.

ಪನ್ಹಾಳಗಡದ ಮೇಲಿನ ಒಂದು ಹಳೆಯ ಮಂದಿರದಲ್ಲಿ ರಾಜಪರಿವಾರವು ಬಂಧಿಸಿಡಲ್ಪಟ್ಟಿತ್ತು. ರಾಜಸಬಾಯಿಯು ತನ್ನ ವಿಶ್ವಾಸದೊಳಗಿನ ಜನರನ್ನು ಕಾವಲಿಗಾಗಿ ಇರಿಸಿಳಿದ್ದಳು. ಪಾತಾಳಯಂತ್ರಿಯಾದ ತಾರಾಬಾಯಿಯು ಯಾವ ವೇಳೆಯಲ್ಲಿ ಏನು ತಂತ್ರ ಮಾಡುವಳೆಂಬದರ ನಿಯಮವಿಲ್ಲದ್ದರಿಂದ ಅವಳು ಬಹಳವಾಗಿ ಬೆದರಿದ್ದಳು. ಹೊರಗಿನವರಾರೂ ಒಳಗೆ ಹೋಗಕೂಡದೆಂದೂ, ಒಳಗಿನವರು ಹೊರಗೆ ಬರಕೂಡದೆಂದೂ, ಅವಳು ಕಾವಲುಗಾರರಿಗೆ ಬಿಗಿ ಮಾಡಿದ್ದಳು. ಯಾವ ಕಾರಣದಿಂದಾಗಲಿ ಕಾವಲಿನಲ್ಲಿ ಶಿಥಿಲತೆಯುಂಟಾಗಿ ಅವ್ಯವಸ್ಥೆಯಾದರೆ ದೇಹಾಂತಶಾಸನವು ವಿಧಿಸಲ್ಪಡುವದೆಂದು ಅವರಿಗೆ ರಾಜಸ

ಬಾಯಿಯು ನಿಷ್ಠುರವಾದ ಆಜ್ಞೆಯನ್ನು ತಿಳಿಸಿದ್ದಳು. ರಾಜಪರಿವಾರವು ಇಂತಹ ಬಂಧನದಲ್ಲಿದ್ದರೂ ಅವರಿಗೆ ಯಥೋಚಿತವಾದ ಮಾನ-ಮರ್ಯಾದೆಗಳು ನಡೆಯಿಸಲ್ಪಡುತ್ತಿದ್ದವು. ಪ್ರತಿಯೊಬ್ಬ ದಾಸದಾಸಿಯರು ಅವರೊಡನೆ ಮರ್ಯಾದೆಯಿಂದಲೂ, ವಿನಯದಿಂದಲೂ ನಡೆದುಕೊಳ್ಳಬೇಕೆಂದು ರಾಜಸಬಾಯಿಯು ಎಲ್ಲ ಸೇವಕ ಸೇವಕಿಯರಿಗೆ ತಿಳಿಸಿದ್ದಳು. ತಾರಾಬಾಯಿಯು ಅತ್ಯಂತ ಕಟ್ಟುನಿಟ್ಟಿನ ಸ್ವಭಾವದವಳಿದ್ದಳು. ತಾನು ಬಂಧನದಲ್ಲಿ ಸಿಲುಕಿದೆನೆಂದು ಅವಳು ಎಂದೂ ದುಃಖವನ್ನು ಪ್ರಕಟಿಸಲಿಲ್ಲ; ಬಾಹ್ಯತಃ ಆನಂದವನ್ನೇ ಪ್ರದರ್ಶಿಸುತ್ತಿದ್ದಳು. ಮಾನಿಗಳೂ ಮಹತ್ವಾಕಾಂಕ್ಷಿಯವರೂ ಆದ ಜನರ ಸ್ವಭಾವಧರ್ಮವೇ ಹೀಗಿರುತ್ತದೆ. ಅವರು ಎಂಥ ವಿಪನ್ನಾವಸ್ಥೆಯಲ್ಲಿ ಸಹ ತಮ್ಮ ದೈನ್ಯವನ್ನು ಹೊರಪಡಿಸುತ್ತಿರುವದಿಲ್ಲ. ತಾರಾಬಾಯಿಯಾದರೂ ಇದೇ ತರದವಳಿದ್ದಳು. ದೈನ್ಯವನ್ನು ತೋರಿಸಿಯಾಗಲಿ, ವಿನಯದಿಂದ ಪ್ರಾರ್ಥಿಸಿಯಾಗಲಿ, ಸೌಖ್ಯ ಹೊಂದಬೇಕೆಂದು ಅವಳು ಕನಸಿನಲ್ಲಿ ಸಹ ನೆನಸಿರಲಿಲ್ಲ. ಈ ಸಂಧಿಯಲ್ಲಿ ತಾರಾಬಾಯಿಯ ಮಗನಾದ ಶಿವಾಜಿರಾಜನು ಮೈಲಿಯ ಬೇನೆಯಿಂದ ಮಡಿದದ್ದರಿಂದ ಅವಳ ದುಃಖವು ಶತಗುಣಿತವಾಯಿತು.

ಬಾಲರಾಜನಾದ ರಾಮರಾಜನು-ಶಿವಾಜಿರಾಜನ ಪುತ್ರನು-ಈಗೆರಡು ದಿನಗಳಿಂದ ಅಸ್ವಸ್ಥನಾದುದರಿಂದ ಸೆರೆಯಲ್ಲಿದ್ದ ರಾಜಪರಿವಾರವೆಲ್ಲವು ಚಿಂತಾತುರವಾಗಿತ್ತು. ಅವನ ಮೈಯಲ್ಲಿ ಜ್ವರದ ಶಕ್ತಿಯು ಭಯಂಕರವಾಗಿ ಬೆಳೆದಿರುವದೆಂದೂ, ಅದರಿಂದ ಅವನು ಸ್ತನಪಾನ ಮಾಡುವದಿಲ್ಲವೆಂದೂ ಪನ್ಹಾಳಗಡದ ತುಂಬ ದಟ್ಟವಾದ ವಾರ್ತೆಯು ಹಬ್ಬಿತ್ತು. ಈ ಬೇನೆಯಿಂದ ಬಾಲರಾಜನು ಉಳಿದರೆ ಪೂರ್ವಜನ್ಮವಾದಂತೆಯೇ ಎಂದು ಎಷ್ಟೋ ಜನರು ಅನ್ನತೊಡಗಿದ್ದರು. ಈ ಸಂಗತಿಯನ್ನು ಕೇಳಿ ತಾರಾಬಾಯಿಯ ಪಕ್ಷಪಾತಿಗಳು ಬಹಳವಾಗಿ ಕ್ಲೇಶಗೊಂಡು, ತಮ್ಮ ಒಡೆಯನನ್ನು ಕಾಪಾಡಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸತೊಡಗಿದರು. ರಾಜಸಬಾಯಿಯ ಪಕ್ಷದ ಜನರು ಈ ಸಂಗತಿಯಿಂದ ಸಂಭ್ರಮಗೊಂಡಿದ್ದರು. ಈಶಸಂಕೇತದಿಂದ ಬಾಲರಾಜನು ಇಹಲೋಕವನ್ನು ಬಿಟ್ಟು ತೆರಳಿದರೆ ತಮ್ಮ ಮಾರ್ಗದೊಳಗಿನ ಕಂಟಕಪರಿಹಾರವಾಗುವದೆಂದು ಅವರು ಮಾತನಾಡತೊಡಗಿದ್ದರು. ರಾಜಸಬಾಯಿಯೂ ಬಾಲರಾಜನ ಅಸ್ವಸ್ಥತೆಯಬಗ್ಗೆ ಬಹಿರಂಗದಲ್ಲಿ ಔದಾಸೀನ್ಯವನ್ನು ಪ್ರಕಟಿಸುತ್ತ ಔಷಧೋಪಚಾರವನ್ನು ನಡೆಯಿಸಿರುವ ಆಡಂಬರವನ್ನು ತೋರಿಸತೊಡಗಿದ್ದಳು.

ರಾಜವೈದ್ಯರ ಔಷಧೋಪಚಾರವೂ, ಬ್ರಾಹ್ಮಣರ ಅನುಷ್ಠಾನ-ಅಭಿಷೇಕಗಳೂ ಯಥಾಸ್ಥಿತವಾಗಿ ಸಾಗಿದ್ದವು. ಇಷ್ಟಾದರೂ ಬಾಲರಾಜನ ಪ್ರಕೃತಿಯು ದಿನ ದಿನಕ್ಕೆ ಹೆಚ್ಚುಹೆಚ್ಚಿಗೆ ಕೆಡತೊಡಗಿರುವದೆಂದು ದುರ್ಗದ ತುಂಬ ಸುದ್ದಿಯು ಹಬ್ಬಿತ್ತು. ಪ್ರತಿಯೊಬ್ಬರ ಮುಖದಲ್ಲಿ ಕೃತ್ರಿಮ ಹಾಗು ಅಕೃತ್ರಿಮವಾದ ವಿಷಾದದ ಛಾಯೆಯು ಪಸರಿಸಿತ್ತು. ಅವನು ಇಂಥ ದುರ್ಘಟವಾದ ಬೇನೆಯಿಂದ ಉಳಿದರೆ, ತಿರುಗಿ ಹುಟ್ಟಿಬಂದಂತಾಗುವದೆಂದು ಜನರು ಮಾತನಾಡತೊಡಗಿದ್ದರು.

ಪ್ರಭಾತ ಸಮಯ. ಜಗಚ್ಚಕ್ಷುವಾದ ಸವಿತಾಸೂರ್ಯನಾರಾಯಣನು ಅದೇ ಉದಯಹೊಂದಿದ್ದನು. ಉದಯೋನ್ಮುಖನಾದ ಸೂರ್ಯನ ಕಿರಣಗಳಿಂದ ಹರಿತವರ್ಣದ ವನಶ್ರೀಯ ನೈಸರ್ಗಿಕ ಶೋಭೆಯು ದ್ವಿಗುಣಿತವಾಗಿತ್ತು. ಮಂದಲಹರಿಯ ಶೀತಲ ಮಾರುತನು ವನ್ಯಪುಷ್ಪಗಳ ಸುಗಂಧವನ್ನು ನಾಲ್ಕೂ ಕಡೆಗೆ ಬೀರಿದ್ದರಿಂದ, ಪನ್ಹಾಳಗಡದ ಆಸಮಂತಾತ್ ಪ್ರದೇಶವು ಸುಗಂಧಮಯ ವಾಗಿತ್ತು. ಚಿತ್ರವಿಚಿತ್ರಕುಸುಮಗಳಿಂದಲೂ ಶ್ರುತಿಮನೋಹರವಾಗಿ ಹಾಡುವ ಕೀರಕೋಕಿಲೆಗಳ ವಸತಿಯಿಂದಲೂ ವನಸುಂದರಿಯ ಸೊಬಗು ಹೆಚ್ಚಾದ್ದರಿಂದ ಮನಸ್ಸು ಆಹ್ಲಾದಗೊಳ್ಳುತ್ತಿತ್ತು. ಇಂತಹ ಪ್ರಶಾಂತ ಸಮಯದಲ್ಲಿ ರಾಜ ಪರಿವಾರದ ಕಾರಾಗೃಹದಿಂದ ಒಬ್ಬ ಗವಳಿತಿಯು ಹೊರಬಿದ್ದಳು. ಅವಳು ತನ್ನ ತಲೆಯ ಮೇಲೆ ಒಂದು ದೊಡ್ಡ ಪುಟ್ಟಿಯನ್ನು ಹೊತ್ತಿದ್ದಳು. ಅವಳು ನಿತ್ಯದಲ್ಲಿಯೂ ದುರ್ಗದಲ್ಲಿಯ ಜನರಿಗೆ ಹಾಲು ತುಪ್ಪಗಳನ್ನು ಒಯ್ದು ಕೊಡುವವಳಾದ್ದರಿಂದ, ಅವಳು ಎಲ್ಲರಿಗೂ ಪರಿಚಯದವಳಾಗಿದ್ದಳು. ಅವಳಿಗೆ ಬೇಕಾದಲ್ಲಿ ಹೋಗಿಬರುವದಕ್ಕೆ ನಿರಾತಂಕವಿತ್ತು. ಅವಳು ಸವಿಮಾತಿನವಳಾದ್ದರಿಂದ, ಸೇವಕರನ್ನು ಮೊದಲುಮಾಡಿಕೊಂಡು ಸರದಾರ ಸಾಮಂತರ ವರೆಗೆ ಎಲ್ಲರಿಗೂ ಬೇಕಾಗಿದ್ದಳು. ಅವಳು ಇಳಿಕೆಯ ವಯಸ್ಸಿನವಳಿದ್ದುದರಿಂದ ಎಲ್ಲರೂ ಅವಳಿಗೆ ಮರ್ಯಾದೆ ಕೊಡುತ್ತಿದ್ದರು; ಹಾಗು ಅವಳೊಡನೆ ಮನಬಿಚ್ಚಿ ಮಾತನಾಡುತ್ತಿದ್ದರು. ಆ ಗವಳಿತಿಯ ಹೆಸರು ಸಗುಣಾಬಾಯಿಯೆಂದಿದ್ದು ಎಲ್ಲರೂ ಸಗುಣಮ್ಮ ನೆಂದು ಅವಳನ್ನು ಸಂಬೋಧಿಸುತ್ತಿದ್ದರು.

ಸಗುಣಮ್ಮನು ಕಾರಾಗೃಹದಿಂದ ಹೊರಬಿದ್ದಕೂಡಲೆ, ಸೇವಕಪರಿವಾರವು ಅವಳೊಡನೆ ವಿನೋದಕ್ಕಾರಂಭಿಸಿತು. "ಸಗುಣಮ್ಮಾ, ಇಂದು ನೀನು ಹಾಲಿನಲ್ಲಿ ನೀರು ಕೂಡಿಸಿ ತಂದಿರುವೆಯೊ? ಅಥವಾ ನೀರಲ್ಲಿಯೇ ಸ್ವಲ್ಪ ಹಾಲು ಕೂಡಿಸಿರುವೆಯೋ?" ಎಂದು ಒಬ್ಬ ಸೇವಕನು ನುಡಿಯಲು, ಮತ್ತೊಬ್ಬ

ಕಾವಲುಗಾರನು, "ಸಗುಣಮ್ಮನ ತುಪ್ಪವು ಬಹು ಕಂಪು! ನಿನ್ನೆ ಇವಳು ನನಗೆ ತುಪ್ಪವನ್ನು ಕೊಟ್ಟಿದ್ದಳು; ಅದು ಔಡಲೆಣ್ಣೆಯನ್ನು ಮರೆಯಿಸುವಂತಹದಿತ್ತು!" ಹೀಗೆ ಸೇವಕ ಜನರೂ ಕಾವಲುಗಾರರೂ ಅವಳಿಗೆ ವಿನೋದ ಗೈಯುತ್ತಿರಲು ಅವಳು, "ನಾಳೆ ಚಲೋ ಹಾಲು ತುಪ್ಪಗಳನ್ನು ತಂದುಕೊಡುವೆನು" ಎಂದು ಹೇಳುತ್ತಲೂ, ಮತ್ತೊಬ್ಬನಿಗೆ "ಉತ್ತಮವಾದ ಹೊಸಬೆಣ್ಣೆಯನ್ನು ತಂದುಕೊಡುವೆನು" ಎಂದು ಆಶ್ವಾಸನೆ ಕೊಡುತ್ತಲೂ ಸಾಗಿದ್ದಳು. ಆಗ ಮತ್ತೊಬ್ಬ ಕಾವಲುಗಾರನು,

"ಸಗುಣಮ್ಮಾ, ಇಂದು ದೊಡ್ಡ ಪುಟ್ಟಿಯನ್ನು ಹೊತ್ತಿರುವೆ? ಬಹಳ ಹಾಲು-ತುಪ್ಪಗಳನ್ನು ತಂದಿರುವೆಯೇನು? ಇಳಿಸು; ಪುಟ್ಟಿಯನ್ನು ಕೆಳಗಿಳಿಸು. ನನಗೊಂದು ಬೆಣ್ಣೆಯ ಉಂಡಿಯನ್ನು ಕೊಟ್ಟಹೊರತು ನಾನು ನಿನ್ನನ್ನು ಬಿಡುವದಿಲ್ಲ" ಎಂದು ಅವನು ನಗುತ್ತ ನುಡಿಯಲು, ಆ ಗವಳಿತಿಯು ಮನದಲ್ಲಿ ಗಾಬರಿಗೊಂಡಳು. ಆದರೂ ಅವಳು ಯಾವ ಬಗೆಯ ವಿಕಾರವನ್ನು ತೋರಿಸದೆ, "ಸಿಪಾಯಿದಾದಾ, ನಾಳೆ ನಿನಗೆ ಬೆಣ್ಣೆಯನ್ನು ತರುವೆನು. ಇಂದು ನನ್ನಲ್ಲಿ ಯಾವ ಜಿನಸೂ ಉಳಿದಿಲ್ಲ."

"ನೀನು ಸುಳ್ಳೇ ಹೇಳುವೆ. ಪುಟ್ಟಿಯನ್ನಂತೂ ಕೆಳಗಿಳಿಸು; ನೋಡೋಣ." ಸೇವಕನು ಹೀಗೆ ನುಡಿದ ಕೂಡಲೆ ಸಗುಣಾಬಾಯಿಯು ಮತ್ತಿಷ್ಟು ಬೆದರಿದಳು. ಆಗ ಅವಳು ಸಿಟ್ಟಿನ ಆವಿರ್ಭಾವವನ್ನು ತೋರಿಸುತ್ತ—"ಯಾವಾಗಲೂ ಹೀಗೆಯೇ ವಿನೋದ ಮಾಡಬೇಕೇನು? ಭೂರಿವೇತನದಿಂದ ಕೊಬ್ಬಿದವರಾದ ಸೇವಕವರ್ಗಕ್ಕೆ ಯಾವ ಚಿಂತೆಯಿರಬೇಕು? ನೀವು ಯಾವಾಗಲೂ ಚೇಷ್ಟೆಗೈಯುತ್ತ ವೇಳೆಗಳೆಯುವವರೇ ಸರಿ! ಬಾಲರಾಜರು ಬೇನೆಯಿಂದ ತೀರ ಅಂತಿಮ ಸ್ಥಿತಿಯಲ್ಲಿರಲು ಸೇವಕ ಪರಿವಾರಕ್ಕೆ ಅದರ ಪರಿವೆಯೇ ಇಲ್ಲ. ಆನಂದದಲ್ಲಿದ್ದಾಗ ವಿನೋದ ಗೈಯಲಿಕ್ಕೆ ಯಾರು ಬೇಡವೆನ್ನುವರು? ಸರಿ! ಹುಡುಗಾಟಿಕೆ ಮಾಡಬೇಡ' ಎಂದು ಅವಳು ಅವನನ್ನು ಬೆದರಿಸಿ ಮುಂದೆ ಸಾಗಿದಳು. ಸೇವಕನು ಪುಟ್ಟಿಯನ್ನು ಕೆಳಗಿಳಿಸ ಹೇಳಿದ ಕೂಡಲೆ, ಅವಳು ಅಷ್ಟೊಂದು ಬೆದರಿದ ಕಾರಣವೇನಿರಬಹುದು? ಇರಬಹುದು; ಯಾವದೊಂದು ಕಾರಣವಿರಬಹುದು. ಅಂತೆಯೇ ಅವಳು ತನ್ನ ಪುಟ್ಟಿಯನ್ನು ಕೆಳಗಿಳಿಸದೆ ಸೇವಕನನ್ನು ಬೆದರಿಸಿದಳು.

ಸಗುಣಾಗವಳಿತಿಯು ದುರ್ಗವನ್ನಿಳಿದು ಹೋದಬಳಿಕ, ಒಂದೆರಡು ಗಳಿಗೆಯ ಮೇಲೆ ಕಾರಾಗೃಹದಲ್ಲಿ ಶೋಚನೀಯವಾದ ಕೋಲಾಹಲವೆದ್ದಿತು.

ಶಿವಾಜಿ ರಾಜನ ಪುತ್ರನಾದ ರಾಮರಾಜನು ಎಲ್ಲ ಸ್ವಕೀಯರನ್ನು ದುಃಖಾಬ್ಧಿಯಲ್ಲಿ
ಕೆಡಹಿ ಅಮರಧಾಮಕ್ಕೆ ತೆರಳಿದ ವಾರ್ತೆಯು ಕೆಲವು ನಿಮಿಷಗಳಲ್ಲಿ ದುರ್ಗದ
ತುಂಬ ಪಸರಿಸಿತು. ಆಗ ಕೆಲವು ದೊಡ್ಡ ಮನೆತನದ ಸ್ತ್ರೀಯರು ಅಲ್ಲಿಗೆ ಹೋಗಿ
ತಾರಾಬಾಯಿ ಪಾರ್ವತೀಬಾಯಿ ಭವಾನೀಬಾಯಿಯವರನ್ನು ಸಂತೈಸತೊಡಗಿ
ದರು. ಎಷ್ಟೋ ಸ್ತ್ರೀಯರು ಮೃತಬಾಲಕನ ಸೌಂದರ್ಯವನ್ನೂ ಬಾಲೋಚಿ
ತವಾದ ಅವನ ಗತಕಾಲದ ಕ್ರೀಡೆಗಳನ್ನೂ ವರ್ಣಿಸುತ್ತ ದುಃಖಿಸತೊಡಗಿದ್ದರು.
ಆಗ ತಾರಾಬಾಯಿಯು ಕಲ್ಲು ಕರಗುವಂತೆ ಶೋಕಮಾಡತೊಡಗಿದ್ದಳು. ಆಗ
ಅವಳು, "ಬಾಲರಾಜಾ, ನಮ್ಮ ಆಶಾತಂತುಗಳನ್ನು ಹರಿದು ಹೋಗಿ ಬಿಟ್ಟೆ
ಯಾ! ಇನ್ನು ನಾವು ಯಾವ ಆಶೆಯಿಂದ ಜೀವಿಸಬೇಕು! ದುಷ್ಟನಾದ ಅಂತ
ಕನೇ, ಒಬ್ಬನೇ ಒಬ್ಬನಾದ ನನ್ನ ಚಿಕ್ಕ ಅರ್ಭಕನಲ್ಲಿ ನಿನಗೆ ದಯ ಹುಟ್ಟಲಿಲ್ಲವೆ?
ಬಾಲಾ, ರಾಮರಾಜಾ! ಸಗುಣಮ್ಮನು ಹಾಲುಕೊಟ್ಟು ಇದೇ ಹೋಗಿರುವಳು.
ಕುಡಿಯೇಳಪ್ಪಾ! ಅಯ್ಯೋ! ದೈವವೇ! ವಿಪನ್ನಾವಸ್ಥೆಯಲ್ಲಿದ್ದ ನಮ್ಮನ್ನು
ಮತ್ತಿಷ್ಟು ದುಃಖಾಗ್ನಿಯಲ್ಲಿ ಕೆಡಹಿದೆಯಾ!" ಎಂದು ಎದೆ ಎದೆ ಬಡೆದುಕೊಂಡು
ರೋದಿಸತೊಡಗಿದ್ದಳು.

ಈ ದುಃಖದ ಪ್ರಸಂಗದಲ್ಲಿ ರಾಜಸಬಾಯಿಯಾದರೂ ಶೋಕ ಮಾಡ
ತೊಡಗಿದ್ದಳು. ಅವಳ ಕಪಟನಾಟಕವನ್ನು ನೋಡಿ ಎಲ್ಲ ಜನರು ಅವಳನ್ನು
ಮನಸ್ಸಿನಲ್ಲಿ ನಿಂದಿಸತೊಡಗಿದ್ದರು. ಬಾಲರಾಜನ ಮರಣವು ಅವಳಿಗೆ ಒಳ್ಳೆ
ಯ ಆನಂದದಾಯಕವಾಗಿತ್ತು. ಯಾರ ನಾಶಕ್ಕಾಗಿ ಅವಳು ಯತ್ನಿಸುತ್ತಿದ್ದ
ಳೋ ಆ ಕಾರ್ಯವು ಅನಾಯಾಸವಾಗಿ ಸಿದ್ಧಿಸಿದ್ದರಿಂದ, ಅವಳು ಆನಂದಸಾಗರ
ದಲ್ಲಿ ಮುಳುಗಿರುವಳೆಂದು ಎಲ್ಲ ಜನರು ತಮ್ಮ ತಮ್ಮೊಳಗೆ ಮಾತನಾಡತೊಡಗಿ
ದ್ದರು. ಬಾಲರಾಜನ ಮರಣವು ರಾಜಸಬಾಯಿಗೂ ಅವರ ಪರಿವಾರಕ್ಕೂ
ಆನಂದದಾಯಕವಾಗಿತ್ತೆಂಬದರಲ್ಲಿ ಸಂದೇಹವಿಲ್ಲ. ಸಹಾನುಭೂತಿ ಸಹಿಷ್ಣುತೆ
ಗಳಿಲ್ಲದ ಕಠೋರ ಹೃದಯದವರು ಎರಡನೆಯವರ ದುಃಖದಿಂದ 'ಪರದುಃಖ
ಶೀತಲ' ಎಂಬಂತೆ ಸಂತೋಷವುಳ್ಳವರಾಗಿದ್ದರೆ ವಿಸ್ಮಯವಲ್ಲ.

ಬಾಲರಾಜನ ತಾಯಿಯಾದ ಪಾರ್ವತೀಬಾಯಿಯು ಪುತ್ರನ ಮರಣದಿಂದ
ಘೋರಿಟ್ಟು ಪ್ರಲಾಪಿಸತೊಡಗಿದ್ದಳು. 'ತಾಯಿಯ ಹೊಟ್ಟೆಯುರಿಯಿತು'
ಎಂದು ಜನರು ಮರಮರನೆ ಮರುಗತೊಡಗಿದ್ದರು. 'ನೀವು ದುರ್ದೈವಿಗಳಾದು
ದರಿಂದಲೇ, ನಿಮ್ಮ ಕುಮಾರನು ಅಲ್ಪಾಯುಷಿಯಾದನೆ'ಂದು ಅವರು ಪಾರ್ವತೀ

ಬಾಯಿಯನ್ನು ಸಂತೈಸತೊಡಗಿದ್ದರು. ಪತಿಯ ಮರಣ ದುಃಖದಿಂದ ಬೆಂದು ಬೆಂದಾದ ಅವಳ ಹೃದಯವು ಪುತ್ರಮರಣದ ಹೊಸ ಚಿಂತಾಗ್ನಿಯಿಂದ ಮತ್ತಷ್ಟು ದಹಿಸತೊಡಗಿತ್ತೆಂದು ಜನರು ಮಾತನಾಡತೊಡಗಿದರು. 'ಶವವು ಕಣ್ಣೆದುರಿನಲ್ಲಿರುವವರೆಗೆ ದುಃಖಶಮನವಾಗುವದಿಲ್ಲವಾದ್ದರಿಂದ ಅದನ್ನು ತೆಗೆದು ಕೊಂಡು ಹೋಗುವದಕ್ಕಾಗಿ ಅನುಭವಿಕ ಸ್ತ್ರೀಯರು ಸೂಚಿಸಿದರು. ಕೂಡಲೆ ಜನರು ತಾರಾಬಾಯಿಯ ತೊಡೆಯ ಮೇಲಿನ ಶವವನ್ನು ಆಗ್ರಹದಿಂದತೆಗೆದು ಕೊಂಡು ಅಲ್ಲಿಂದ ಒಯ್ದರು.

ಒಬ್ಬ ಪ್ರಬಲವಾದ ಶತ್ರುವಿನ ನಾಶದಿಂದಾಗುವಷ್ಟು ಆನಂದವು ರಾಜಸ ಬಾಯಿಗಾಗಿತ್ತು. ಕಾರಾಗೃಹದಲ್ಲಿ ಬಾಲರಾಜನ ಅಸ್ತಿತ್ವವಿಲ್ಲದ್ದನ್ನು ಅವಳು ಕಣ್ತುಂಬ ನೋಡಿ ಹಿರಿ ಹಿರಿ ಹಿಗ್ಗುತ್ತ ತನ್ನ ಅರಮನೆಯ ಕಡೆಗೆ ನಡೆದಳು. 'ಪರದುಃಖಶೀತಲ' ಎಂಬ ಸ್ಥಿತಿಯವರಾದ ಕಟುಹೃದಯದ ಜನರಿಗೆ ಆ ಆನಂದಮಯವಾದ ಕಾಲವೇ ಕಡೆತನಕ ಉಳಿಯಬಹುದೇನು?

---

## ನಾಮಕರಣ.

ಬಾವಡೆ ಗ್ರಾಮದ ಪಂಡಿತ ಮನೆತನದಲ್ಲಿಯ ಶಿವರಾಮಪಂತನು ರಾಜಕಾರಣ ಪಟುವೂ ಸ್ವಾಮಿನಿಷ್ಠನೂ ಆಗಿದ್ದನು. ಇವನು ಸ್ವರಾಜ್ಯದ ಉನ್ನತಿಗಾಗಿ ಹಗಲಿರುಳು ಪ್ರಯತ್ನಿಸುತ್ತಿದ್ದನು. ಅಂತಃಕಲಹದ ಪರಮಾವಧಿಯಿಂದ ದೇಶ ದಲ್ಲಿ ಪಕ್ಷೋಪಪಕ್ಷಗಳಾಗಿ ಅದು ಬಲಹೀನವಾಗತೊಡಗಿದ್ದುದನ್ನು ನೋಡಿ, ಅವನು ಬಹಳವಾಗಿ ಚಿಂತೆಗೊಳಗಾಗಿದ್ದನು. ಎಷ್ಟೋ ಜನರು ದಿಲ್ಲಿಯ ಬಾದ ಶಹನಿಂದ ಯೋಗ್ಯತಾಪತ್ರಗಳನ್ನೂ ಇನಾಮು ಪತ್ರಗಳನ್ನೂ ಹೊಂದಿ ಶಾಹೂ ರಾಜನನ್ನು ಕೂಡ ತೊಡಗಿದ್ದರು. ಕೆಲವು ಜನರು ರಾಜಸಬಾಯಿಯ ಮಗ ನಾದ ಸಂಭಾಜಿಯ ಪಕ್ಷವನ್ನು ವಹಿಸಿದ್ದರು. ಮತ್ತೆ ಕೆಲವರು ತಾರಾಬಾ ಯಿಯ ಬಣಕ್ಕೆ ಸೇರಿದ್ದರು. ಕೆಲವರು ಈ ಶಿಥಿಲವಾದ ಕಾಲದಲ್ಲಿ ಪುಂಡತನ ಮಾಡಿ ಸ್ವಾರ್ಥಸಾಧನೆ ಮಾಡಿಕೊಳ್ಳತೊಡಗಿದ್ದರು. ರಾಜಸಬಾಯಿ ಶಾಹೂ ರಾಜರ ಕುಟಿಲ ಕಾರಸ್ಥಾನದಿಂದ ತಾರಾಬಾಯಿಯೂ ಶಿವಾಜಿರಾಜನೂ ಸೆರೆ ಯಾಳಾಗಿ ಅವರ ಪಕ್ಷವು ಬಲಹೀನವಾಗಿದ್ದರೂ, ಶಿವರಾಮ ಪಂಡಿತನಂತಹ

ರಾಜನಿಷ್ಠ ಅನುಯಾಯಿಗಳು ಅವರ ಕಲ್ಯಾಣಕ್ಕಾಗಿ ವ್ಯಾಸಕ್ತಿಯಿಲ್ಲದೆ ಪ್ರಯತ್ನಿಸ ತೊಡಗಿದ್ದರು.

ಪನ್ಹಾಳಗಡದಲ್ಲಿ ಬಾಲರಾಜನು ಮೃತಿಹೊಂದಿದ ದಿವಸದ ಮಧ್ಯರಾತ್ರಿಯ ವೇಳೆಯಲ್ಲಿ ಶಿವರಾಮ ಪಂತನು ತನ್ನ ಓಲಗದ ಕೋಣೆಯಲ್ಲಿ ಅತ್ತಿತ್ತ ತಿರುಗಾಡ ತೊಡಗಿದ್ದನು. ಅವನು ಚಿಂತಾತುರನಾಗಿದ್ದನೆಂದು ವಿಷಣ್ಣವಾದ ಅವನ ಮುಖಚರ್ಯೆಯ ಮೇಲಿಂದ ಕಂಡು ಬರುತ್ತಿತ್ತು. ಅವನು ಆಗಿಂದಾಗ ಕೋಣೆಯ ವಾತಾಯನದಲ್ಲಿ ಹಣಿಕಿ ನೋಡುತ್ತಿದ್ದನು. ಅವನು ಯಾರದೋ ಮಾರ್ಗಪ್ರತೀಕ್ಷೆ ಮಾಡುತ್ತಿದ್ದನೆಂದು ಅವನ ಆಗಿನ ಸ್ಥಿತಿಯಿಂದ ಸ್ಪಷ್ಟವಾಗಿ ತಿಳಿದುಬರುತ್ತಿತ್ತು. ಮಧ್ಯರಾತ್ರಿಯು ಮೀರುತ್ತ ಬಂದರೂ ಅವನು ಮಲಗಿಕೊಳ್ಳುವ ಹವ್ಯಾಸಕ್ಕೆ ಹೋಗಿದ್ದಿಲ್ಲ.

ಕೃಷ್ಣಪಕ್ಷದ ರಾತ್ರಿಯಾದ್ದರಿಂದ ಎಲ್ಲ ಕಡೆಯಲ್ಲಿ ನಿಬಿಡವಾದ ಅಂಧಕಾರವು ವ್ಯಾಪಿಸಿತ್ತು. ಬಾವಡೆಗ್ರಾಮದಲ್ಲಿ ಶಾಂತತಾಸಾಮ್ರಾಜ್ಯವು ಪ್ರಸ್ಥಾಪಿತವಾಗಿತ್ತು. ಶಿವರಾಮ ಪಂತನ ಪರಿವಾರವೆಲ್ಲವೂ ಗಾಢನಿದ್ರೆಗೆ ವಶವಾಗಿತ್ತು. ಕಾರ್ಯಕುತೂಹಲವುಳ್ಳ ಪಂತನು ನಿದ್ರಾದೇವಿಗೆ ಅಜೇಯನಾಗಿದ್ದನು. ಎಷ್ಟೋ ಹೊತ್ತಾದ ಮೇಲೆ ಮನುಷ್ಯರ ಕಾಲಸಪ್ಪಳವಾದಂತೆ ಅವನಿಗೆ ಭಾಸವಾಯಿತು. ಕೂಡಲೆ ಅವನು ಮತ್ತೆ ವಾತಾಯನದಲ್ಲಿ ಮುಖವಿಟ್ಟು ಹೊರಗೆ ನೋಡತೊಡಗಿದನು. ಆಗ ಅವನಿಗೆ ಇಬ್ಬರು ಮನುಷ್ಯರು ಬರುತ್ತಿರುವದು ಕಂಡಿತು. ಕೂಡಲೆ ಅವನ ಮುಖವು ಆನಂದದಿಂದ ಕಳೆಗೊಂಡಿತು. ಅವನು ತನ್ನ ಓಲಗದ ಕೋಣೆಯಿಂದ ಹೊರಗೆ ಬಂದು ಹೆಬ್ಬಾಗಿಲವನ್ನು ತೆಗೆದನು. ಅಷ್ಟರಲ್ಲಿ ಇಬ್ಬರು ಸ್ತ್ರೀಯರು ಬಾಗಿಲ ಬಳಿಗೆ ಬಂದರು. ಪಂತನು ಅವರೀರ್ವರನ್ನು ತನ್ನ ಓಲಗದ ಕೋಣೆಯಲ್ಲಿ ಕರೆದೊಯ್ದನು. ಆಗ ಅವನು ಆ ಆಗಂತುಕ ಸ್ತ್ರೀಯರನ್ನು ಕುರಿತು, "ಕಾರ್ಯಸಿದ್ಧಿಯಾಯಿತೆ?" ಎಂದು ಕೇಳಿದ ಕೂಡಲೆ ಆ ಸ್ತ್ರೀಯರೀರ್ವರೂ ಒಮ್ಮೆಲೆ—"ಭಗವದನುಗ್ರಹದಿಂದ ನಮ್ಮ ಮನಸ್ಸಿನಂತೆ ಕೆಲಸವಾಯಿತು" ಎಂದು ಆನಂದದಿಂದ ನುಡಿದರು.

ವಾಚಕಮಹಾಶಯರೇ, ಆ ಸ್ತ್ರೀಯರು ಯಾರಾಗಿರಬಹುದೆಂಬದನ್ನು ತಿಳಿದುಕೊಳ್ಳುವದಕ್ಕಾಗಿ ಮನಸ್ಸು ಉತ್ಕಂಠಿತವಾಗಿರಬಹುದಲ್ಲವೆ? ಅವರಲ್ಲೊಬ್ಬಳು ಗವಳಿತಿಯಾದ ಸಗುಣಾಬಾಯಿಯು; ಮತ್ತೊಬ್ಬಳು ಶಿವರಾಮ ಪಂತನ ಪರಿಚಾರಿಕೆಯರೊಳಗಿನ ಜನಾಬಾಯಿಯೆಂಬ ದಾಸಿಯು. ಸಗುಣಾಬಾಯಿಯು

ವಸ್ತ್ರಾಚ್ಛಾದನ ಮಾಡಿಕೊಂಡು ತಂದಿದ್ದ ಬಾಲಕನನ್ನು ಹಾಸಿಗೆಯ ಮೇಲೆ ಮಲಗಿಸಿದಳು. ಆಗ ಬಾಲಕನು ನಿದ್ರೆಗೊಳಗಾಗಿದ್ದನು. ಆಗ ಶಿವರಾಮಪಂತನು ಅವನ ಮುಖದ ಮೇಲಿನ ವಸ್ತ್ರವನ್ನು ತೆಗೆದ ಕೂಡಲೆ, ಆ ಕೂಸು ನಿದ್ರೆಯಿಂದ ಎಚ್ಚರಾಗಿ ಕಣ್ಣು ತೆರೆಯಿತು. ಕೂಡಲೆ ಅವನು ಆ ಬಾಲಕನನ್ನು ಎತ್ತಿಕೊಂಡು ಆನಂದಭರದಲ್ಲಿ ಚುಂಬಿಸಿದನು. ಆ ಮಗುವಿನ ಚಂದ್ರನಂತಹ ಮುಖವನ್ನೂ ಕಮಲದಂತಹ ನೇತ್ರಗಳನ್ನೂ ಕಾಂತಿಮಯವಾದ ಮುಖಚರ್ಯೆಯನ್ನೂ ನೋಡಿ ಅವನ ನೇತ್ರಗಳು ಆನಂದಾಶ್ರುಗಳಿಂದ ತುಂಬಿದವು. ಆಗ ಅವನು ಸದ್ಗದಿತ ಕಂಠದಿಂದ,

"ಸಗುಣಾಬಾಯಿ, ನಿನ್ನ ಕರ್ತವ್ಯ ಪ್ರಭಾವದಿಂದಲೂ ಸಾಹಸದಿಂದಲೂ ಬಾಲರಾಜನ ಪ್ರಾಪ್ತಿಯಾದದ್ದಕ್ಕೆ ನನಗೆ ಬಹಳೇ ಆನಂದವಾಗಿದೆ. ದಯಾಘನನಾದ ಪರಮಾತ್ಮನು ನಿನ್ನ ಕಲ್ಯಾಣ ಮಾಡಲಿ."

ಪಂತನ ಸ್ತುತಿಯಿಂದ ಸಗುಣಾಬಾಯಿಯು ಸಂತುಷ್ಟಳಾದಳು. ಆಗ ಅವಳು ನಿರಭಿಮಾನವನ್ನು ವ್ಯಕ್ತಪಡಿಸುತ್ತ,

"ಪಂತರೆ, ತಮ್ಮಂತಹ ಮಹಾನುಭಾವರ ಸಹಾಯವೂ ಶುಭಾಶೀರ್ವಾದವೂ ಇರದಿದ್ದರೆ, ಯಃಕಶ್ಚಿತ್ ಸ್ತ್ರೀಯಾದ ನನ್ನಿಂದ ಯಾವ ಕೆಲಸವು ನೆರವೇರುತ್ತಿತ್ತು? ಈ ಕಾರ್ಯವು ಈಡೇರುವದಕ್ಕೆ ನಿಮ್ಮ ಸಹಾಯವೂ ಪರಮಾತ್ಮನ ಅನುಗ್ರಹವೂ ಇರದಿದ್ದರೆ, ಬಾಲರಾಜನು ಇಲ್ಲಿಯವರೆಗೆ ಬರುತ್ತಿರಲಿಲ್ಲ. ರಾಜಸಬಾಯಿಯ ಬಂಧನೆಯಿಂದ ನಾನು ಬಾಲರಾಜನನ್ನು ತಂದ ಸಂಗತಿಯು ಸಾಮಾನ್ಯವಾದದ್ದಲ್ಲವೆಂಬದು ನಿಜವು. ಪರಮಾತ್ಮನು ನಮ್ಮ ಬೆಂಬಲವಾಗಿದ್ದುದರಿಂದಲೆ, ಈ ಕಾರ್ಯವು ನಿರ್ವಿಘ್ನವಾಗಿ ಕೊನೆಗಂಡಿತು. ಜಗನ್ನಿಯಾಮಕನು ನಮ್ಮೆಲ್ಲರ ಆಶೆಯನ್ನು ಸಿದ್ಧಿಪಡಿಸುವನೆಂದು ನನಗೆ ಮನೋಧೈರ್ಯವುಂಟಾಗಿರುವದು."

ಸಗುಣಾಬಾಯಿಯೂ ಶಿವರಾಮಪಂತನೂ ಹೀಗೆ ಮಾತನಾಡುವಾಗ ಜನಾಬಾಯಿಯು ಬಾಲರಾಜನಿಗೆ ಸ್ತನಪಾನ ಮಾಡಿಸುವದಕ್ಕೆ ಪ್ರಾರಂಭಿಸಿದ್ದಳು. ಹಸಿವೆಯಿಂದ ಕ್ಲಾಂತನಾದ ಅವನು ಒಳ್ಳೆಯ ಒತ್ತರದಿಂದ ಕ್ಷೀರಪಾನಮಾಡತೊಡಗಿದ್ದನು. ಇದನ್ನು ನೋಡಿ ಶಿವರಾಮಪಂತನು, "ಹತ್ತು ತಿಂಗಳ ಬಾಲಕನಾದ ಬಾಲರಾಜನ ರಕ್ಷಣೆಯು ಹೇಗಾಗುವದೆಂದು ನಾನು ಯೋಚನೆಗೊಳಗಾಗಿದ್ದೆನು. ಇವನಿಗೆ ಪಾರ್ವತೀಬಾಯಿಯವರ ಸ್ಥಳದಲ್ಲಿ ಜನಿಯು

ಲಭಿಸಿದಂತಾದಳು. ಈಗ ನನಗೆ ಅರ್ಥ ಚಿಂತೆಯು ಕಡಿಮೆಯಾಯಿತು'' ಎಂದು ಸಂಭ್ರಮದಿಂದ ನುಡಿದು,

''ಸಗುಣಾಬಾಯಿ, ಬಾಲರಾಜನ ಬಂಧವಿಮೋಚನೆಯ ಕಾರ್ಯವನ್ನು ಹೇಗೆ ಕೊನೆಗಾಣಿಸಿದೆಯೆಂಬದನ್ನು ಸಾದ್ಯಂತವಾಗಿ ಹೇಳು.''

''ಪಂತರೆ, ಈ ಕಾರ್ಯದಲ್ಲಿ ಜನಾಬಾಯಿಯ ಸಹಾಯವಿರದಿದ್ದರೆ, ನನ್ನಿಂದ ಏನೂ ಆಗುತ್ತಿದ್ದಿಲ್ಲ. ತನ್ನ ದುಃಖವನ್ನು ಮರೆತು, ಧೈರ್ಯದಿಂದ ಈ ಕಾರ್ಯಕ್ಕೆ ಸಹಾಯವಾದದ್ದು ಇವಳ ಅಲೌಕಿಕವಾದ ಗುಣಗಳನ್ನು ವ್ಯಕ್ತ ಪಡಿಸುವದಲ್ಲವೆ? ಮಾತೆಯ ಪ್ರೇಮಮಯವಾದ ಹೃದಯ ಪರೀಕ್ಷೆಯು ಪುರುಷ ವರ್ಗಕ್ಕೆ ಚನ್ನಾಗಿ ಆಗುವದಿಲ್ಲ. ಇವಳು ತನ್ನ ಬಾಲಕನ ಮರಣದುಃಖವನ್ನು ಹುದುಗಿಕೊಂಡು, ಮನಸ್ಸನ್ನು ಕಲ್ಲಿಗಿಂತಲೂ ಕಲ್ಲಾಗಿ ಮಾಡಿದ್ದಳು. ಇವಳ ನೇತ್ರದಲ್ಲಿ ಒಂದಾದರೂ ದುಃಖಾಶ್ರುಗಳನ್ನು ನಾನು ಕಾಣಲಿಲ್ಲ; ಸ್ವೀಕೃತ ಕಾರ್ಯವು ಸಿದ್ಧಿಸುವದಕ್ಕಾಗಿ ಇವಳು ಮಾನಸಿಕ ಯಾತನೆಗಳನ್ನು ಮರೆತು ಆನಂದವೃತ್ತಿಯನ್ನು ಧಾರಣಮಾಡಿದ್ದಳು. ಇವಳು ತನ್ನ ಮೃತಬಾಲಕನನ್ನು ನನ್ನ ಸ್ವಾಧೀನ ಮಾಡುವಾಗ, 'ಹೋಗಪ್ಪಾ! ಕುಮಾರ, ಹೋಗು! ನೀನು ಜೀವಿಸಿದ್ದರೆ ಸ್ವಾಮಿಕಾರ್ಯಕ್ಕಾಗಿ ಉಪಯೋಗ ಬೀಳುತ್ತಿದ್ದಿ; ಮರಣೋತ್ತರದಲ್ಲಾದರೂ ನಿನ್ನ ಭಾಗ್ಯದಿಂದ ರಾಜಸೇವೆಯು ಘಟಿಸತೊಡಗಿದ್ದನ್ನು ನೋಡಿ ನನ್ನ ದುಃಖಿತ ಹೃದಯಕ್ಕೆ ಆನಂದವಾಗಿದೆ!' ಎಂದು ನುಡಿದು ಇವಳು ನನ್ನ ಕೈಯಲ್ಲಿ ತನ್ನ ಹೊಟ್ಟೆಯ ಕರಳನ್ನು ಕೊಟ್ಟಳು.''

''ಧನ್ಯ, ಜನೀ! ನೀನು ಪರಮಧನ್ಯಳು! ಅಕೃತ್ರಿಮ ಸ್ವಾಮಿನಿಷ್ಠಳಾದ ನಿನ್ನ ಧನ್ಯವಾದವನ್ನು ಎಷ್ಟು ಬಗೆಯಿಂದ ಮಾಡಿದರೂ ಕಡಿಮೆಯಿರುವದು.''

ಪಂತನು ಹೀಗೆ ಧನ್ಯೋದ್ಗಾರಗಳನ್ನು ತೆಗೆಯಲು, ಜನಿಯು ಯಾವ ಮಾತನ್ನೂ ಆಡಲಾರದವಳಾಗಿ ತಟಸ್ಥಳಾಗಿ ಕುಳಿತಿದ್ದಳು. ತನ್ನ ಮೃತ ಬಾಲಕನ ಸ್ಮರಣೆಯಾಗಿ ಅವಳ ಕಣ್ಣುಗಳಲ್ಲಿ ದುಃಖಾಶ್ರುಗಳು ಹೊರಸೂಸಿ ಹರಿಯತೊಡಗಿದವು; ಕಂಠವು ಬಿಗಿಯಿತು. ಆಗ ಶಿವರಾಮಪಂತನು ಸುಗುಣಾ ಬಾಯಿಯನ್ನು ಕುರಿತು, ''ನನಗೆ ಜನಿಯಂತಹ ಸ್ತ್ರೀರತ್ನವು ದೊರೆತದ್ದು ಮಹ ದ್ಭಾಗ್ಯವೆಂದು ತಿಳಿದಿರುವೆನು. ಇವಳು ದೇವಲೋಕದಿಂದ ಧರಣಿಗವತರಿಸಿದ ಶಾಪಭ್ರಷ್ಟದೇವತೆಯೆಂದು ನನ್ನ ಕಲ್ಪನೆಯಾಗಿರುವದು. ಹಾಗಿಲ್ಲದಿದ್ದರೆ ಸಾಮಾನ್ಯ ಜನರಲ್ಲಿ ಇಂತಹ ಉದಾತ್ತ ಭಾವನೆಗಳು ಪ್ರಾದುರ್ಭವಿಸುವದು

ಅಪರೂಪ.'' ಎಂದು ಶಿವರಾಮ ಪಂತನು ನುಡಿದು ಆತುರದಿಂದ, ''ನೀನು ಕಾರ್ಯಭಾಗವನ್ನು ಹೇಗೆ ಕೊನೆಗಾಣಿಸಿದೆ?''

''ರಾಜಸಬಾಯಿಯು ಕೈಯೊಳಗಿಂದ ರಾಮರಾಜರು-ಬಾಲರಾಜರು-ಪಾರಾಗುವದು ದುಸ್ತರವೆಂದು ತಾರಾಬಾಯಿಯವರು ತಿಳಿದುಕೊಂಡಿದ್ದರು. ಯಾವದೊಂದು ಹಂಚಿಕೆಯಿಂದ ಇವರನ್ನು ತಮ್ಮ ಬಳಿಯಿಂದ ಸುರಕ್ಷಿತವಾದ ಸ್ಥಳಕ್ಕೆ ಕಳುಹಿಸಬೇಕೆಂದು ಅವರು ಯತ್ನದಲ್ಲಿದ್ದರು. ಜನಾಬಾಯಿಯು ಮಗನು ಬೇನೆಬಿದ್ದು ಅವನು ಬದುಕುವದಿಲ್ಲವೆಂದು ತಿಳಿದೊಡನೆಯೆ, ಈಗ ಕೂಡಿ ಬಂದ ಪ್ರಸಂಗದಿಂದ ಲಾಭಪಡೆಯಬೇಕೆಂದು ನಾನೂ ತಾರಾಬಾಯಿಯವರೂ ವಿಚಾರ ಮಾಡಿದೆವು. ಅಂದೇ ಬಾಲರಾಜರಿಗೆ ಜ್ವರಗಳು ಹುಟ್ಟಿರುವವೆಂದು ದುರ್ಗದಲ್ಲಿ ಸುದ್ದೀ ಬೀರಿದೆವು. ಜನಾಬಾಯಿಯ ಮಗನು ಮರಣ ಹೊಂದಿದೊಡನೆಯೇ ಆ ಮೃತ ಶಿಶುವನ್ನು ತಾರಾಬಾಯಿಯವರ ಸ್ವಾಧೀನಕ್ಕೆ ಕೊಟ್ಟು, ಈ ಬಾಲರಾಜನನ್ನು ವಿನಿಮಯವಾಗಿ ತೆಗೆದುಕೊಂಡು ಬಂದೆನು. ನಾನು ದುರ್ಗದೊಳಗಿನ ಎಲ್ಲ ಜನರಿಗೆ ನಿತ್ಯ ಪರಿಚಯದವಳಾದ್ದರಿಂದ, ನನ್ನ ವಿಷಯವಾಗಿ ಯಾರೂ ಸಂಶಯಗೊಳ್ಳಲಿಲ್ಲ. ದಾರಿಯಲ್ಲಿ ಕಾವಲುಗಾರರು ಎಂದಿನಂತೆ ವಿನೋದಕ್ಕಾಗಿ ''ಪುಟ್ಟಿಯನ್ನಿಳಿಸಿ ಬೆಣ್ಣೆಯನ್ನು ಕೊಡೆ''ಂದು ಕೇಳತೊಡಗಿದ್ದರು. ನಾನು ಆ ಜನರನ್ನು ಒಳಿತಾಗಿ ಬೆದರಿಸಿ ದಾಟಿ ಬಂದೆನು. ನಾನು ದುರ್ಗವನ್ನಿಳಿಯುತ್ತಲೆ, ಬಾಲರಾಜರು ಮರಣಹೊಂದಿದರೆಂಬ ವಾರ್ತೆಯು ಎಲ್ಲ ಕಡೆಯಲ್ಲಿ ಪಸರಿಸಿತು. ನನಗೆ ಅರಮನೆಯೊಳಗಿನ ರೋದನ ಧ್ವನಿಯು ಕೇಳತೊಡಗಿತ್ತು. ಈ ಎಲ್ಲ ಘಟನೆಗಳನ್ನು ನೋಡಿ ನನಗೆ ಬಹಳೇ ನಗೆಯು ಬಂದಿತ್ತು.''

''ಬಾಲರಾಜರು ಪುಟ್ಟಿಯೊಳಗೆ ಸುಮ್ಮನಿದ್ದರೇನು? ಒಂದು ವೇಳೆ ಇವರು ಆಗ ಅತ್ತಿದ್ದರೆ ಕಾರ್ಯಘಾತವಾಗಿ ಹೋಗುತ್ತಿತ್ತು.!''

''ತಾರಾಬಾಯಿಯವರು ಇವರನ್ನು ನನ್ನ ಬಳಿಯಲ್ಲಿ ಕೊಡುವಾಗ ಹಾಲಿನಲ್ಲಿ ಸ್ವಲ್ಪ ಅಫೀಮನ್ನು ಹಾಕಿ, ಕುಡಿಸಿದರು. ಅಂತೆಯೇ ನಾನು ನಿರ್ಬಾಧಕವಾಗಿ ಪಾರಾಗಿ ಬಂದೆನು.''

''ಸಗುಣಾಬಾಯಿ, ಸುಭಾನರಾಯಪಂತಹ ಅಧಿಕಾರಸ್ಥನು ರಾಜಪರಿವಾರದ ಕಾವಲಿಗಿರಲಾಗಿ ನೀವು ಈ ಕಾರ್ಯವನ್ನು ಈಡೇರಿಸಿದ್ದು ವಿಸ್ಮಯದ ಸಂಗತಿಯು.''

"ಪಂತರೆ, ತಾರಾಬಾಯಿಯವರು ರಾಜಸಬಾಯಿಗಿಂತಲೂ ಹೆಚ್ಚಿನ ಬುದ್ಧಿಕುಶಲತೆಯುಳ್ಳವರಿರುವರು. ಅವರು ಈಗ ಎಂತಹ ವಿಪನ್ನಾವಸ್ಥೆಯೊಳಗಿದ್ದರೂ ತಮ್ಮ ಭಾಗ್ಯೋದಯವು ಹೇಗಾದೀತೆಂದು ಹಗಲಿರುಳೂ ಯೋಚನೆಯೊಳಗಿರುವರು ಅವರು ತಮ್ಮ ಮುಕ್ತತೆಗಾಗಿ ಅನೇಕ ಬಗೆಯ ಕಾರಸ್ಥಾನಗಳನ್ನು ನಡೆಯಿಸಿರುವರು. ಸಂಭಾಸರಾಯನು ರಾಜಸಬಾಯಿಯ ಸೇವಕನಾಗಿದ್ದರೂ, ತಂತ್ರಗಾರರಾದ ತಾರಾಬಾಯಿಯವರು ಅವನನ್ನು ತಮ್ಮ ಕಡೆಗೆ ಎಳೆದುಕೊಂಡಿರುವರು. ಯಾವ ಯಾವ ಜನರನ್ನು ಹೇಗೆ ಹೇಗೆ ಒಲಿಸಿಕೊಳ್ಳಬೇಕೆಂಬುದರ ಮರ್ಮವು ಅವರಿಗೆ ಚನ್ನಾಗಿ ಗೊತ್ತಾಗಿರುವದು. ಸಂಭಾನರಾಯನ ಮರ್ಮಸ್ಥಾನವನ್ನು ಅವರು ಕಂಡು ಹಿಡಿದು, ಅದೇ ರೀತಿಯಾಗಿ ಸಾಹಸ ಮಾಡಿ ಅವನನ್ನು ಒಡೆಯಿಸಿಕೊಂಡಿರುವರು. ಅಂತೆಯೇ ನನ್ನ ಕಾರ್ಯಕ್ಕೆ ಅವನಿಂದ ವಿಶೇಷವಾಗಿ ಸಹಾಯವಾಯಿತು."

ಸಗುಣಾಬಾಯಿಯು ಹೀಗೆ ಹೇಳುತ್ತಿರುವಾಗ ಬಾಲರಾಜನು ಅವಳ ಮುಖವನ್ನು ಟಕಮಕ ನೋಡುತ್ತಿದ್ದನು. ಅವನನ್ನು ನೋಡಿ ಜನಾಬಾಯಿಯು ಮುದ್ದಿಟ್ಟು,

"ಬಾಲರಾಜರೆ, ನಿಮಗೆ ಸಗುಣಾಬಾಯಿಯವರ ಮಾತುಗಳು ತಿಳಿಯುತ್ತವೇನು?" ಎಂದು ನುಡಿದ ಕೂಡಲೆ, ಅವನು ಕುಲು ಕುಲು ಎಂದು ನಗತೊಡಗಿದನು. ಬಾಲಹಾಸ್ಯದಿಂದ ಎಲ್ಲರೂ ಸಂಭ್ರಮಗೊಂಡರು. ಅನಂತರದಲ್ಲಿ ಶಿವರಾಮಪಂತರು—

"ಜನಾ, ನಿನ್ನ ಮಗನು ಮೃತಿಹೊಂದಿದ್ದು ಯಾರಿಗೂ ಗೊತ್ತಿರುವದಿಲ್ಲ. ಬಾಲರಾಜನನ್ನು ನಿನ್ನ ಮಗನೆಂದು ಗ್ರಹಿಸಿ ಸಂರಕ್ಷಿಸತಕ್ಕದ್ದು. ನಿನ್ನ ಮಗನ ಹಾಗು ಬಾಲರಾಜರ ವಯಸ್ಸಿನಲ್ಲಿಯೂ ಸ್ವರೂಪದಲ್ಲಿಯೂ ವಿಶೇಷವಾದ ಸಾಮ್ಯವುಂಟು. ಆದ್ದರಿಂದ ಯಾರಿಗೂ ಸಂಶಯವುಂಟಾಗುವದಕ್ಕೆ ಮಾರ್ಗವಿಲ್ಲ" ಎಂದು ನುಡಿದು, ಅವನು ಸಗುಣಾಬಾಯಿಯನ್ನು ಕುರಿತು—"ರಾಮರಾಜರನ್ನು ಬೇರೆ ಹೆಸರಿನಿಂದ ಸಂಬೋಧಿಸತಕ್ಕದ್ದು. ಸಗುಣಾಬಾಯಿ, ಬಾಲರಾಜರಿಗೆ ಯಾವ ಹೆಸರನ್ನಿಡಬೇಕೆಂದು ನಿನ್ನ ಮನಸ್ಸಿನಲ್ಲಿರುವದು?"

"ಪಂತರೆ, ಬಾಲರಾಜರಿಗೆ ನೀವೇ ನಾಮಕರಣ ಮಾಡಿರಿ."

"ನಾಮಕರಣದ ಕರ್ತವ್ಯವು ಸ್ತ್ರೀಯರದಿರುವದು. ಜನಿಯ ಪುತ್ರರಾಗಿದ್ದ ಬಾಲರಾಜರಿಗೆ ನಾಮಕರಣ ಮಾಡುವದಕ್ಕೆ ನೀನೇ ಅಧಿಕಾರಿಯಾಗಿ

ರುವೆ. ಹೇಳು; ಇವರನ್ನು ಯಾವ ಹೆಸರಿನಿಂದ ಸಂಬೋಧಿಸತಕ್ಕದ್ದೆಂಬದನ್ನು ನೀನೇ ಸೂಚಿಸು.''

“ಇನ್ನು ಮೇಲೆ ನಾವು ಬಾಲರಾಜನನ್ನು ಸಂತಾಜಿಯೆಂದು ಕರೆಯೋಣ.''

ಸಗುಣಾಬಾಯಿಯು ಬಾಲರಾಜನಿಗೆ ಸಂತಾಜಿಯೆಂದು ನಾಮಕರಣ ಮಾಡಿದಳು. ಮುಂದಿನ ಕಾರ್ಯವನ್ನು ಹೇಗೆ ಹೇಗೆ ಈಡೇರಿಸಬೇಕೆಂಬದರ ಬಗ್ಗೆ ಅವರು ಮಾತನಾಡುತ್ತ ಕುಳಿತಿರುವಷ್ಟರಲ್ಲಿ ವಾತಾಯನದಿಂದ ಸುಳ್ಳನೆ ತಂಗಾಳಿಯು ಸುಳಿಯ ತೊಡಗಿತು. ಪ್ರಾಚ್ಯದಿಶೆಯು ಪ್ರವಾಳದಂತೆ ಶೋಭಿಸ ತೊಡಗಿತು. ನೋಡನೋಡುವಷ್ಟರಲ್ಲಿ ಬಾಲಸೂರ್ಯನು ತನ್ನ ಕಿರಣಗಳನ್ನು ಬಾಲರಾಜನ ಮುಖದ ಮೇಲೆ ಕೆಡಹಿದನು.

---

## ಸದ್ಬೋಧ ಚಂದ್ರಿಕೆ.

ತಾರಾಬಾಯಿಯು ತನ್ನ ಪರಿವಾರ ಸಹಿತವಾಗಿ ಪನ್ಹಾಳಗಡದಲ್ಲಿ ಸೆರೆಯಾದಾಗಿನಿಂದ, ಕಾಲವು ಅವಳಿಗೆ ಸಂಪೂರ್ಣವಾಗಿ ಪ್ರತಿಕೂಲವಾಯಿತು. ಅವಳ ಪ್ರಿಯಪುತ್ರನಾದ ಶಿವಾಜಿರಾಜನು ಕಾರಾಗೃಹದಲ್ಲಿಯೇ ಮೈಲಿಯ ಬೇನೆಯಿಂದ ಪರಲೋಕವಾಸಿಯಾದನು. ಅನೇಕ ಸಂಕಟ ಪರಂಪರೆಗಳಿಂದ ಅವಳು ತೀರ ಉದಾಸೀನಳಾಗಿದ್ದರೂ ಧೃತಿಗುಂದದೆ, ತನ್ನ ಜೀವನಸಾರಸರ್ವಸ್ವನಾದ ವಾತ್ಸಲ್ಯದ ಮೊಮ್ಮಗ ರಾಮರಾಜನ ಶುಭೋದಯಕ್ಕಾಗಿ ಅವಳು ದೀರ್ಘಸಾಹಸ ನಡೆಯಿಸಿದ್ದಳು. ಶಾಹೂರಾಜನೂ ರಾಜಸಬಾಯಿಯೂ ಅನೇಕ ಬಗೆಯ ಕಾರಸ್ಥಾನಗಳಿಂದ ತಾರಾಬಾಯಿಯ ಪಕ್ಷವನ್ನು ನಾಮಶೇಷ ಮಾಡುವದಕ್ಕಾಗಿ ಬದ್ಧಕಂಕಣರಾಗಿದ್ದರು. ಪನ್ಹಾಳಗಡದ ಮೇಲಿನ ಅಧಿಕಾರ ಸೂತ್ರಗಳೆಲ್ಲ ರಾಜಸಬಾಯಿಯ ಸ್ವಾಧೀನವಾದ್ದರಿಂದ, ತಾರಾಬಾಯಿಗೆ ಅತ್ತಿತ್ತ ಉಲುಕುವಷ್ಟು ಸಹ ಸ್ವಾತಂತ್ರ್ಯವಿದ್ದಿಲ್ಲ ಇಂಥ ಸ್ಥಿತಿಯಲ್ಲಿ ಅವಳ ಆಶಾತಂತುವಾದ ಬಾಲರಾಜನು ಪರಲೋಕವಾಸಿಯಾದ ವಾರ್ತೆಯು ಪಸರಿಸಲ್ಪಟ್ಟು, ಇದ್ದಬಿದ್ದ ಸ್ವಾಮಿನಿಷ್ಠ ಜನರಲ್ಲಿ ಸಹ ಎಷ್ಟೋ ಜನರು ಶಾಹೂರಾಜನ ಹಾಗು ರಾಜಸಬಾಯಿಯ ಪಂಗಡವನ್ನು ಸೇರಿದರು.

ಶಾಹೂರಾಜನು ಅನೇಕ ಬಗೆಯ ಕಾರಸ್ಥಾನಗಳಿಂದ ತನ್ನ ಪಕ್ಷವನ್ನು ಬಲಪಡಿಸಿಕೊಳ್ಳತೊಡಗಿದ್ದನು. ಆಗ ಬಾಳಾಜಿ ವಿಶ್ವನಾಥ ಪೇಶವೆ

ಯಂತಹ ಧೂರ್ತನೂ ಶೂರನೂ ಆದ ಮಂತ್ರಿಯು ಅವನಿಗೆ ಲಭಿಸಿದ್ದರಿಂದ ಸ್ವರಾಜ್ಯದ ಭಗವೇ ಧ್ವಜವು ಉತ್ತರ ಹಿಂದುಸ್ಥಾನದಲ್ಲಿ ಉತ್ಥಾನ ಮಾಡಿ, ಮಹಮ್ಮದೀಯರನ್ನೂ ರಜಪೂತರನ್ನೂ ದಾಗುಡಿಸಿತು. ಈ ಮೇರೆಗೆ ಶಾಹೂರಾಜನ ಭಾಗ್ಯರವಿಯು ಉತ್ತರೋತ್ತರವಾಗಿ ಪ್ರಕಾಶಮಾನನಾಗತೊಡಗಿದ್ದರಿಂದ, ತಾರಾಬಾಯಿಯು ತೀರ ಔದಾಸೀನ್ಯವನ್ನು ತಾಳಿದ್ದಳು. ವರ್ಧಮಾನ ಸತ್ವಶಾಲಿಯಾದ ಶಾಹೂರಾಜನೊಡನೆ ವಿರೋಧಮಾಡಿ ಯಶವನ್ನು ಸಂಪಾದಿಸಲಿಕ್ಕೆ ತಾನು ತೀರ ಅಸಮರ್ಥಳಾಗಿರುವೆನೆಂಬುದು ಅವಳ ನಿದರ್ಶನಕ್ಕೆ ಬರತೊಡಗಿತ್ತು. ಅವಳ ಏಕನಿಷ್ಠ ಮಂತ್ರಿಯಾದ ರಾಮಚಂದ್ರಪಂತನು ಇದೇ ಸಂಧಿಯಲ್ಲಿ ಮರಣ ಹೊಂದಿದ್ದನು. ತಾರಾಬಾಯಿಯ ಪಕ್ಷಪಾತಿಯೆಂಬ ನಿಮಿತ್ಯವಾಗಿ ಶಾಹೂರಾಜನು ಅವಳ ಬಲಗೈಯಂತಿದ್ದ ಹಿಂಗಣಗಾಂವದ ಶೂರ ಸರದಾರನಾದ ದಮಾಜಿ ಥೋರಾತನನ್ನು ಪುರಂದರ ಕೋಟೆಯಲ್ಲಿ ಸೆರೆಯಿಟ್ಟಿದ್ದನು. ಅವನು ಇನ್ನೂ ಕಾರಾಗೃಹದಲ್ಲಿ ಅನೇಕ ವಿಧದ ಯಾತನೆಗಳನ್ನು ಹೊಂದುತ್ತಲಿದ್ದನು. ತನ್ನ ಶತ್ರುಗಳ ಪಕ್ಷವನ್ನು ಹಿಡಿದಿರುವದರಿಂದ ಯಾವ ಬಗೆಯ ಶಾಸನವನ್ನು ಅನುಭವಿಸಬೇಕಾಗುವದೆಂಬುದು ಜನರಿಗೆ ತಿಳಿಯುವದಕ್ಕಾಗಿ ಶಾಹೂರಾಜನು ಅವನ ಮನೆಯ ಮೇಲೆ ರಂಟೆಯನ್ನು ಹೊಡೆಯಿಸಿದನು. ಅನಂತರದಲ್ಲಿ ಅವನು ದಮಾಜಿಯ ಮನೆಯ ಪರಿವಾರವನ್ನು ದಿಕ್ಕಾಪಾಲು ಮಾಡಿಸಿದನು. ಇಂತಹ ಪ್ರತಿಕೂಲ ಸ್ಥಿತಿಯಲ್ಲಿ ಅವಳ ಜೀವತಂತುವಾದ ರಾಮರಾಜನು ಮರಣಹೊಂದಿದನೆಂಬ ವಾರ್ತೆಯು ಪಸರಿಸಿತು. ಇವೆಲ್ಲ ಸಂಗತಿಗಳು ತಾರಾಬಾಯಿಯ ಪಕ್ಷವನ್ನು ನಿರ್ಮೂಲಗೊಳಿಸುವದಕ್ಕೆ ಕಾರಣೀಭೂತವಾದವು. ಅವಳ ಆಶೆಯ ಕಿರಣವಾದ ಬಾಲರಾಜನು ಪರಲೋಕವನ್ನು ಸೇರಿದ ಮೇಲೆ ಅವಳು ರಾಜ್ಯಪ್ರಾಪ್ತಿಗಾಗಿ ಯತ್ನಿಸುವದಿಲ್ಲೆಂದು ಜನರು ತಿಳಿದುಕೊಂಡರು. ನಿರಾಶಾಜನಕ ಪರಿಸ್ಥಿತಿಯಲ್ಲಿ ಅವಳು ಅನೇಕ ವಿಧವಾದ ಸಂಕಟಪರಂಪರೆಗಳಿಂದ ಬಳಲಿ ಬಸವಳಿದಿದ್ದರೂ, ಮನಸ್ಸು ಎಷ್ಟೋ ನೈರಾಶ್ಯ ಹೊಂದಿದ್ದರೂ, ಆ ಮಹತ್ವಾಕಾಂಕ್ಷೆಯ ವೀರಸ್ತ್ರೀಯು ತನ್ನ ಬಾಲರಾಜನ ಭಾಗ್ಯೋದಯಕ್ಕಾಗಿ ದೀರ್ಘಸಾಹಸ ನಡೆಯಿಸಿದ್ದಳು. ಅವನನ್ನು ಕಾರಾಗೃಹದಿಂದ ದಾಟಿಸುವದು ಅವಳಿಗೆ ಅದ್ಯಕರ್ತವ್ಯವೆನಿಸಿದ್ದರಿಂದ ಯಾವ ರೀತಿಯಿಂದ ಆ ಬಾಲಕನನ್ನು ಸುರಕ್ಷಿತವಾಗಿ ಕಳುಹಿಸಿದಳೆಂಬುದು ವಾಚಕಮಹಾಶಯರಿಗೆ ಗೊತ್ತಾದ ಮಾತಾಗಿರುವದು. ಸಗುಣಾ ಗವಳಿತಿಯೂ, ಭವಾನಾಬಾಯಿಯೂ,

ಶಿವರಾಮಪಂತನೂ ಅವಳ ಕಾರಸ್ಥಾನದೊಳಗಿನ ಪಾತ್ರಗಳಾಗಿದ್ದರೆಂಬದಾದರೂ ವಿದಿತವಿರುವದು. ಇವರಲ್ಲದೆ ಅವಳ ಗುಪ್ತವ್ಯೂಹದಲ್ಲಿ ಯಾರು ಸೇರಿದ್ದರೆಂಬದು ಪ್ರಸಂಗಾನುಸಾರವಾಗಿ ನಿದರ್ಶನಕ್ಕೆ ಬರಬಹುದಾಗಿದೆ.

ರಾಜಸಬಾಯಿಯು ತಾರಾಬಾಯಿಯು ಪರಿವಾರವನ್ನು ಬಂದನೆಯಲ್ಲಿರಿಸಿ, ಕಾರಾಗೃಹದ ಕಾವಲಿಗಾಗಿರಿಸಿದ ಪರಿಚಾರಕರ ಮೇಲೆ ಸುಭಾನರಾಯನೆಂಬ ಅಧಿಕಾರಿಯನ್ನು ನಿಯಮಿಸಿದ್ದಳು. ಇವನ ವಯಸ್ಸು ಸಮಾರು ಇಪ್ಪತ್ತೈದರೊಳಗಿರಬಹುದು. ಇವನು ಸಣ್ಣ ತರಗತಿಯ ಸೇವಾವೃತ್ತಿಯಿಂದ ಕಾವಲುಗಾರರ ಮುಖ್ಯಸ್ಥನ ಅಧಿಕಾರವನ್ನು ಪಡೆದವನಾಗಿದ್ದನು. ಇವನು ಯಾವ ಊರವನು? ಯಾವ ಜಾತಿಯವನು? ಎಂಬೀ ಮೊದಲಾದ ಅವನ ಪೂರ್ವ ಪಿಠಿಕೆಯು ಅಲ್ಲಿ ಯಾರಿಗೂ ಗೊತ್ತಿರಲಿಲ್ಲ. ತಾನು ಅಹಮ್ಮದನಗರದ ಕಡೆಯವನೆಂದೂ, ಅಲ್ಲಿಯ ಪ್ರಸಿದ್ಧ ಜಾಧವ ಮನೆತನದಲ್ಲಿ ಜನ್ಮವೆತ್ತಿದವನೆಂದೂ, ಕರ್ತವ್ಯ ಪ್ರಭಾವದಿಂದ ಪ್ರಸಿದ್ಧಿಯನ್ನು ಪಡೆಯುವದಕ್ಕಾಗಿ ಸ್ವರಾಜ್ಯದಲ್ಲಿ ಸೇವೆಗಾಗಿ ನಿಂತಿರುವೆನೆಂದೂ ಅವನು ಜನರಿಗೆ ಹೇಳುತ್ತಿದ್ದನು. ಅವನ ಆಡಂಬರದ ಮಾತನ್ನು ಯಾರೂ ನಂಬುತ್ತಿರಲಿಲ್ಲ. ಅವನು ಅಲ್ಪ ಮಟ್ಟಿಗೆ ಶೂರನೂ ಸಾಹಸಿಯೂ ಇದ್ದನೆಂಬದರಲ್ಲಿ ವಾದವಿಲ್ಲ; ಆದರೆ ಆತನ ಆ ಗುಣಗಳ ಉಪಯೋಗವು ಯಾವಾಗಲೂ ಒಳ್ಳೆಯ ಕೆಲಸಕ್ಕಾಗಿ ಆಗುತ್ತಿತ್ತೆಂಬದರ ನಿಯಮವಿದ್ದಿಲ್ಲ. ಸಂಭಾವನೆಯ ಆಶೆಯಿಂದ ಅವನು ಒಳಿತು-ಕೇಡುಗಳನ್ನು ಲಕ್ಷಿಸದೆ ಕಾರ್ಯಸಾಧನೆಗಾಗಿ ಮುಗಿಬೀಳುತ್ತಿದ್ದನು. ಇವನು ಸ್ವರಾಜ್ಯದ ಉತ್ತಮವಾದ ಕೆಲಸವನ್ನು ಮಾಡಿ ಪ್ರಸಿದ್ಧಿಯನ್ನು ಪಡೆದಿದ್ದನೆಂದು ಹೇಳಲಿಕ್ಕಾಗುವದಿಲ್ಲ. ರಾಜಸಬಾಯಿಯ ಕೆಲವು ಗುಪ್ತವಾದ ಕೆಲಸಗಳನ್ನು ಮಾಡಿಕೊಟ್ಟದ್ದರಿಂದ, ಅವಳು ಈ ಸುಭಾನರಾಯನನ್ನು ಆತನ ಯೋಗ್ಯತೆಗಿಂತ ಹೆಚ್ಚಿನ ಅಧಿಕಾರಕ್ಕೆ ಒಯ್ದು ಮುಟ್ಟಿಸಿದ್ದಳು. ಬಾಲರಾಜನನ್ನು ಕಾರಾಗೃಹದಿಂದ ದಾಟಿಸುವ ಕಾರ್ಯದಲ್ಲಿ ಇವನು ತಾರಾಬಾಯಿಗೆ ಅಲ್ಪಸ್ವಲ್ಪ ಸಹಾಯ ಮಾಡಿದ್ದನು. ಇವನು ಕೇವಲದ್ರವ್ಯದಾಶೆಗಾಗಿ ತಾರಾಬಾಯಿಯ ಗುಪ್ತವ್ಯವಹಾರದಲ್ಲಿ ಭಾಗತೆಗೆದುಕೊಂಡಿದ್ದನೆಂದು ತಿಳಿಯಲಾಗದು. ಅವಳು ಸುಭಾನರಾಯನ ಆಯಕಟ್ಟಿನ ಸ್ಥಳವನ್ನು ಕಂಡು ಹಿಡಿದದ್ದರಿಂದ, ಅದೇ ಬಗೆಯಾಗಿ ಯತ್ನಿಸಿ ಯಶಸಂಪಾದನೆ ಮಾಡಿಕೊಂಡಿದ್ದಳು. ಅವನು ಯಾವ ಬಗೆಯ ಲಾಲಸೆಗೊಳಗಾಗಿ ತಾರಾಬಾಯಿಯ ಕಡೆಗೆ ಒಡದು ಹೋಗಿದ್ದನೆಂದು ವಾಚಕ ಮಹಾಶಯರು ವಿಚಾರಗ್ರಸ್ತರಾಗಿರಬಹುದಲ್ಲವೆ?

ಪ್ರಸಂಗಾನುಸಾರವಾಗಿ ಈ ಸಂಗತಿಯಾದರೂ ಗೊತ್ತಾಗಬಹುದಾಗಿದೆ. ಈ ಜನರಲ್ಲದೆ ತಾರಾಬಾಯಿಯು ಗುಪ್ತಕಾರಸ್ಥಾನದಲ್ಲಿ ಸೇರಿದವರಲ್ಲಿ ಚಂದ್ರಿಕೆಯೊಬ್ಬಳು ಪ್ರಸಿದ್ಧ ಜನರಲ್ಲಿ ಗಣಿಸತಕ್ಕಂಥವಳಿದ್ದಳು. ಸದ್ಯದಲ್ಲಿ ಅವಳು ರಾಜಸಬಾಯಿಯಲ್ಲಿ ಸೇವಾವೃತ್ತಿಯನ್ನು ಕೈಕೊಂಡಿದ್ದಳು. ಇವಳ ವಯಸ್ಸು ಸುಮಾರು ಇಪ್ಪತ್ತು ವರ್ಷಗಳವಿರಬಹುದು. ಇವಳು ಸುಂದರವಾದ ಮೈ-ಕಟ್ಟಿನವಳಿದ್ದಳು. ಪರಿಕೆಯು ತಾರುಣ್ಯದಿಂದ ಇವಳು ಬಹಳ ಚಿತ್ತಾಕರ್ಷಕವಾಗಿ ಶೋಭಿಸುತ್ತಿದ್ದಳು. ಇವಳ ಮುಖಚರ್ಯೆಯು ಅತಿಶಯವಾಗಿ ಮೋಹಕವೂ ಸಾತ್ವಿಕವೂ ಇದ್ದು, ಇಲ್ಲದ ಬಿನಪು-ಬಿಯ್ಯಾರಗಳೂ ಚಾಪಲ್ಯತನವೂ ಇವಳಲ್ಲಿರಲಿಲ್ಲ. ಈ ಚಂದ್ರಿಕೆಯು ಸ್ವರ್ಗೀಯ ಸೌಂದರ್ಯದಲ್ಲಿ ಪಾವಿತ್ರ್ಯದ ವಿಲಕ್ಷಣವಾದ ಪ್ರಭೆಯು ಬೆಳಗುತ್ತಿದ್ದುದರಿಂದ, ಇವಳನ್ನು ಪಾಪದೃಷ್ಟಿಯಿಂದ ನೋಡುವದಕ್ಕೆ ತರುಣ ವರ್ಗವು ಬಹಳವಾಗಿ ಅಂಜುತಲಿತ್ತು.

ಚಂದ್ರಿಕೆಯು ಕುಲಕಥೆಯು ಅತ್ಯಂತ ರಹಸ್ಯಮಯವಾಗಿರುವದು. ಇವಳ ತಾಯಿ-ತಂದೆಗಳಾರೆಂಬದನ್ನು ಜನರು ಅರಿತಿರಲಿಲ್ಲ. ನಾಲ್ಕೈದು ವರ್ಷದವಳಿರುವಾಗಲೆ ಇವಳ ಪಾಲಕರು ಬಾಣಗಂಗೆಯ ಮೇಲಿನ ಬಿಂಕಟಸ್ವಾಮಿಗಳ ಪುಣ್ಯಪಾವನಕರವಾದ ಮಠದಲ್ಲಿ ಇವಳನ್ನು ಬಿಟ್ಟು ಹೋಗಿದ್ದರು. ಬಿಂಕಟಸ್ವಾಮಿಗಳು ಉಷಃಕಾಲದಲ್ಲೆದ್ದು ತಮ್ಮ ಮಠದ ಬಳಿಯಲ್ಲಿಯ ಆನಂದವನದಲ್ಲಿ ಶ್ರೀರಾಮಚಂದ್ರನ ಭಜನೆ ಮಾಡುತ್ತ ಸಂಚರಿಸುತ್ತಿರುವಾಗ, ಈ ಬಾಲಿಕೆಯು ಅವರ ದೃಷ್ಟಿಗೆ ಬಿದ್ದಳು. ದಯಾಘನರೂ ವಾತ್ಸಲ್ಯಭಾವದರೂ ಆದ ಸ್ವಾಮಿಗಳು ಆ ಮಗುವನ್ನು ಎತ್ತಿಕೊಂಡು ಮಠದಲ್ಲಿ ಒಯ್ದು ತಮ್ಮ ಶಿಷ್ಯಪರಿವಾರಕ್ಕೆ ತೋರಿಸಿದರು. ಆ ಶಿಶುವಿನ ಕೊರಳಲ್ಲಿ ಮಾಂಗಲ್ಯವಿದ್ದು, ಅದಕ್ಕೆ ಒಂದು ಪತ್ರವು ಕಟ್ಟಲ್ಪಟ್ಟಿತ್ತು. ಸ್ವಾಮಿಮಹಾರಾಜರು ಅದನ್ನು ಬಿಚ್ಚಿಸಿದರು. ಆ ಪತ್ರದೊಳಗಿನ ಸಂಗತಿಯು ಕೆಳಗೆ ಬರೆದ ಪ್ರಕಾರವಿತ್ತು:

"ಪರಮ ಪೂಜ್ಯ ಸ್ವಾಮಿ ಮಹಾರಾಜರೆ!

ಈ ಅಭಾಗಿನಿಯಾದ ಬಾಲಿಕೆಯ ಮಾತಾ-ಪಿತೃಗಳು ಅನಂತಪ್ರಣಾಮಗಳನ್ನರ್ಪಿಸಿ, ವಿನಂತಿಮಾಡಿಕೊಳ್ಳುವದೇನಂದರೆ, ನಮಗೆ ದುರ್ಧರವಾದ ಸಂಕಟವು ಪ್ರಾಪ್ತವಾದ್ದರಿಂದ ಈ ಬಾಲಿಕೆಯ ಲಾಲನೆ-ಪಾಲನೆ ಮಾಡುವದಕ್ಕೆ ನಾವು ಅಸಮರ್ಥರಾಗಿರುವೆವು. ಮಹಾನುಭಾವರೂ ದೀನಬಂಧುಗಳೂ ಆದ ತಮ್ಮಿಂದ ಈ ಮಗುವಿನ ರಕ್ಷಣೆಯಾಗುವದೆಂದು ನಮ್ಮ ನಂಬಿಗೆಯಾದ್ದರಿಂದ ಇವ

ಳನ್ನು ಆನಂದವನದಲ್ಲಿ ತಂದು ಬಿಟ್ಟಿರುವೆವು. ನಾವು ದೊಡ್ಡ ಮನೆತನದವರೂ ಕುಲೀನರೂ ಇರುವೆವು. ನಮ್ಮ ಗೃಹದೆಸೆಯು ದೈವಯೋಗದಿಂದ ಮುಗಿಯಿತೆಂದರೆ, ಎಲ್ಲ ಸಂಗತಿಗಳೂ ತಮಗೆ ವಿದಿತವಾಗುವವು. ಇನ್ನು ಮೇಲೆ ನೀವೇ ಈ ಬಾಲಿಕೆಯ ತಂದೆ-ತಾಯಿಗಳು. ಇವಳ ರಕ್ಷಣೆಯ ಭಾರವು ತಮ್ಮನ್ನೇ ಕೂಡಿರುವದು. ಸರ್ವಜ್ಞರಾದ ತಮಗೆ ಹೆಚ್ಚಿಗಿನ್ನೇನು ಬರೆಯಬೇಕು?''

ಸದ್ಗುರುಗಳಿಗೆ ತಮ್ಮ ಆನಂದವನದಲ್ಲಿ ಯಾವ ವೇಳೆಯಲ್ಲಿ ಈ ಬಾಲಿಕೆಯು ದೊರೆತಳೋ, ಆಗ ಆಕಾಶದಲ್ಲಿ ಚಂದ್ರನು ಮೂಡಿದ್ದನು. ಬಾಲಚಂದ್ರಿಕೆಯು ಈ ಮಗುವಿನ ಮುಖದ ಮೇಲೆ ಬಿದ್ದು, ಅದು ಸುರಮ್ಯವಾಗಿ ಚಂದ್ರಿಕೆಯ ಪ್ರತಿಬಿಂಬದಂತೆ ತೋರಿದ್ದರಿಂದಲೂ, ಆಗ ಅವರು ಸದ್ಬೋಧಪರವಾದ ಶ್ರೀರಾಮಚಂದ್ರನ ಭೂಪಾಳಿಯನ್ನು ಅನ್ನುತ್ತಿದ್ದುದರಿಂದಲೂ ಆ ಬಾಲಿಕೆಗೆ ಅವರು 'ಸದ್ಬೋಧ ಚಂದ್ರಿಕೆ'ಯೆಂಬ ಹೆಸರಿಟ್ಟರು. ಅಂದಿನಿಂದ ಅವಳನ್ನು ಎಲ್ಲರೂ ಚಂದ್ರಿಕೆಯೆಂದೇ ಸಂಬೋಧಿಸತೊಡಗಿದರು.

ಬಂಕಟಸ್ವಾಮಿಗಳು ಶ್ರೀಸಮರ್ಥ ರಾಮದಾಸ ಸ್ವಾಮಿಗಳ ಪರಮಶಿಷ್ಯರಲ್ಲೊಬ್ಬರಾಗಿದ್ದರು. ಸಮರ್ಥರು ಅಖಿಲ ಭಾರತವರ್ಷದಲ್ಲಿ ಒಟ್ಟು ಹನ್ನೆರಡುನೂರು ಮಠಗಳನ್ನು ಸ್ಥಾಪಿಸಿದ್ದು, ಅವುಗಳಲ್ಲಿ ಬಾಣಗಂಗೆಯ ಮಠವೊಂದಾಗಿತ್ತು. ಈ ಮಠದ ಮೇಲೆ ಇವರು ಬಂಕಟಸ್ವಾಮಿಗಳನ್ನು ನಿಯಮಿಸಿದ್ದರು. ಕೇವಲ ತಾಳಕಟಿಯುತ್ತ ಪಾರಮಾರ್ಥ ಚಿಂತನೆಯಲ್ಲಿಯೇ ಕಾಲಕಳೆಯುವಂತಹ ಸಾಧುಗಳು ಇವರಾಗಿರಲಿಲ್ಲ. ಸಮರ್ಥರಂತೆ ಇವರೂ ರಾಜಕಾರಣದಲ್ಲಿ ಮನಸ್ಸು ಹಾಕಿದ್ದರು ಇವರು ಹನ್ನೆರಡು ವರ್ಷಗಳ ವರೆಗೆ ಗಾಯತ್ರಿಯ ಪುರಶ್ಚರಣವನ್ನು ಮಾಡಿ ತಪಸ್ಸಿದ್ಧಿಯನ್ನು ಪಡೆದಿದ್ದರು. ಜೀವನ್ಮುಕ್ತರಂತೆ ಇವರ ಸ್ವಸುಖನಿರಭಿಲಾಷೆ ವೃತ್ತಿಯಿಂದ ಕೇವಲ ಪರೋಪಕಾರದಲ್ಲಿಯೇ ಕಾಲಕ್ರಮಣ ಮಾಡತೊಡಗಿದ್ದರು. ಆಗಿನ ಪರಿಸ್ಥಿತಿಗನುಸಾರವಾಗಿ ಈ ಸ್ವಾಮಿಗಳು ವ್ಯಾಯಾಮಶಾಲೆಯನ್ನು ಸ್ಥಾಪಿಸಿ ಜನತೆಯು ಸಶಕ್ತವಾಗಬೇಕೆಂದು ಬಹು ಪರಿಯಾಗಿ ಯತ್ನಿಸುತ್ತಿದ್ದರು.

ಸದ್ಯದ ರಾಜಕಾರಣದಲ್ಲಿ ಬಂಕಟಸ್ವಾಮಿಗಳು ತಾರಾಬಾಯಿಯ ಪಕ್ಷವನ್ನು ವಹಿಸಿದ್ದರು. ಅವಳ ಪಕ್ಷವೇ ಸತ್ಪಕ್ಷವೆಂದು ಅವರು ತಿಳಿದುಕೊಂಡಿದ್ದರು. ಸ್ವರಾಜ್ಯಕ್ಕೆ ಶಾಹೂರಾಜನೂ ಶಿವಾಜಿರಾಜನೂ ಸಮಾನ ಬಾಧ್ಯಸ್ಥರಿದ್ದು,

ಶಾಹೂರಾಜನು ಕಾರಸ್ಥಾನದಿಂದ ತನ್ನ ಬಂಧುವಿನ ಅಧಿಕಾರವನ್ನು ಮುಳುಗಿಸುವ ಸಾಹಸವನ್ನು ನಡೆಯಿಸಿದುದು ಅವರ ಮನಸ್ಸಿಗೆ ಬಂದಿರಲಿಲ್ಲ. ಆದ್ದರಿಂದ ಅವರು ತಾರಾಬಾಯಿಗೆ ಸಹಾಯ ಮಾಡಿ, ರಾಮರಾಜನ ಭಾಗ್ಯೋದಯ ವಾಗುವಂತೆ ಪ್ರಯತ್ನಿಸಬೇಕೆಂದು ನಿರ್ಧರಿಸಿಕೊಂಡಿದ್ದರು.

ತಾರಾಬಾಯಿಯು ಸುಭಾನರಾಯನನ್ನು ಒದೆದುಕೊಂಡಾಗಿನಿಂದ, ಅವಳು ಗುಪ್ತಮಾರ್ಗದಿಂದ ಬಂಕಟಸ್ವಾಮಿಗಳ ಮಠಕ್ಕೆ ಆಗಿಂದಾಗ ಬರುತ್ತಿದ್ದಳು. ಆಗ ಚಂದ್ರಿಕೆಯು ಅವಳ ಕಣ್ಣಿಗೆ ಬಿದ್ದಳು. ಸುಭಾಷಿಣಿಯೂ ರೂಪವತಿಯೂ ಸಾತ್ವಿಕಳೂ ಆದ ಆ ಬಾಲಿಕೆಯನ್ನು ನೋಡಿದ ಕೂಡಲೆ, ಅವಳಲ್ಲಿ ತಾರಾಬಾಯಿಯು ಪ್ರೇಮವುಳ್ಳವಳಾದಳು. ಅವಳ ಪೂರ್ವ ಚರಿತ್ರೆಯನ್ನು ಕೇಳಿಕೊಂಡ ಮೇಲಂತೂ ಚಂದ್ರಿಕೆಯಲ್ಲಿ ಅವಳು ಮತ್ತಿಷ್ಟು ಅನುಕಂಪೆಯುಳ್ಳವಳಾದಳು. ಆ ಬಾಲಿಕೆಯನ್ನು ತನ್ನ ಬಳಿಯಲ್ಲಿ ಕಳಿಸಿಕೊಡಬೇಕೆಂದು ಅವಳು ಬಂಕಟಸ್ವಾಮಿಯನ್ನು ಕೇಳಲು, ಅವರು ಆ ಮಾತಿಗೆ ಒಪ್ಪಿಕೊಂಡರು. ಅಂದಿನಿಂದ ಚಂದ್ರಿಕೆಯು ತಾರಾಬಾಯಿಯ ಬಳಿಯಲ್ಲಿರತೊಡಗಿದಳು.

ತಾರಾಬಾಯಿಯು ಕಾರಾಗೃಹದಲ್ಲಿದ್ದರೂ, ಚಂದ್ರಿಕೆಗೆ ಮಾತ್ರ ಬೇಕಾದಲ್ಲಿ ಹೋಗಿಬರುವದಕ್ಕೆ ನಿರಾತಂಕವಿತ್ತು. ಸುಮಾರು ಒಂಭತ್ತು ವರ್ಷಗಳ ವರೆಗೆ ತಾರಾಬಾಯಿಯು ಅವಳನ್ನು ಜೋಪಾನ ಮಾಡಿದಳು. ಅನಂತರದಲ್ಲಿ ಯಾವ ಕಾರಣದಿಂದಲೋ ಅವಳು ಚಂದ್ರಿಕೆಯನ್ನು ಕಂಡರೆ ಸೇರದಂತಾದಳು! ಕಡೆಗೆ ಒಂದು ದಿವಸ ಅವಳು ಚಂದ್ರಿಕೆಯ ಮೇಲೆ ಸಿಟ್ಟಾಗಿ ಅವಳನ್ನು ಹೊರಗೆ ಹಾಕಿದಳು. ಆಗ ಅವಳು ಮತ್ತೆ ನಿರಾಧಾರಳಾದಳು.

ಚಂದ್ರಿಕೆಯು ಸದ್ಗುಣರಾಶಿಯೆಂದು ಬಹು ಜನರು ಅವಳನ್ನು ವರ್ಣಿಸುತ್ತಿದ್ದರು. ಹೀಗಿದ್ದರೂ ಅವಳು ತಾರಾಬಾಯಿಯ ಕ್ರೋಧಕ್ಕೆ ಈಡಾದ ಕಾರಣವೇನಿರಬಹುದೆಂದು ಎಲ್ಲರೂ ವಿಚಾರಕ್ಕೊಳಗಾದರು. ತಾರಾಬಾಯಿಯು ತನ್ನನ್ನು ಹೊರದೂಡಿಸಿದಳೆಂದು ಚಂದ್ರಿಕೆಯು ಎದೆಗುಂದಲಿಲ್ಲ. ಅವಳು ಹೋದಲ್ಲಿ ಜನರಿಗೆ ಪ್ರೀತ್ಯಾಸ್ಪದಳಾಗತಕ್ಕವಳೇ ಆಗಿದ್ದಳು. ಅವಳ ನೈಸರ್ಗಿಕ ಮನೋಧರ್ಮವೇ ಹಾಗಿತ್ತು. ಆಗ ಅವಳು ರಾಜಸಬಾಯಿಯ ಬಳಿಗೆ ಹೋಗಿ ಆಶ್ರಯವನ್ನು ಕೇಳಿದಳು. ತನ್ನ ವೈರಿಯಿಂದ ಹೊರದೂಡಿಸಲ್ಪಟ್ಟವಳಾದ ಚಂದ್ರಿಕೆಗೆ ಆಶ್ರಯಕೊಡಬೇಕೆಂದು ಅವಳು ನಿಶ್ಚಯಿಸಿಕೊಂಡಳು. ಇದಲ್ಲದೆ ಅವಳ ಗುಣವಿಖ್ಯಾತಿಯನ್ನು ರಾಜಸಬಾಯಿಯು ಕೇಳಿದವಳಾದ್ದರಿಂದ, ಅವ

ಳನ್ನು ಆಶ್ರಯದಲ್ಲಿಟ್ಟುಕೊಂಡರೆ ಉಪಯೋಗವೇಳಬಹುದೆಂದು ಭಾವಿಸಿದಳು. ಅಂದಿನಿಂದ ಚಂದ್ರಿಕೆಯು ರಾಜಸಬಾಯಿಯಲ್ಲಿರತೊಡಗಿದಳು. ಸ್ವಲ್ಪ ದಿನಗಳಲ್ಲಿ ಅವಳು ತನ್ನ ಸದ್ಗುಣಗಳಿಂದ ರಾಜಸಬಾಯಿಯನ್ನು ತಲೆದೂಗಿಸಿದಳು. ಅವಳು ಉತ್ತರೋತ್ತರ ವೃದ್ಧಿಂಗತವಾಗತೊಡಗಿರುವ ಚಂದ್ರಿಕೆಯ ಬುದ್ಧಿಕೌಶಲ್ಯವನ್ನೂ, ಸದಾಚರಣೆಯನ್ನೂ, ಸಾತ್ವಿಕವೃತ್ತಿಯನ್ನೂ, ಮಧುರ ಹಾಗು ಸದ್ಬೋಧಪರವಾದ ವಾಣಿಯನ್ನೂ ಕೇಳಿ, "ಕುಮಾರಿ! ನಿನಗೆ ನಿನ್ನ ಮಾತಾಪಿತೃಗಳು 'ಸದ್ಬೋಧ ಚಂದ್ರಿಕೆ'ಯೆಂದು ನಾಮಕರಣ ಮಾಡಿದುದು ಯಥಾಯೋಗ್ಯವಿರುವದು!" ಎಂದು ಆಶ್ಚರ್ಯೋದ್ಗಾರ ತೆಗೆದಳು.

---

## ಅದಾವ ಮಾತು?

ಸುಭಾನರಾಯನು ಸ್ವಚ್ಛಂದವೃತ್ತಿಯ ತರುಣನಾಗಿದ್ದನು. ಸ್ತ್ರೀಯರ ಸಂಬಂಧವಾಗಿ ಇವನ ಕಲ್ಪನೆಯು ತೀರ ಅನುದಾರತನದ್ದಾಗಿತ್ತು. ಇವನು ಸಂಸಾರಪಾಶಬದ್ಧನಾಗಿರದ್ದರಿಂದ, ದ್ರವ್ಯಲೋಭಕ್ಕೊಳಗಾಗಿ ಕರ್ತವ್ಯಭ್ರಷ್ಟನಾಗಲಿಕ್ಕೆ ಎಷ್ಟೊಂದೂ ಸಿದ್ಧನಿರಲಿಲ್ಲ. ಇವನು ನಿಕಟವಾದ ವರ್ತನವುಳ್ಳವನಾದ್ದರಿಂದ ತಾರಾಬಾಯಿಗೆ ಕಾರಾಗೃಹದಲ್ಲಿ ಬಹಳೇ ತೊಂದರೆಯಾಗಿತ್ತು. ಅವಳಿಗೆ ಬಾಹ್ಯಸೃಷ್ಟಿಯ ಸಂಬಂಧವು ಪೂರಾ ತಪ್ಪಿತ್ತು. ಸುಭಾನರಾಯನು ಅನುಕೂಲವಾಗುವ ವರೆಗೆ ಯಾವ ಬಗೆಯ ಚಲನವಲನವನ್ನೂ ಮಾಡುವದು ಅಸಾಧ್ಯವೆಂದು ಅವಳಿಗೆ ತಿಳಿದದ್ದರಿಂದ, ಅವನನ್ನು ಒಡೆದುಕೊಳ್ಳುವದಕ್ಕಾಗಿ ಪ್ರಯತ್ನ ನಡೆಸಿಸಿದ್ದಳು. ಈ ಕಾರ್ಯಕ್ಕಾಗಿ ತನ್ನ ವಿಶ್ವಾಸಪಾತ್ರಳಾದ ಚಂದ್ರಿಕೆಯನ್ನು ತನ್ನ ಸಹಾಯಕ್ಕೆ ತೆಗೆದುಕೊಳ್ಳಬೇಕೆಂದು ಅವಳು ಯೋಚಿಸುತ್ತಿದ್ದಳು.

ತಾರಾಬಾಯಿಯು ಸುಭಾನರಾಯನ ಸ್ವಭಾವಪರಿಚಯ ಮಾಡಿಕೊಂಡಂತೆ ಚಂದ್ರಿಕೆಯ ಗುಣಗಳನ್ನಾದರೂ ಅರಿತುಕೊಂಡಿದ್ದಳು. ಅವಳು ಸಚ್ಛೀಲಳೂ, ಅಗಾಧ ಚಾತುರ್ಯವುಳ್ಳವಳೂ, ವಿಲಕ್ಷಣ ಸಾಹಸಿಯೂ, ಕೆಚ್ಚೆದೆಯವಳೂ, ದೃಢನಿಶ್ಚಯಿಯೂ, ಏಕನಿಷ್ಠಳೂ ಇರುವಳೆಂಬದನ್ನು ತಾರಾಬಾಯಿಯು ಮನಗಂಡಿದ್ದಳು. ಸುಭಾನರಾಯನನ್ನು ವಶಮಾಡಿಕೊಳ್ಳುವ ಕಾರ್ಯದಲ್ಲಿ ಚಂದ್ರಿಕೆಯ ಯೋಜನೆ ಮಾಡಿದರೆ, ಅವಳು ತನ್ನ ಪಾವಿತ್ರ್ಯಕ್ಕೆ ಹಾನಿಬಾರದಂತೆ ನಡೆದು, ಸಾವಧಾನತೆಯಿಂದ ಕಾರ್ಯಸಾಧನ ಮಾಡಿಕೊಳ್ಳುವಳೆಂದು ತಾರಾ

ಬಾಯಿಯು ತಿಳಿದುಕೊಂಡಿದ್ದಳು. ಅವನನ್ನು ಒಡೆದುಕೊಳ್ಳುವ ಕಾರ್ಯದಲ್ಲಿ ಚಂದ್ರಿಕೆಯು ಯೋಜನೆ ಮಾಡಿದರೆ ಜನರು ತನ್ನ ಮೇಲೆ ಅಪವಾದ ಕೊಡಬಹುದೆಂದು ಅವಳ ಮನಸ್ಸಿನಲ್ಲಿ ಬರುತ್ತಿದ್ದರೂ, ಈ ಮಹತ್ಕಾರ್ಯವನ್ನು ಸಾಧಿಸುವದಕ್ಕೆ ಅನ್ಯ ಉಪಾಯಗಳಿರದ್ದರಿಂದ, ತಾರಾಬಾಯಿಯು ಇಂತಹ ಕಟು ಕರ್ತವ್ಯವನ್ನು ಮಾಡಲು ಪ್ರವೃತ್ತಳಾಗಿದ್ದಳು.

ಚಂದ್ರಿಕೆಯು ತಾರಾಬಾಯಿಯ ಹೇಳಿಕೆಯ ಮೇರೆಗೆ ಸುಭಾನರಾಯನನ್ನು ತನ್ನ ಸೂತ್ರದ ಗೊಂಬೆಯಂತೆ ಕುಣಿಸುವ ಕಾರ್ಯವನ್ನು ಕೈಯಲ್ಲಿ ತೆಗೆದುಕೊಂಡಿದ್ದಳು. ಸುಭಾನರಾಯನು ಉದಾರನೂ, ನೀಚಮನೋವೃತ್ತಿಯವನೂ ಆಗಿದ್ದನು. ಚಂದ್ರಿಕೆಯಂತಹ ಅಮೂಲ್ಯ ಸ್ತ್ರೀರತ್ನದ ಸ್ನೇಹವು ಅವನಿಗೆ ಸ್ವರ್ಗೀಯ ಆನಂದವನ್ನುಂಟು ಮಾಡಿತು. ಅವಳ ಮಾತುಗಳೂ, ಆ ಮಾತಿನೊಳಗಿನ ಶಬ್ದಗಳೂ, ಶಬ್ದದೊಳಗಿನ ಅಕ್ಷರಗಳೂ ಅವನಿಗೆ ಪರಮ ಪೂಜ್ಯವಾಗಿ ತೋರತೊಡಗಿದ್ದರಲ್ಲಿ ಆಶ್ಚರ್ಯವಿಲ್ಲ. ಅವಳ ಆಜ್ಞೆಯು ದೇವಾಜ್ಞೆಗಿಂತಲೂ ಹೆಚ್ಚಿನದಾಗಿ ಅವನಿಗೆ ಕಾಣತೊಡಗಿತ್ತು. ಅವಳು ಹೇಳಿದ ಕೆಲಸವನ್ನು ಅವನು ಒಳ್ಳೆಯ ಉತ್ಸಾಹದಿಂದ ನೆರವೇರಿಸುತ್ತಿದ್ದನು. ಅವಳು ವಹಿಸಿದ ಕಾರ್ಯವನ್ನು ನೆರವೇರಿಸುವದಕ್ಕಾಗಿ, ಸುಭಾನರಾಯನು ಜೀವದ ಪರಿವೆಯನ್ನು ಸಹ ತ್ಯಜಿಸುತ್ತಿದ್ದನು. ಅವನು ತನ್ನ ಕೈಯಲ್ಲಿ ಪೂರ್ಣವಾಗಿ ಸಿಲುಕಿರುವನೆಂದು ಚಂದ್ರಿಕೆಯು ಮನವರಿಕೆಯಾದ ಕೂಡಲೆ, ರಾಮರಾಜನನ್ನು ಕಾರಾಗೃಹದಿಂದ ದಾಟಿಸುವ ಮಹತ್ಕಾರ್ಯವನ್ನು ಅವಳು ಕೊನೆಗಾಣಿಸಿದಳು.

ಎಂತಹ ಬಿಕ್ಕಟ್ಟಿನ ಪ್ರಸಂಗದಲ್ಲಾದರೂ ಶೀಲರಕ್ಷಣೆ ಮಾಡಿಕೊಳ್ಳುವದಕ್ಕೆ ತಾನು ಸಮರ್ಥಳಿರುವೆನೆಂಬ ಆತ್ಮವಿಶ್ವಾಸವು ಚಂದ್ರಿಕೆಗಿತ್ತು. ಸುಭಾನರಾಯನು ಅವಳಲ್ಲಿ ಪಾತಕೀ ಪ್ರೇಮವಿಟ್ಟಿದ್ದರೂ, ವಿಕಾರವಶನಾಗಿ ಕೀಳುತನದ ಭಾಷಣಗಳನ್ನಾಡಲಿಕ್ಕೆ ಹಿಂಜರಿಯುತ್ತಿದ್ದನು. ಕುಶಾಗ್ರಬುದ್ಧಿಯ ಚಂದ್ರಿಕೆಯು ಅವನ ಈ ಸ್ಥಿತಿಯನ್ನು ಅರಿತಿದ್ದಿಲ್ಲವೆಂತಲ್ಲ. ಅವಳು ತಾರಾಬಾಯಿಯ ಸಂಚಿನ ವಿಷಯವಾಗಿ ಏನಾದರೂ ಮಾತನಾಡುವದಿದ್ದರೆ, ಏಕಾಂತದಲ್ಲಾದರೂ ಅವನಿಗೆ ಭೆಟ್ಟಿಯಾಗುತ್ತಿದ್ದಳು. ಆತ್ಮನಾಶವಾದರೂ ಶೀಲಚ್ಯುತರಾಗಲಿಕ್ಕಿಲ್ಲವೆಂದು ಸತ್ಯಸಂಕಲ್ಪಮಾಡಿಕೊಂಡವರಿಗೆ ಯಾವ ಅಂಜಿಕೆಯುಂಟು? ಸುದೈವದಿಂದಲೋ, ದುರ್ದೈವದಿಂದಲೋ, ತಾರಾಬಾಯಿ-ಚಂದ್ರಿಕೆಯರಲ್ಲಿ ಮನಸ್ತಾಪವಾಗಿ ಚಂದ್ರಿಕೆಯು ರಾಜಸಬಾಯಿಯ ಆಶ್ರಯದಲ್ಲಿ ನಿಂತಳಷ್ಟೇ? ಅನಂ

ತರದಲ್ಲಾದರೂ ಅವಳು ಪ್ರಸಂಗ ಬಂದಾಗ ಸುಭಾನರಾಯನನ್ನು ಕಾಣುತ್ತಿದ್ದಳು.

ಸುಭಾನರಾಯನು ಚಂದ್ರಿಕೆಗಾಗಿ ಮನಸೋತಿದ್ದರೂ ತನ್ನ ಮನೋಗತವನ್ನು ಸ್ಪಷ್ಟವಾಗಿ ತಿಳಿಸಲಿಕ್ಕೆ ಧೈರ್ಯವಿಲ್ಲದವನಾಗಿದ್ದನು. ಅವಳು ಪ್ರೇಮಾಭಿನಯ ಮಾಡುತ್ತ ತನ್ನ ಮೂಗಿಗೆ ತುಪ್ಪ ಹಚ್ಚಿ ಕುಳ್ಳಿರಿಸಿದಂತೆ ಮಾಡಿರುವಳೆಂದು ಸುಭಾನರಾಯನಿಗೆ ಇತ್ತೀಚೆಗೆ ತಿಳಿಯತೊಡಗಿತ್ತು. ಒಮ್ಮೆ ಗಟ್ಟಿಗೆ ಹಚ್ಚಿ ಬಿಡಬೇಕೆಂದು ಅವನು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ಪ್ರಸಂಗವನ್ನು ಎದುರು ನೋಡುತ್ತಲಿದ್ದನು. ಬಾಲರಾಜನನ್ನು ಪಾರುಮಾಡಿದ ಕಾರ್ಯದಲ್ಲಿಯೂ ತಾರಾಬಾಯಿಯ ಇತರ ಕಾರಸ್ಥಾನದಲ್ಲಿಯೂ ತನ್ನಿಂದ ವಿಶೇಷವಾಗಿ ಸಹಾಯವು ದೊರೆಯುವದಕ್ಕೆ ಚಂದ್ರಿಕೆಯ ಮೇಲಿನ ಪ್ರೇಮವೇ ಕಾರಣವಾದುದರಿಂದ, ಈ ಉಪಕಾರದ ಪ್ರತಿಫಲವು ಅವಳಿಂದ ದೊರೆಯಬಹುದೆಂದು ಅವನು ಆಶೆಗೊಂಡಿದ್ದನು. ಇಷ್ಟು ದಿನಗಳ ವರೆಗೆ ವ್ಯವಹಾರವಾಗಿದ್ದರೂ, ಅವಳು ತನ್ನ ಮೇಲೆ ಪ್ರೇಮವಿಟ್ಟಬಗ್ಗೆ ಯಾವ ಚಿನ್ಹಗಳೂ ಕಾಣದ್ದರಿಂದ, ಅವನು ಭಯಗೊಂಡಿದ್ದನು. ಅವಳ ಮನೋದಯವನ್ನೊಮ್ಮೆ ತಿಳಿದು ಬಿಡಬೇಕೆಂದು ಅವನು ಯೋಚಿಸಿ, ಪನ್ಹಾಳಗಡದ ಹೊರಗಿನ ಮಾರುತಿಯ ದೇವಸ್ಥಾನದಲ್ಲಿ ಒಂದು ತನಗೆ ಭೆಟ್ಟಿಯಾಗಬೇಕೆಂದು ಚಂದ್ರಿಕೆಗೆ ಹೇಳಿ ಕಳುಹಿಸಿದ್ದನು.

ಸುಭಾನರಾಯನು ಐದಾರು ಗಳಿಗೆ ರಾತ್ರಿಯ ಮೇಲೆ ಮಾರುತಿಯ ದೇವಸ್ಥಾನದಲ್ಲಿ ಭೆಟ್ಟಿಯಾಗುವದಕ್ಕೆ ಹೇಳಿಕಳುಹಿದ್ದರಿಂದ, ಚಂದ್ರಿಕೆಯ ಮನಸ್ಸಿನಲ್ಲಿ ನಾನಾ ವಿಧವಾದ ವಿಚಾರಗಳು ಬರತೊಡಗಿದವು. ತಾರಾಬಾಯಿಯ ಸಂಬಂಧವಾದ ಯಾವದೊಂದು ಮಹತ್ವದ ಕಾರ್ಯವಿರಬಹುದೆಂದು ಅವಳು ಭಾವಿಸಿದಳು. ಆದರೂ ಅವಳು ಅಲ್ಲಿಗೆ ಹೊರಡುವಾಗ ತನ್ನ ಶೀಲಸಂರಕ್ಷಕ ಸಖಿಯಾದ ಕಠಾರಿಯನ್ನು ಒಳಿಯಲ್ಲಿ ತೆಗೆದುಕೊಂಡಳು.

ಇಂದಿಲ್ಲ ನಾಳೆಯಾದರೂ ಚಂದ್ರಿಕೆಯು ಪ್ರಾಪ್ತಿಯಾಗುವದೆಂದು ಸುಭಾನರಾಯನು ಕಾಲಕ್ರಮಣ ಮಾಡತೊಡಗಿದ್ದನು. ತಾನು ಮಾಡಿದ ಉಪಕಾರವನ್ನು ಆಡಿತೋರಿಸುತ್ತ, ಅದರ ಪ್ರತಿಫಲವು ತನ್ನ ಇಚ್ಛೆಯಂತೆ ದೊರೆಯಬೇಕೆಂದು ಅವನು ಪರ್ಯಾಯದಿಂದ ಆಡಿತೋರಿಸುತ್ತಿದ್ದನು. ಚಂದ್ರಿಕೆಯು ತಿಳಿದರೂ ತಿಳಿಯದ ಹಾಗೆ ನಟಿಸುತ್ತ ಕಾರ್ಯಭಾಗವನ್ನು ಈಡೇರಿಸಿಕೊಳ್ಳುತ್ತಿದ್ದಳು. ಇದೇ ಕ್ರಮವು ಕಡೆತನಕ ನಡೆದರೆ ತಾನು ಮೃಗಜಲದ ಬೆನ್ನು ಹತ್ತಿದ ಚಿಗರಿಯಂತೆ ನಿರರ್ಥಕ ಶ್ರಮವಾದೀತೆಂದು ತಿಳಿದು, ಈ ವಿಷಯವಾಗಿ ಸೋಕ್ಷ-

ಮೋಕ್ಷ ಮಾಡೇ ತೀರಬೇಕೆಂದು ಅವನು ನಿಶ್ಚಯಿಸಿ ಚಂದ್ರಿಕೆಯನ್ನು ಕರೆಯ ಕಳುಹಿದ್ದನು. ಅವನು ವೇಳೆಗೆ ಸರಿಯಾಗಿ ದೇವಾಲಯಕ್ಕೆ ಬಂದು ಅವಳ ನಿರೀಕ್ಷಣೆ ಮಾಡಹತ್ತಿದನು. ಆಗ ದೇವಾಲಯದ ಬಳಿಯ ವೃಕ್ಷದಲ್ಲಿ ಮನೆಮಾಡಿಕೊಂಡಿದ್ದ ಉಲೂಕಗಳು ಘೂತ್ಕಾರ ಮಾಡಹತ್ತಿದವು! ಈ ಅಶುಭ ಸೂಚಕ ಶಬ್ದದಿಂದ ಸುಭಾನರಾಯನು ತತ್ತರಿಸಿದನು. ಈ ಭೀತಿಯು ಅವನಲ್ಲಿ ಕಡೆತನಕ ಉಳಿಯಲಿಲ್ಲ. 'ಅರಣ್ಯದಲ್ಲಿ ಗೂಗೆಗಳ ಧ್ವನಿಯು ಆಗತಕ್ಕದ್ದೇ' ಎಂದು ಅವನು ಸಮಾಧಾನ ಹೊಂದಿದನು. ಬಹಳ ವೇಳೆಯವರೆಗೆ ಅವನು ಆ ದೇವಸ್ಥಾನದಲ್ಲಿ ಕುಳಿತುಕೊಂಡಿದ್ದನು. ನಿಯಮಿತ ವೇಳೆಗಿಂತ ಹೆಚ್ಚಾದ ಕಾಲವು ಗತಿಸಿದ್ದರೂ, ಚಂದ್ರಿಕೆಯು ಬಾರದ್ದರಿಂದ ಸುಭಾನರಾಯನು ಅವಳ ಆಗಮನದ ಬಗ್ಗೆ ಸಂದೇಹಗೊಳ್ಳಹತ್ತಿದನು.

ರಾಜಕುಮಾರಿಯು ಅರಮನೆಯಲ್ಲಿ ಎಲ್ಲರೂ ಮಲಗಿದ ಮೇಲೆ ಚಂದ್ರಿಕೆಯು ಅಲ್ಲಿಂದ ಹೊರಬಿದ್ದು, ಸುಭಾನರಾಯನ ಭೆಟ್ಟಿಗಾಗಿ ಮಾರುತಿಯ ಮಂದಿರದ ದಾರಿಯನ್ನು ಹಿಡಿದಳು. ಆಗ ಅವಳ ಮನಸ್ಸಿನಲ್ಲಿ ನಾನಾ ಪ್ರಕಾರದ ಯೋಚನೆಗಳು ಬರಹತ್ತಿದ್ದವು ಇಂತಹ ರಾತ್ರಿಯ ವೇಳೆ ಯಾವ ರಾಜಕಾರಣಕ್ಕಾಗಿ ಕರೆಯಿಸಿರಬಹುದು? ತಾರಾಬಾಯಿಯವರ ಮೇಲೆ ಯಾವದಾದರೂ ಹೊಸ ಆಪತ್ತು ಬಂದಿರಬಹುದೇನು? ಎಂದು ಅವಳು ವಿಚಾರಿಸುತ್ತ ಮಾರ್ಗ ಕ್ರಮಣ ಮಾಡಹತ್ತಿದಳು. ಅಪರಾತ್ರಿಯಲ್ಲಿ ಒಬ್ಬ ಕ್ಷುದ್ರ ಮನುಷ್ಯನೊಡನೆ ಏಕಾಂತದಲ್ಲಿ ಭಾಷಣ ಮಾಡುವದು ಅನರ್ಥಾವಹವೆಂಬ ಮಾತು ಅವಳ ನಿಷ್ಪಾಪಿಯಾದ ಮನಸ್ಸಿನಲ್ಲಿ ಯತ್ಕಿಂಚಿತ್ತಾದರೂ ಬಂದಿರಲಿಲ್ಲ. ಅವಳು ದೇವಾಲಯಕ್ಕೆ ಬಂದು ತಲುಪಿದಳು. ತನ್ನ ಮಾನಸರಾಜಹಂಸದ ಆಗಮನವಾದ್ದರಿಂದ, ಸುಭಾನರಾಯನಿಗೆ ಹಿಡಿಸಲಾರದಷ್ಟು ಆನಂದವಾಯಿತು. ಆಗ ಚಂದ್ರಿಕೆಯನ್ನು ಕುರಿತು,

"ಚಂದ್ರಿಕೆ, ಇಲ್ಲಿಗೆ ಬರುವದಕ್ಕೆ ನಿನಗೆ ಇಷ್ಟೇಕೆ ತಡವಾಯಿತು? ಬಹಳ ವೇಳೆಯಾದ್ದರಿಂದ ನೀನು ಇನ್ನು ಬರಲಿಕ್ಕಿಲ್ಲವೆಂದು ತಿಳಿದು, ನಾನು ತಿರುಗಿ ಹೊರಡುವ ವಿಚಾರದಲ್ಲಿದ್ದೆನು."

"ಸುಭಾನರಾವ, ಇಂದು ರಾಜಕುಮಾರಿಯವರು ಯಾವ ಕಾರಣದಿಂದಲೋ ಬೇಗನೆ ನಿದ್ರೆಹೋಗಲಿಲ್ಲ. ಅವರು ಮಲಗಿದ ಹೊರತು ನಾನು ಹೇಗೆ ಹೊರಟು ಬರಲಿ? ನನ್ನ ಮನಸ್ಸು ದೇವಾಲಯದ ಕಡೆಗೆ ನನ್ನನ್ನು ಎಳೆಯು

ತ್ತಿತ್ತು; ಆದರೆ ಮಾಡಲೇನು? ನಾನು ನಿರುಪಾಯಳಾಗಿ ಇಷ್ಟು ಹೊತ್ತಿನವರೆಗೆ ಅರಮನೆಯಲ್ಲಿದ್ದೆನು. ಅವರು ನಿದ್ದೆ ಹೋದ ಕೂಡಲೆ ಇಲ್ಲಿಗೆ ಹೊರಟು ಬಂದೆನು. ಸುಭಾನರಾವ, ನನ್ನ ಸಲುವಾಗಿ ಇಷ್ಟು ಹೊತ್ತಿನ ವರೆಗೆ ನೀವು ಶ್ರಮ ತೆಗೆದುಕೊಂಡು ಸುಮ್ಮನೆ ಕುಳಿತುಕೊಳ್ಳಬೇಕಾಯಿತು. ಇದಕ್ಕೆ ನೀವು ಸಿಟ್ಟಾಗದೆ ನನ್ನನ್ನು ಕ್ಷಮಿಸಿರಿ.''

''ಹುಚ್ಚ ಹುಡುಗೆ, ಚಂದ್ರಿ, ಇದುವರೆಗೆ ನಾನು ಎಂದಾದರೂ ನಿನ್ನ ಮೇಲೆ ಸಿಟ್ಟುಮಾಡಿರುವೆನೇನು? ನೀನು ನಿನ್ನಲ್ಲಿಯ ಅಮೌಲ್ಯ ಗುಣದಿಂದ ನನ್ನನ್ನು ಪೂರಾ ಸ್ವಾಧೀನ ಪಡಿಸಿಕೊಂಡು ಬಿಟ್ಟಿರುವೆ. ನಿನ್ನ ದಾಸಾನುದಾಸನಾದ ನಾನು ಹೃದಯದೇವತೆಯಾದ ನಿನ್ನ ಮೇಲೆ ಸಿಟ್ಟಾಗುವೆನೆ? ಯಾವದೋ ಒಂದು ಅಜ್ಞಾತ ವಿಕಾರವು ನನ್ನಲ್ಲಿ ಹುಟ್ಟಿರುವದರಿಂದ, ನಿನ್ನನ್ನು ಅಗಲಿರುವದು ದುಃಖದಾಯಕವಾಗತೊಡಗಿದೆ.''

ಸುಭಾನನ ಈ ಮಾತುಗಳಿಂದ ಚಂದ್ರಿಕೆಯಲ್ಲಿ ತಿರಸ್ಕಾರ ಸಂತಾಪಗಳು ಹುಟ್ಟಿದವು. ಅವನ ಮನಸ್ಸಿನ ಒಲವು ಅವಳಿಗೆ ಈಗ ಸ್ಪಷ್ಟವಾಗಿ ತಿಳಿಯಿತು. ಆದರೂ ಅವಳು ಯಾವ ಬಗೆಯ ವಿಕಾರವನ್ನು ವ್ಯಕ್ತಪಡಿಸದೆ ನಿರ್ಮಲ ಮನಸ್ಸಿನಿಂದ,

''ನೀವು ನನ್ನನ್ನು ಒಡಹುಟ್ಟಿದವಳಂತೆ ಪ್ರೀತಿಸುವಿರಿ. ನನ್ನನ್ನು ಅಗಲಿರುವದಕ್ಕೆ ನಿಮಗೆ ದುಃಖವಾಗುತ್ತಿದ್ದರೆ, ಅದು ನಿಮ್ಮಲ್ಲಿ ನೆಲೆಗೊಂಡಿರುವ ಭಗಿನೀ ಪ್ರೇಮದ ಚಿಹ್ನವಾಗಿರುವದು. ಪ್ರೇಮಾತಿರೇಕದಿಂದ ಹೀಗಾಗುವದು ಸ್ವಾಭಾವಿಕವು. ಇರಲಿ. ಸುಭಾನರಾವ, ಮಾತನಾಡುತ್ತ ವೇಳೆಗಳೆಯುವಂತಿಲ್ಲ. ರಾಜಸಬಾಯಿಯವರು ಎಚ್ಚರಾದಾಗ ನಾನು ಅಲ್ಲಿರಬೇಕಾಗುವದು. ಅವರು ಎದ್ದಾಗ ನಾನು ಅಲ್ಲಿರದಿದ್ದರೆ, ಇಲ್ಲದ ಸಂದೇಹಕ್ಕೆ ಆಸ್ಪದವಾಗಿ ಕೆಲಸವು ಕೆಟ್ಟುಹೋದೀತು. ಮಹತ್ವದ ಸಂಗತಿಯ ವಿಷಯವಾಗಿ ಮಾತನಾಡಬೇಕಾಗಿರುವದೆಂದು ನನ್ನನ್ನು ಕರೆಯಿಸಿದಿರಿ. ಆ ಸಂಗತಿ ಯಾವದೆಂಬದನ್ನು ಬೇಗನೆ ಹೇಳಿರಿ.''

''ಚಂದ್ರಿಕೆ, ನಾನು ನಿನ್ನ ಮುಂದೆ ಯಾವ ಸಂಗತಿಯನ್ನು ತಿಳಿಸಬೇಕೆಂದು ಯೋಚಿಸಿರುವೆನೋ ಆ ಸಂಗತಿಯು ಬಹಳೇ ಮಹತ್ವದ್ದಿರುವದು. ನನಗೆ ಗೊತ್ತಾಗಿರುವ ಸಂಗತಿಯು ತಾರಾಬಾಯಿಯವರಿಗೆ ನಿನ್ನ ಮುಖಾಂತರವಾಗಿ ಮೊದಲೇ ತಿಳಿಸಿದರೆ, ಅವರ ಕಾರಸ್ಥಾನವು ಯಶಸ್ವಿಯಾಗಿ ಫಲವು ಲಭಿ

ಸುವದು; ಇಲ್ಲದಿದ್ದರೆ ಅವರ ಹಾಗು ಅವರ ಹಸ್ತಕರೂ ನಾಶವಾಗುವ ಪ್ರಸಂಗವು ಬರುವದೆಂದು ನಾನು ಸಾರಿ ಹೇಳುವೆನು.

ಸುಭಾನರಾಯನ ಈ ಮಾತುಗಳನ್ನು ಕೇಳಿ ಚಂದ್ರಿಕೆಯ ಮನಸ್ಸು ಕೊಂದರೆಗೊಳಗಾಯಿತು. ತಾರಾಬಾಯಿಯವರ ಮೇಲೆಯೂ ಅವರ ಪರಿವಾರದ ಮೇಲೆಯೂ ಅಂತಹ ಗಂಡಾಂತರವೇನು ಒದಗತಕ್ಕದ್ದಿರಬಹುದೆಂದು ಅವಳು ಯೋಚನೆಗೊಳಗಾದಳು. ಆಗ ಅವಳು ಉತ್ಕಂಠತೆಯಿಂದ, "ಸುಭಾನರಾವ, ಹೇಳಿರಿ. ನಿಮಗೆ ತಿಳಿದಿರುವ ಮಹತ್ವದ ಸಂಗತಿಯನ್ನು ಹೇಳಿರಿ. ಮುಂದೊದಗಬಹುದಾದ ಪ್ರಸಂಗವು ಮೊದಲೇ ಗೊತ್ತಾದರೆ ಜಾಗ್ರತೆಯಿಂದ ನಡೆದು, ನಮ್ಮ ಒಡತಿಯರನ್ನು ಸಂಕಟದಿಂದ ಪಾರುಮಾಡಲಿಕ್ಕೆ ಅನುಕೂಲವಾಗಬಹುದು. ರಾಜಸಬಾಯಿಯವರ ಸೇವಾವೃತ್ತಿಯಲ್ಲಿದ್ದರೂ, ಗುಣಗ್ರಾಹಿಗಳಾದ ನೀವು ತಾರಾಬಾಯಿಯವರ ಹಿತಚಿಂತನೆಗಾಗಿ ಪ್ರಯತ್ನಿಸುವದನ್ನು ನೋಡಿ ಆನಂದವಾಗಿದೆ. ಹೇಳಿರಿ; ನನಗೆ ಆ ಮಹತ್ವದ ಸಂಗತಿಯನ್ನು ಬೇಗನೇ ತಿಳಿಸಿರಿ."

"ಚಂದ್ರೆ, ನಾನು ನಿಮ್ಮ ಒಡತಿಯ ಕಲ್ಯಾಣಕ್ಕಾಗಿ ಪ್ರಯತ್ನಿಸುತ್ತಿರುವದು, ಕೇವಲ ನಿನ್ನ ಸಲುವಾಗಿ-ನಿನ್ನಲ್ಲಿರುವ ಅದ್ವಿತೀಯ ಗುಣಗಳ ಸಲುವಾಗಿ! ನಿನ್ನಲ್ಲಿ ಅಂತಹ ಚಿತ್ತಾಕರ್ಷಕ ಗುಣವಿರುವದರಿಂದ, ನಾನು ಮೋಹಿತನಾದೆನು; ಕರ್ತವ್ಯಭ್ರಷ್ಟನಾದೆನು! ನಿನ್ನ ಒಡತಿಯ ವಿಷಯದ ಮಹತ್ವದ ಸಂಗತಿಯನ್ನು ಹಿಂದಿನಿಂದ ತಿಳಿಸುವೆನು." ಎಂದು ಸುಭಾನರಾಯನು ನುಡಿದು ತಡವರಿಸುತ್ತ, "ಮೊದಲು ನನ್ನ ಮಾತನ್ನು ಕೇಳಿದರೆ................" ಎಂದು ಸುಭಾನರಾಯನು ನುಡಿಯುತ್ತಿರಲು ಚಂದ್ರಿಕೆಯು,

"ಅದಾವ ಮಾತು?"

---

## ಕರ್ಮಫಲ!

ಚಂದ್ರಿಕೆಯಲ್ಲಿ ಸುಭಾನರಾಯನು ಪಾಪದೃಷ್ಟಿಯನ್ನಿಟ್ಟಿದ್ದನು. ಅವಳನ್ನು ತನ್ನ ವಶಕ್ಕೆ ತೆಗೆದುಕೊಳ್ಳದಿದ್ದರೆ ದೇಹದ ಸಾರ್ಥಕತೆಯಾಗುವದಿಲ್ಲವೆಂದು ಅವನ ಭಾವನೆಯಾಗಿತ್ತು. ಅವಳ ಮನೋಗತವನ್ನು ತಿಳಿಯುವದಕ್ಕಾಗಿ ಸುಭಾನರಾಯನು ಅವಳನ್ನು ಏಕಾಂತವಾದ ಸ್ಥಳಕ್ಕೆ ಬುದ್ಧಿಪೂರ್ವಕವಾಗಿ ಕರೆಯಿಸಿದ್ದನು. ತಾರಾಬಾಯಿಯ ಸಂಬಂಧದ ಯಾವ ಮಹತ್ವದ ಸಂಗತಿ

ಯನ್ನು ಅವನು ತಿಳಿಸುವವನಿರಲಿಲ್ಲ. ಚಂದ್ರಿಕೆಯು ಸಾಮೋಪಾಯದಿಂದ ವಶಳಾಗದಿದ್ದರೆ, ಬಲುಮೆಯಿಂದ ಕಾರ್ಯವನ್ನು ಸಾಧಿಸಿಕೊಳ್ಳಬೇಕೆಂಬ ಉದ್ದೇಶದಿಂದ ಅವಳನ್ನು ಇಂತಹ ರಾತ್ರಿಯ ವೇಳೆಯಲ್ಲಿ ಕರೆಯಿಸಿದ್ದನು. ತಾನು ಮಾಡಿದ ಉಪಕಾರವನ್ನು ನೆನಪಿಗೆ ತಂದುಕೊಟ್ಟು, ಅವಳಿಂದ ಪ್ರತ್ಯುಪಕಾರ ಪಡೆಯಬೇಕೆಂದು ಅವನು ಹವಣಿಸಿದ್ದನು. ಆಗ ಅವನು ಚಂದ್ರಿಕೆಯನ್ನು ಕುರಿತು,

“ಪ್ರಿಯ ಚಂದ್ರೆ, ನನ್ನ ಮಾತಿನಕಡೆಗೆ ಪೂರ್ಣ ಲಕ್ಷ್ಯಕೊಟ್ಟು, ಸದಸದ್ವಿವೇಕದಿಂದ ವರ್ತಿಸೆಂದು ನಾನು ಸೂಚಿಸದಿರಲಾರೆನು. ತಾರಾಬಾಯಿಯವರು ರಚಿಸಿದ ಕಾರಸ್ಥಾನವು ಎಷ್ಟು ಭಯಂಕರವಾದ್ದೆಂಬುದು ನಿನಗೆ ಗೊತ್ತಿರುವದಿಲ್ಲವೆ? ನಿನ್ನ ಒಡತಿಯ ಗುಪ್ತ ವ್ಯೂಹವು ಯಶಸ್ವಿಯಾಗಬೇಕೆಂದು ನೀನು ಮಧ್ಯಸ್ಥಳಾಗಿ ನನ್ನನ್ನು ಅವರ ಕಾರಸ್ಥಾನದಲ್ಲಿ ತೊಡಗಿಸಿದೆಯಲ್ಲವೆ? ನಿಮ್ಮ ಕಾರ್ಯಸಿದ್ಧಿಯಾಗುವದಕ್ಕಾಗಿ ನಾನು ಪ್ರಾಣಘಾತಕವಾದ ಕರ್ತವ್ಯಭಾರವನ್ನು ವಹಿಸಿ, ಯಾವ ಯಾವ ವೇಳೆಯಲ್ಲಿ ಎಂಥ ಎಂಥ ಕೆಲಸಗಳನ್ನು ಮಾಡಿರುವೆನೆಂಬುದಾದರೂ ನಿನಗೆ ಅರಿಯದ ವಿಷಯವಿರುವದಿಲ್ಲ. ನಿಮಗೆ ನನ್ನ ಸಹಾಯವಿರದಿದ್ದರೆ, ಆ ಮುದಿಗವರ್ತಿಯು ಹಾಡಿನ ಪೆಟ್ಟಿಗೆಯಲ್ಲಿ ಬಾಲರಾಜನನ್ನು ತೆಗೆದುಕೊಂಡು ಹೋಗಲಿಕ್ಕೆ ಸಮರ್ಥಳಾಗುತ್ತಿದ್ದಳೇನು? ನಿಮ್ಮ ಒಡತಿಯಾದ ತಾರಾಬಾಯಿಯವರು ಮೇಲಿಂದ ಮೇಲೆ ಬಂಕಟಸ್ವಾಮಿಗಳ ಮಠಕ್ಕೆ ಹೋಗಿ, ತಮ್ಮ ಗುಪ್ತವ್ಯೂಹವನ್ನು ನಡೆಯಿಸುತ್ತಿದ್ದರೇನು? ಆ ಗವರ್ತಿಯು ನಿನ್ನ ಸಂಗಡ ಕುಚು ಕುಚು ಮಾತನಾಡಿ ರಾಣಿಯ ಮನೆಯ ಸಂಗತಿಗಳನ್ನು ತಿಳಿದುಕೊಂಡು ಹೋಗಿ ತಾರಾಬಾಯಿಯವರ ಪಕ್ಷದ ಜನರಿಗೆ ತಿಳಿಸುತ್ತಿದ್ದಳೇನು? ನಿಮಗೆ ನನ್ನ ಸಹಾಯವಿರದಿದ್ದರೆ ಇಷ್ಟು ಹೊತ್ತಿಗೆ ತಾರಾಬಾಯಿಯು ಹಾಗು ಅವರ ಪಕ್ಷದ ಜನರ ಅವಸ್ಥೆಯು ಏನಾಗುತ್ತಿತ್ತೆಂಬುದನ್ನು ಕಲ್ಪಿಸಿರುವೆಯೇನು? ಬಾಲರಾಜನು ಇಂದಿನ ವರೆಗೆ ಜೀವಂತವಾಗಿ ಉಳಿಯುತ್ತಿದ್ದನೇನು? ನಾನು ನಿಮ್ಮೊಡನೆ ಸಹಕಾರದಿಂದ ನಡೆದಿದ್ದರಿಂದಲೇ, ನಿಮ್ಮ ಒಡತಿಯ ಕಾರಸ್ಥಾನವು ನಿರ್ಬಾಧಕವಾಗಿ ನಡೆದಿರುವದಲ್ಲವೆ! ರಾಜಸಾಬಾಯಿಯವರು ನನ್ನನ್ನು ಒಳ್ಳೆಯ ರಾಜನಿಷ್ಠನೆಂದು ನಂಬಿ, ನನ್ನ ಮೇಲೆ ಅತ್ಯಂತ ಮಹತ್ವದ ಕಾರ್ಯವನ್ನು ವಹಿಸಿರಲು, ನಾನು ಸ್ವಾಮಿದ್ರೋಹಿಯಾಗಿ ನಿಮ್ಮ ಕಾರಸ್ಥಾನದಲ್ಲಿ ಭಾಗ ತೆಗೆದುಕೊಂಡಿರುವೆನಲ್ಲವೆ? ನಾನು ವಿಶ್ವಾಸಘಾತಕನಾಗಿ ಇಂತಹ ನೀಚ ಕೃತ್ಯವನ್ನು ಮಾಡಿದ್ದರ ಗಂಧವು ಅವರಿಗೆ ಸಿಕ್ಕಿದರೆ, ನನ್ನ ಗತಿಯು ಏನಾಗುವ

ದೆಂಬದನ್ನು ನೀನು ನಿರಾಕರಿಸುವಿಯೇನು? ವಸ್ತುಸ್ಥಿತಿಯು ಹೀಗಿದ್ದರೂ ಇಂಥಹ ಭಯಂಕರವಾದ ಕಾರ್ಯವನ್ನು ನಾನು ಯಾವ ಆಶೆಯಿಂದ ಮಾಡಿರಬಹುದೆಂಬದು ನೀನು ತಿಳಿದಿರುವೆಯಲ್ಲವೆ? ಚಂದ್ರೆ, ಹೇಳು; ನಾನು ಯಾವ ಆಶೆಯಿಂದ ಇಂಥಹ ಭೀಷಣವಾದ ಕಾರ್ಯಕ್ಕೆ ತೊಡಗಿರುವೆನೆಂಬದನ್ನು ಹೇಳು.

"ಸುಭಾನರಾವ, ತಾರಾಬಾಯಿಯವರ ಪಕ್ಷವು ಸತ್ಪಕ್ಷವಿರುವದು. ನೀವು ಯಾವದೊಂದು ಉದ್ದೇಶದಿಂದ ತಾರಾಬಾಯಿಯವರ ಪಕ್ಷವನ್ನು ಹಿಡಿದಿರಬಹುದು. ನ್ಯಾಯಪ್ರಿಯ ಮನುಷ್ಯನು ಯಾವಾಗಲೂ ಸತ್ಪಕ್ಷವನ್ನೇ ಕೂಡುವನು. ನೀವು ನ್ಯಾಯಸಮ್ಮತವಾದ ಮಾರ್ಗವನ್ನವಲಂಬಿಸಿದ್ದನ್ನು ನೋಡಿದರೆ, ನಿಮ್ಮ ಗುಣದ ವೈಶಿಷ್ಟ್ಯವು ಚನ್ನಾಗಿ ವ್ಯಕ್ತವಾಗುತ್ತದೆ. ಇಷ್ಟು ದಿನಗಳ ವರೆಗೆ ತಾರಾಬಾಯಿಯವರ ಸೇವೆಯನ್ನು ಏಕನಿಷ್ಠೆಯಿಂದ ಮಾಡಿರುವಿರಿ; ಮುಂದಾದರೂ ಮಾಡುವಿರೆಂಬ ದೃಢವಿಶ್ವಾಸವು ನನಗಿರುವದು. ಹೀಗೆ ಆತ್ಮೀಯ ಭಾವನೆಯಿಂದ ಅವರ ಸೇವೆಯನ್ನು ಮಾಡತೊಡಗಿದ ನೀವು ಅದಕ್ಕೆ ತಕ್ಕ ಪ್ರತಿಫಲದ ಆಶೆಮಾಡಿದ್ದು ಅನುಚಿತವೇನೂ ಇರುವದಿಲ್ಲ. ತಾರಾಬಾಯಿಯವರು ಇನ್ನೂ ವಿಪನ್ನಾವಸ್ಥೆಯಲ್ಲಿರುವರು; ನಿರಾಧಾರಿಗಳಿರುವರು. ದೈವದ ಸುಯೋಗದಿಂದ ಅವರ ಭಾಗ್ಯೋದಯವಾಯಿತೆಂದರೆ, ಉಪಕಾರಕರ್ತರ ಇಚ್ಛೆಯನ್ನು ತೃಪ್ತಿಗೊಳಿಸಲಿಕ್ಕೆ ಅವರು ಹಿಂಜರಿಯುವದಿಲ್ಲವೆಂದು ನಾನು ಸತ್ಯವನ್ನು ಸ್ಮರಿಸಿ ಹೇಳುವೆನು."

ಚಂದ್ರಿಕೆಗೆ ಸುಭಾನರಾಯನ ಮನಸ್ಸಿನೊಳಗಿನ ಇಂಗಿತವು ಗೊತ್ತಾಗಿತ್ತು; ಆದರೂ ಅರಿಯದವಳಂತೆ ಬುದ್ಧಿಪೂರ್ವಕವಾಗಿ ಹೀಗೆ ನುಡಿದಿದ್ದಳು. ಅವಳು ಬೇಕೆಂದು ಹೀಗೆ ಹಾರಿಸಿಕೊಂಡು ಮಾತನಾಡುವದರ ಮರ್ಮವು ಸುಭಾನರಾಯನಿಗೆ ತಿಳಿಯದಿರಲಿಲ್ಲ. ಆಗ ಅವನು ಸಿಟ್ಟಿನಿಂದ,

"ಏ ಪೋರೀ, ಆಡಂಬರದ ಮಾತುಗಳಿಂದ ನನ್ನನ್ನು ಮೋಸಗೊಳಿಸಲಿಕ್ಕೆ ಯತ್ನಿಸುವೆಯಾ? ಪರಿಚಾರಕ ವರ್ಗದೊಳಗಿನ ನಮ್ಮಂಥವರು ಸತ್ಯಾಸತ್ಯಪಕ್ಷಗಳನ್ನು ತೆಗೆದುಕೊಂಡು ಮಾಡುವದೇನು? ಯಾರಿಂದ ನಮಗೆ ಲಾಭವಾಗುವದೋ ಅವರ ಪಕ್ಷವೇ ನಮಗೆ ಸತ್ಪಕ್ಷವು. ನ್ಯಾಯಪ್ರಿಯನೂ, ಸತ್ಪಕ್ಷಪಾತಿಯೂ ಎಂದು ನನ್ನನ್ನು ಮೇಲಕ್ಕೇರಿಸಿ ಹುಚ್ಚನನ್ನು ಮಾಡಬೇಕೆನ್ನುವಿಯಾ? ನೀನು ನನ್ನ ಹೃದಯವನ್ನು ಸೆಳೆದು, ನನ್ನನ್ನು ಬರಿಗೆ ಹಚ್ಚಬೇಕೆಂದು ಸಾಹಸ ಮಾಡುವೆಯಾ? ಚಂದ್ರಿಕೆ, ಮನಮೋಹನೆ, ಮಾನಸರಾಜಹಂಸಾ, ಇಂದಿಲ್ಲ

ನಾಳೆಯಾದರೂ ನೀನು ನನ್ನನ್ನು ಸ್ವೀಕರಿಸುವೆಯೆಂಬದರ ಆಶೆಯಿಂದಲೇ ನಾನು ಇದುವರೆಗೆ ಪ್ರಾಣಧಾರಣ ಮಾಡಿಕೊಂಡಿರುವೆನು ನನ್ನ ಪಂಚಪ್ರಾಣವೇ, ನಾನು ನಿನ್ನವನಾದೆನೆಂದು ಅಮೃತೋಪಮವಾಣಿಯಿಂದ ನುಡಿದು, ಈ ನಿನ್ನ ಚರಣಕಿಂಕರನನ್ನು ಕೃತಾರ್ಥಗೊಳಿಸು. ಮನೋಹರೇ, ಹೇಳು; ನೀನು ನನ್ನವಳಾದೆಯಾ?'' ಎಂದು ನುಡಿದು ಅವನು ಅಲ್ಲಿಂದ ಎದ್ದು ಚಂದ್ರಿಕೆಯ ಬಳಿಗೆ ಹೋದನು. ಆಗ ಅವಳು ಹಿಂದಕ್ಕೆ ಸರಿದು ಕ್ರೋಧದಿಂದ,

''ಸುಭಾನರಾವ, ನಿಮಗೆ ಇಂದು ಪಿಶಾಚಬಾಧೆಯಾಗಿರುವದೇನು? ನಿಮ್ಮ ಇಂದಿನ ವರ್ತನವನ್ನು ನೋಡಿ, ನನಗೆ ಬಹಳೇ ಆಶ್ಚರ್ಯವಾಗಿದೆ. ನೀವು ವಿವೇಕಶೂನ್ಯರಾಗಿ ಈ ಬಗೆಯ ದುಷ್ಟ ವಿಚಾರಗಳನ್ನು ಪ್ರಕಟಿಸುವಿರೆಂಬದು ನನಗೆ ತಿಳಿದಿದ್ದರೆ ಇಲ್ಲಿಗೆ ಬರುವ ಗೋಜಿಗೆ ಹೋಗುತ್ತಿರಲಿಲ್ಲ. ನನ್ನೊಡನೆ ನೀವು ಭಗಿನೀ ಪ್ರೇಮದಿಂದ ನಡೆಯುವಿರೆಂದು ನನ್ನ ಭಾವನೆಯಿತ್ತು, ಇಂದಿನ ನಿಮ್ಮ ವರ್ತನವನ್ನು ನೋಡಿ, ನನ್ನ ತಿಳುವಳಿಕೆಯು ಬದಲಾಗಿ ನೀಚ ಮನೋವೃತ್ತಿಯವರೊಡನೆ ಸ್ನೇಹ ಮಾಡಿದ್ದರಿಂದ ಪಶ್ಚಾತ್ತಾಪವಾಯಿತು. ಸುಭಾನರಾವ, ನಿಮ್ಮ ಮಹತ್ವದ ಸಂಗತಿಯನ್ನು ತಿಳಿದುಕೊಳ್ಳುವದಕ್ಕೆ ನನ್ನ ಇಚ್ಛೆಯಿರುವದಿಲ್ಲ. ಇಲ್ಲಿ ಅರಕ್ಷಣವಾದರೂ ನಿಲ್ಲುವದಕ್ಕೆ ನನ್ನ ಮನಸ್ಸು ಹೇಸಿಗೊಳ್ಳತೊಡಗಿರುವದು. ನೀವು ಕುಲಯುವತಿಯರೊಡನೆ ಈ ಬಗೆಯ ವರ್ತನವನ್ನಿಟ್ಟರೆ, ಅದರ ಫಲವು ಒಳ್ಳೆಯ ಭೀಷಣವಾದ ರೀತಿಯಿಂದ ದೊರೆಯುವದೆಂದು ನಿಮ್ಮನ್ನು ಜಾಗ್ರತೆಗೊಳಿಸುವೆನು.'' ಎಂದು ಚಂದ್ರಿಕೆಯು ನುಡಿದು ಆ ಸ್ಥಳದಿಂದ ಹೊರಡಲನುವಾದಳು ಕೂಡಲೆ ಸುಭಾನರಾಯನು ಅವಳ ಎದುರಿಗೆ ಬಂದು ಅಡ್ಡಾಗಿ ನಿಂತು,

'ಚಂದ್ರೆ, ಪ್ರಿಯಚಂದ್ರಿಕೆ, ನೀನು ಇಷ್ಟಾದರೂ ಜಾಣಳಿರುವೆಯೆಂದು ನಾನು ತಿಳಿದಿದ್ದೆನು. ಹುಚ್ಚ ಹುಡುಗಿಯೇ, ಎಷ್ಟೋ ವರ್ಷಗಳವರೆಗೆ ಸೇವೆ ಮಾಡಿದ ನನ್ನನ್ನು ತಿರಸ್ಕರಿಸುವದು ಕೃತಘ್ನತನದ ಲಕ್ಷಣವಲ್ಲವೆ? ನನ್ನಂತಹ ತರುಣನ ಕೈ ಹಿಡಿಯದಿದ್ದರೆ, ನೀನು ಏನು ಮಾಡತಕ್ಕವಳು? ಒಳ್ಳೆಯ ಮಾತಿನಿಂದ ನನ್ನನ್ನು ವರಿಸಲು ಒಪ್ಪದಿದ್ದರೆ, ಬಲಾತ್ಕಾರದಿಂದಲಾದರೂ ನಾನು ನನ್ನ ಮನೋರಥವನ್ನು ಪೂರ್ತಿಗೊಳಿಸತಕ್ಕವನೇ! ಇಲ್ಲದ ಗೊಂದಲವನ್ನು ಉಪಸ್ಥಿತ ಮಾಡುವದಕ್ಕಿಂತ ಸಮಂಜಸತನದಿಂದಲೂ ಆತ್ಮಸಂತೋಷದಿಂದಲೂ ನನ್ನ ಬಯಕೆಯನ್ನು ಈಡೇರಿಸುವದು ಉತ್ತಮವು.''

“ಸುಭಾನರಾವ, ನಾನು ವಿವಾಹಿತಸ್ತ್ರೀಯಾಗಿರುವೆನು. ನಿಮ್ಮ ಮಾತಿನೊಳಗಿನ ಒಂದು ಶಬ್ದವನ್ನಾದರೂ ಲಕ್ಷಿಸಲಿಕ್ಕೆ ನಾನು ಸಿದ್ಧಳಿಲ್ಲ. ಸಾಧ್ವಿಯರು ಇಂತಹ ಹೇಸಿತನದ ಮಾತುಗಳನ್ನು ಕೇಳುವದರಿಂದ ಸಹ ಅವರಿಗೆ ಪಾತಕವು ಘಟಿಸುತ್ತದೆ. ಪತಿವ್ರತೆಯರ ಶೀಲಕ್ಕೆ ಬಾಧೆ ಒದಗುವಂತಹ ಮಾತುಗಳನ್ನಾಡಿ ನರಕ ಭಾಜನರಾಗಬೇಡಿರಿ. ನನಗೆ ಬೇಗನೆ ದಾರಿಯನ್ನು ಬಿಡಿರಿ.”

“ಚಂದ್ರಿಕೆ, ನನ್ನ ಹೃದಯದೇವತೇ! ವಿಚಾರಮಾಡಿ ವರ್ತಿಸು. ನೀನು ನನ್ನ ಇಚ್ಛೆಯಂತೆ ನಡೆಯುವದಕ್ಕೆ ಒಳ್ಳೆಯ ಮಾತಿನಿಂದ ಒಪ್ಪದಿದ್ದರೆ, ಬಲುಮೆಯಿಂದಲಾದರೂ ನನ್ನ ಬಹುದಿವಸದ ಇಚ್ಛೆಯನ್ನು ಪೂರ್ತಿಮಾಡಿಕೊಳ್ಳದಿರಲಾರೆನೆಂದು ಮತ್ತೊಮ್ಮೆ ಹೇಳುತ್ತೇನೆ. ಲಾವಣ್ಯಲತಿಕೆಯಾದ ನೀನು ಕೋಮಲವಾದ ಪುಷ್ಪದಂತಿರುವೆ. ಮೃದುವಾದ ಕುಸುಮವನ್ನು ಸೂಕ್ಷ್ಮವಾಗಿಯೇ ಉಪಯೋಗಿಸಬೇಕಾಗುವದು. ಇದೆಲ್ಲವನ್ನು ತಿಳಿದು ತಿಳಿದು ಮೂರ್ಖತನವನ್ನು ಮಾಡಹೋದರೆ, ಬಲಾತ್ಕಾರದಿಂದ ಕುಸುಮವನ್ನು ಆಘ್ರಾಣಿಸಿ, ಅವಶ್ಯಕಂಡರೆ ಅದನ್ನು ಚೂರು ಚೂರು ಮಾಡಿ ಬೀಸಾಟಲಿಕ್ಕೆ ಈ ಕಠೋರವೃತ್ತಿಯ ಸುಭಾನನು ಹಿಂಜರಿಯುವದಿಲ್ಲ.”

ಸುಭಾನರಾಯನ ಮಾತುಗಳನ್ನು ಕೇಳಿ, ಚಂದ್ರಿಕೆಯ ಸಂತಾಪವು ಅತಿರೇಕವಾಗಿ ಪ್ರಜ್ವಲಿಸಿತು. ಆಗ ಕ್ರೋಧಯುಕ್ತ ಸ್ವರದಿಂದ, “ಮೂರ್ಖಾ! ನನ್ನನ್ನು ಕೊಲೆಮಾಡುವೆನೆಂದು ಭಯವನ್ನು ತೋರಿಸುವೆಯಾ? ಪತಿವ್ರತೆಯರ ಛಲನೆ ಮಾಡಿ ಇಂದಿನ ವರೆಗೆ ಎಷ್ಟು ಜನರ ಸತ್ಯನಾಶವಾಗಿರುವದೆಂಬದನ್ನು ವಿಚಾರಿಸಿ ಆಚರಣೆಯನ್ನಿಡು. ನಾನು ಅಸಹಾಯ್ಯ ಸ್ಥಿತಿಯಲ್ಲಿರುವೆನೆಂದು ಈ ರೀತಿಯಾಗಿ ಉದ್ದಾಮತನವನ್ನು ತೋರಿಸುವೆಯಾ? ಅಬಲೆಯರ ಮೇಲೆ ಶೌರ್ಯ ತೋರಿಸುವ ಟೊಣಪ ಪರಿಚಾರಕನೆ! ಒಂದು ಹೆಜ್ಜೆಯನ್ನಾದರೂ ಮುಂದಕ್ಕೆ ಇಟ್ಟೆಯಾದರೆ ನಿನ್ನ ಅವಸ್ಥೆಯು ಒಳಿತಾಗಲಾರದು! ನೀಚಾ, ಶ್ರೀರಾಮಸೇವಕನಾದ ಆಂಜನೇಯನು ನನ್ನ ಬೆಂಬಲವಿರಲಾಗಿ ನನ್ನನ್ನು ಸ್ಪರ್ಶಮಾಡುವದಕ್ಕೆ ನಿನ್ನ ಎದೆಯಾಗುವದೆ?”

“ಅಂತೂ, ಮಾರುತಿಯ ಮೇಲೆ ನೀನು ಚನ್ನಾಗಿ ವಿಶ್ವಾಸವಿಟ್ಟಿರುವೆಯೆಂದಂತಾಯಿತು. ಸಾಧ್ವಿಯೆಂದು ಜಂಬಪಡೆಯುವ ನಿನಗೂ, ನಿನ್ನ ಬೆಂಗಾವಲಾಗಿದ್ದ ಮಾರುತಿಗೂ ನಾನು ತಿಲಾಂಶವಾದರೂ ಅಂಜುವದಿಲ್ಲ. ಮನಸ್ಸಿನ ಮೇಲೆ ತೆಗೆದುಕೊಂಡರೆ, ಈ ಮಾರುತಿಯನ್ನಾದರೂ ಕಿತ್ತು ಬಿಸುಟುವೆನು.

ಪುರಾಣದೊಳಗಿನ ಕಟ್ಟುಕಥೆಗಳ ಮೇಲೆ ವಿಶ್ವಾಸವಿಟ್ಟು ನೀನು ಹೀಗೆಧೈರ್ಯ ತಾಳುವೆಯಲ್ಲವೆ? ಕಲ್ಲುದೇವರಿಗೆ ಅಂಜುವಂತಹನು ನಾನಿರುವದಿಲ್ಲ. ಚಂದ್ರೆ, ನಾನು ನಿನಗೆ ಇನ್ನೂ ವಿಚಾರ ಮಾಡಲು ಅವಧಿಯನ್ನು ಕೊಡುವೆನು."

"ಚಾಂಡಾಲಾ! ದೂರವಾಗು! ಸಮೀಪಕ್ಕೆ ಒಂದೆಯಾದರೆ ಪತಿವ್ರತೆಯ ಶಾಪದಿಂದ ಸುಟ್ಟುಹೋದೀ!"

"ತಿರುಕಹೆಂಗಳೆ! ನೀನು ನನ್ನೆದುರಿನಲ್ಲಿ ಇಲ್ಲದ ಸಾಧ್ವೀತ್ವದ ಆಡಂಬರವನ್ನು ಸುರಿಸಬೇಡ. ಇನ್ನೂ ಗಂಡನಿಗೆ ಕೂಡ ಗತಿಯಿಲ್ಲ; ಪಾತಿವ್ರತ್ಯದ ಸೋಗನ್ನು ತೋರಿಸ ಬರುವಳು ಹೊಯಾಕ್ಕಲೆ! ಚಂದ್ರೆ, ಒಳ್ಳೆಯ ಮಾತಿನಿಂದ ನನ್ನನ್ನು ಸುಖಿಯನ್ನಾಗ ಮಾಡಿದರೆ ನಿನ್ನ ಅಭ್ಯುದಯವೂ ಆಗುವದು; ನಿನ್ನ ಒಡತಿಯಾದ ತಾರಾಬಾಯಿಯ ಕಾರ್ಯಕ್ಕೆ ಹೆಚ್ಚಿನ ಸಹಾಯವಾದರೂ ದೊರೆಯುವದು."

"ದುಷ್ಟಾ! ಕುಲಾಂಗಾರಾ, ತಾರಾಬಾಯಿಯವರ ಕಾರಸ್ಥಾನವು ನೀತಿಯ ತಳಹದಿಯ ಮೇಲೆ ಕಟ್ಟಲ್ಪಟ್ಟಿರುವದು. ಆ ಕಾರ್ಯದಲ್ಲಿ ನಿನ್ನಂತಹ ನರಾಧಮನ ಅವಶ್ಯಕತೆಯಿಲ್ಲ. ನಿನ್ನಂಥವನನ್ನು ಅವರು ತಮ್ಮ ಕಾರ್ಯದಲ್ಲಿ ತೊಡಗಿಸಿಕೊಂಡರೆ ಅನರ್ಥವಾಗುವದೇ ಹೊರತು, ಕಾರ್ಯಸಿದ್ಧಿಯು ಎಂದೂ ಆಗಲಾರದು."

"ಚಂದ್ರಿಕೆ, ನಾನು ಹಿತಕ್ಕಾಗಿ ಯತ್ನಿಸುತ್ತಿದ್ದರೂ, ಅಪಶಬ್ದಗಳಿಂದ ನನ್ನನ್ನು ಅಪಮಾನಗೊಳಿಸುವೆಯಾ? ಇನ್ನು ನಾನು ಕೈಕಾಯಲಾರೆನು. ನಿನ್ನ ರಕ್ಷಣಕರ್ತನು ಯಾವನಿರುವನೋ ನೋಡುವಾ! ನಾನು ಈಗಲೆ ನನ್ನ ಮನೋರಥವನ್ನು ಪೂರ್ತಿಗೊಳಿಸಿಕೊಳ್ಳುವೆನು." ಸುಭಾನರಾಯನು ಹೀಗೆ ನುಡಿದು ಚಂದ್ರಿಕೆಯ ಮೈಮೇಲೆ ಹೋದನು. ಆಗ ಅವಳು ಕ್ರೋಧೋನ್ಮತ್ತಳಾಗಿ, "ಕುಲಾಂಗಾರಾ! ಚನ್ನಾಗಿ ಕಣ್ಣುತೆರೆ! ವ್ಯರ್ಥವಾಗಿ ಆತ್ಮನಾಶ ಮಾಡಿಕೊಳ್ಳಬೇಡ!"

ಚಂದ್ರಿಕೆಯ ಮಾತಿನ ಕಡೆಗೆ ಆ ನರಪಿಶಾಚಿಯಾದ ಸುಭಾನರಾಯನ ಲಕ್ಷ್ಯವೆಲ್ಲಿ? ಅವನು ಈಗ ದುಷ್ಟವಿಕಾರದಿಂದ ಪ್ರಜ್ಞಾಹೀನನಾಗಿ ಹೋಗಿದ್ದನು. ಅವನು ಉನ್ಮಾದಾವಸ್ಥೆಯಲ್ಲಿ ಅವಳ ಬಳಿಗೆ ಹೋಗಿ, ಮೈಮೇಲೆ ಕೈಹಾಕತಕ್ಕವನು; ಅಷ್ಟರಲ್ಲಿ ಚಂದ್ರಿಕೆಯು ಆದಿಶಕ್ತಿಯಂತೆ ಅವನ ಮೈಮೇಲೆ ಏರಿ ಹೋಗಿ: —"ಚಾಂಡಾಲಾ! ಅನುಭವಿಸು, ಕರ್ಮದ ಫಲವನ್ನು!" ಎಂದು

ನುಡಿದವಳೇ, ತನ್ನ ಪ್ರಾಣಸಖಿಯಾದ ಕಠಾರಿಯನ್ನು ಒಳ್ಳೆಯ ಶಕ್ತಿಯಿಂದ ಅವನ ಹೃದಯದಲ್ಲಿ ಸೇರಿಸಿದಳು! ಕೂಡಲೆ ಸುಭಾನರಾಯನು,

"ಅಯ್ಯೋ! ಸತ್ತೆ! ಸತ್ತೆ!" ಎಂದು ಚೀರಿ ಭೂಮಿಗೆ ಬಿದ್ದನು! ಕೂಡಲೆ ಚಂದ್ರಿಕೆಯು ವಿದ್ಯುಲ್ಲತೆಯಂತೆ ಅಲ್ಲಿಂದ ಹೊರಟು ನಿಬಿಡವಾದ ಅಂಧಕಾರದಲ್ಲಿ ಎತ್ತಲೋ ಹೊರಟು ಹೋದಳು!

ಸುಭಾನರಾಯನು ಬಲವಾದ ಗಾಯದಿಂದ ಹತಾಶನಾಗಿ ಮರಣೋನ್ಮುಖ ಸ್ಥಿತಿಯಲ್ಲಿ ಭೂಮಿಗೆ ಬಿದ್ದಿದ್ದನು. ಪಾತಕಿಗಳು ಕರ್ಮದ ಫಲವನ್ನನುಭವಿಸಬೇಕಾಗುವದಲ್ಲವೆ?

---

## ಭೀಷಣವಾದ ಸ್ವಪ್ನ.

ತಾರಾಬಾಯಿಯ ಪರಿವಾರವನ್ನೆಲ್ಲ ಸೆರೆಯಲ್ಲಿರಿಸಿದ ಮೇಲೆ ರಾಜಸಬಾಯಿಯು ತನ್ನ ಮಗನಾದ ಸಂಭಾಜಿಯನ್ನು ಕೊಲ್ಹಾಪುರದ ಸಿಂಹಾಸನದ ಮೇಲೆ ಕುಳ್ಳಿರಿಸಿದ್ದಳು. ತಾರಾಬಾಯಿಯು ಸೆರೆಮನೆಯಲ್ಲಿದ್ದರೂ, ಅವಳ ಭಯವು ರಾಜಸಬಾಯಿಗೆ ಬಹಳವಾಗಿತ್ತು. ಕಾರಸ್ಥಾನಿಯಾದ ಅವಳಿಂದ ಯಾವ ವೇಳೆಗೆ ಎಂಥ ಪ್ರಸಂಗವು ಘಟಿಸುವದೋ ಎಂದು ರಾಜಸಬಾಯಿಯು ಭಯಗೊಂಡಿದ್ದಳು. ತಾರಾಬಾಯಿಯು ಕಾರಾಗೃಹದಲ್ಲಿದ್ದಾಗ, ಅವಳ ಮಗನಾದ ಶಿವಾಜಿರಾಜನು ಮರಣ ಹೊಂದಿದನು. ಈ ಘಟನೆಯಿಂದ ರಾಜಸಬಾಯಿಗೆ ಆನಂದವಾಗಿತ್ತು. ಆದರೂ ಅವಳ ಮನಸ್ಸು ಆಗತಕ್ಕಷ್ಟು ತುಷ್ಟವಾಗಿರಲಿಲ್ಲ. ರಾಮರಾಜನ -ಶಿವಾಜಿರಾಜನ ಪುತ್ರನು ಅವಳ ಕಣ್ಣಲ್ಲಿ ಬಹಳವಾಗಿ ಒತ್ತತೊಡಗಿದ್ದನು. ಮುಂದೆ ಸ್ವಲ್ಪ ದಿವಸಗಳಲ್ಲಿ ಅವನೂ ಪರಲೋಕವಾಸಿಯಾದ ದೃಶ್ಯವು ಅವಳ ಕಣ್ಣಿಗೆ ಬಿದ್ದದರಿಂದ, ತಾರಾಬಾಯಿಯ ವಂಶವು ನಿರ್ಮೂಲವಾಯಿತೆಂದು ಶಾಂತಳಾದಳು. ತಾರಾಬಾಯಿಯು ಕಾರಾಗೃಹದಲ್ಲಿ ಬಿದ್ದು ಅವಳು ನಿರುಪಯೋಗಿಯಾದದ್ದರಿಂದ, ಅವಳ ಹಸ್ತಕರಾದ ಸರದಾರರೂ, ಸೇನಾಪತಿಗಳೂ ಉಳಿದ ಸಹಾಯಕರ್ತರೂ ನಷ್ಟವಾಗತೊಡಗಿದ್ದರು. ಪರಶುರಾಮಪಂತ ಪ್ರತಿನಿಧಿಯು ಸಾತಾರೆಯ ಕಾರಾಗೃಹದಲ್ಲಿ ಕೊಳೆಯತೊಡಗಿದ್ದನು. ಅವಳ ಬಲಗೈಯೂ ರಾಜ್ಯನೌಕೆಯ ಕರ್ಣಧಾರನೂ ಆಗಿದ್ದ ದಮಾಜಿ ಥೋರಾತನು ಶೃಂಖಲಾಬದ್ಧನಾಗಿ ಪುರಂದರದ ಕೋಟೆಯಲ್ಲಿ ತನ್ನ ಕಷ್ಟಮಯವಾದ ಆಯುಷ್ಯ

ವನ್ನು ಕಳೆಯುತ್ತೊಡಗಿದ್ದನು. ತಾರಾಬಾಯಿಯು ರಾಜ್ಯದ ಆಧಾರಸ್ತಂಭಗಳಾಗಿದ್ದ ಈ ಜನರ ಅವಸ್ಥೆಯು ತೀರ ಶೋಚನೀಯವಾದ್ದರಿಂದ, ಅವಳು ನಿರುತ್ಸಾಹಳಾಗಿದ್ದಳು. ಈ ಎಲ್ಲ ಘಟನೆಗಳನ್ನು ನೋಡಿ, ರಾಜಸಬಾಯಿಯು ಸಂಭ್ರಮಗೊಂಡಿದ್ದಳು. ಅವಳಿಗೆ ತಾರಾಬಾಯಿಯ ಭೀತಿಯು ತಿಲಾಂಶವಾದರೂ ಇದ್ದಿಲ್ಲ. ರಾಜ್ಯಲಕ್ಷ್ಮಿಯು ಸ್ವಾಧೀನವಾದ್ದರಿಂದ, ಅವಳು ತನ್ನ ಕರ್ತವ್ಯಪ್ರಭಾವವನ್ನೂ ಬುದ್ಧಿಚಾತುರ್ಯವನ್ನೂ ಆಗಿಂದಾಗ ವರ್ಣನೆ ಮಾಡಿಕೊಳ್ಳುತ್ತಿದ್ದಳು.

ರಾಜಸಬಾಯಿಯು ಪರಿಜನ ಸಮವೇತಳಾಗಿ ಮಾತನಾಡುತ್ತ ಕುಳಿತಿದ್ದಳು. ಆಗ ಹತ್ತುಗಳಿಗೆ ರಾತ್ರಿಯಾಗಿರಬಹುದು. ತನ್ನ ಒಡತಿಯು ಬೇಗನೆ ಮಲಗಬೇಕೆಂದು ಚಂದ್ರಿಕೆಯ ಅಭಿಲಾಷೆಯಿದ್ದಂತೆ ಕಂಡುಬರುತ್ತಿತ್ತು. ಕೆಲವು ವೇಳೆಯ ಮೇಲೆ ರಾಜಸಬಾಯಿಗೆ ಆಕಳಿಕೆಗಳು ಬರತೊಡಗಲು, ಚಂದ್ರಿಕೆಯು,

"ರಾತ್ರಿಯು ಬಹಳವಾಯಿತು. ಈಗಾಗಲೆ ಮಧ್ಯರಾತ್ರಿಯಾಗುತ್ತ ಬಂದಿರುವದು."

"ಚಂದ್ರಿಕೆ, ಇನ್ನು ನಾನು ಮಲಗುವೆನು; ನೀನಾದರೂ ಮಲಗು ನಡೆ.'

ರಾಜಸಬಾಯಿಯು ಹೀಗೆ ನುಡಿದು, ತನ್ನ ಸುವರ್ಣ ಮಂಚಕದ ಕಡೆಗೆ ಸಾಗಿದಳು. ಚಂದ್ರಿಕೆಯಾದರೂ ಅಲ್ಲಿಂದ ತನ್ನ ನಿತ್ಯ ಶಯನದ ಸ್ಥಾನಕ್ಕೆ ಬಂದಳು. ಸ್ವಲ್ಪ ವೇಳೆಯಲ್ಲಿ ರಾಜಸಬಾಯಿಯೂ ಉಳಿದ ದಾಸಿಯರೂ ನಿದ್ರೆ ಹೋಗಲು, ಚಂದ್ರಿಕೆಯು ಅಲ್ಲಿಂದ ಹೊರಟಳು. ಅವಳು ಮುಂದೆ ಯಾವ ಕೃತಿಯನ್ನು ಜರುಗಿಸಿದಳೆಂಬುದು ವಾಚಕ ಮಹಾಶಯರ ಸ್ಮರಣೆಯಲ್ಲಿರುವದು. ಅವಳು ರಾಜಸಬಾಯಿಯ ಅರಮನೆಯಿಂದ ಹೊರಟು, ಸುಭಾನರಾಯನನ್ನು ಕಂಡು, ಕರ್ಮದ ಫಲವನ್ನು ಭೋಗಿಸಲಿಕ್ಕೆ ಹಚ್ಚಿದಳು.

ಮಧ್ಯರಾತ್ರಿಯು ಮೀರಿತ್ತು. ಚರಸೃಷ್ಟಿಯು ವಿಶ್ರಮಿಸಿದ್ದರಿಂದ, ಎಲ್ಲ ಕಡೆಯಲ್ಲಿ ಶಾಂತತಾ ಸಾಮ್ರಾಜ್ಯವು ಪ್ರಸ್ಥಾಪಿತವಾಗಿತ್ತು. ರಾಜಸಬಾಯಿಯ ಅರಮನೆಯಲ್ಲಾದರೂ ಸ್ತಬ್ಧತೆಯು ನೆಲೆಗೊಂಡಿತ್ತು. ದಿವಸವೆಲ್ಲ ದುಡಿದು ದಣಿದ ದಾಸಿಯರು ನಿದ್ರಾಸುಖವನ್ನು ಅನುಭವಿಸತೊಡಗಿದ್ದರು. ರಾಜಸಬಾಯಿಗೆ ಮಾತ್ರ ಚನ್ನಾಗಿ ನಿದ್ರೆ ಹತ್ತಿರಲಿಲ್ಲ. ಅಷ್ಟರಲ್ಲಿ ಅವಳು ಚಟ್ಟನೆ ಚೀರಿ, ತತ್ತರಿಸುತ್ತ ಎದ್ದು ಕುಳಿತಳು. ಅವಳ ಧ್ವನಿಯನ್ನು ಕೇಳಿ ದಾಸಿಯರು ಎಚ್ಚತ್ತರು. ಆಗ ಒಬ್ಬ ದಾಸಿಯು ಅವಳನ್ನು ಕುರಿತು,

"ರಾಣೀಸಾಹೇಬರೆ, ಏನಾಯಿತು? ಸ್ವಪ್ನವನ್ನು ಕಂಡಿರೇನು? ಬೆದರ ಬೇಡಿರಿ." ಎಂದು ನುಡಿಯುತ್ತ ಅವಳ ಬಳಿಗೆ ಹೋದಳು. ಅಷ್ಟರಲ್ಲಿ ಉಳಿದ ದಾಸಿಯರಾದರೂ ಅಲ್ಲಿಗೆ ಬಂದರು. ರಾಜಸಬಾಯಿಯ ಸರ್ವಾಂಗವು ಇನ್ನೂ ಥರಥರನೆ ನಡುಗುತ್ತಿತ್ತು. ಅವಳು ಬೆದರಿದ ಹರಿಣಿಯಂತೆ ಟಕಮಕ ನೋಡ ಹತ್ತಿದ್ದಳು. ಕೆಲವು ದಾಸಿಯರು ಅವಳಿಗೆ ಗಾಳೀ ಹಾಕಹತ್ತಿದ್ದರು; ಒಬ್ಬಳು ಅವಳನ್ನು ಹಿಡಿದುಕೊಂಡು ಕುಳಿತಿದ್ದಳು. ಆಗ ಇನ್ನೊಬ್ಬಳು ಲಿಂಗಿನ ಕಾಯಿಯನ್ನು ನಿವಾಳಿಸಿ ಚಲ್ಲಿದಳು. ಮುಂದೆ ಸ್ವಲ್ಪ ಹೊತ್ತಿನ ಮೇಲೆ, ಅವಳಿಗೆ ಸ್ವಲ್ಪ ಧೈರ್ಯವು ಬಂದಿತು; ಆದರೂ ಅವಳ ಹೃದಯದಲ್ಲಿ ಭೀತಿತರಂಗಗಳು ಅವಕಾಶದಿಂದ ಬರಹತ್ತಿದ್ದವು. ಅಲ್ಲಿ ಎಲ್ಲ ದಾಸಿಯರೂ, ಅರಮನೆಯೊಳಗಿನ ಇತರ ಮನುಷ್ಯರೂ ಬಂದಿದ್ದರು; ಚಂದ್ರಿಕೆಯು ಮಾತ್ರ ಅಲ್ಲಿರಲಿಲ್ಲ. ಈ ಗೊಂದಲದಲ್ಲಿ ಯಾರ ಲಕ್ಷ್ಯವೂ ಅತ್ತಕಡೆಗೆ ಹೋಗಿರಲಿಲ್ಲ.

ರಾಜಸಬಾಯಿಯು ಚಂದ್ರಿಕೆಯನ್ನು ಬಹಳವಾಗಿ ಪ್ರೀತಿಸುತ್ತಿದ್ದರಿಂದ, ಎಲ್ಲ ದಾಸಿಯರು ಅವಳನ್ನು ಕಂಡರೆ ಸೇರುತ್ತಿದ್ದಿಲ್ಲ. ಹೊಸದಾಗಿ ಬಂದವಳಾದ ಅವಳು ರಾಣಿಯ ಮನಸ್ಸನ್ನು ತನ್ನ ಕಡೆಗೆ ಎಳೆದುಕೊಂಡು ಅವಳ ಮೇಲೆ ತನ್ನ ವರ್ಚಸ್ಸನ್ನು ಕೆಡಹಿದ್ದರಿಂದ, ಎಲ್ಲ ದಾಸೀ ಜನರೂ ಅವಳ ವಿಷಯವಾಗಿ ಮತ್ಸರಗ್ರಸ್ತರಾಗಿದ್ದರು. ಅರಮನೆಯಲ್ಲಿ ಈ ಪ್ರಕಾರದ ಗೊಂದಲವು ನಡೆದು, ಸಂದಿಗೊಂದಿಯೊಳಗಿನವರು ಬಂದಿದ್ದರೂ, ಚಂದ್ರಿಕೆಯು ಇಲ್ಲದಿರದ್ದನ್ನು ನೋಡಿ ಅವರು ವಿಸ್ಮಯಗೊಂಡರು. ಅವಳ ವಿಷಯದಲ್ಲಿ ದುರ್ಭಾವನಾಪ್ರೇರಿತರಾದ ಜನರು ಈ ಸ್ಥಿತಿಯನ್ನು ನೋಡಿ, ಅವಳಲ್ಲಿ ವಿಕಲ್ಪವುಳ್ಳವರಾದರು. ಇದೇ ಸಂಧಿಯಲ್ಲಿ ಅವಳ ವರ್ತನದ ಬಗ್ಗೆ ರಾಣಿಯವರ ಮುಂದೆ ಬಿನ್ನಯಿಸಿಕೊಂಡು, ಅವಳ ಗರ್ವಖಂಡನೆ ಮಾಡಲಿಕ್ಕೆ ಒಳ್ಳೆಯ ಸಂಧಿಯು ಪ್ರಾಪ್ತವಾಯಿತೆಂದು ಅವಳು ಹರುಷಗೊಂಡರು. ಇಂತಹ ಅಮೌಲ್ಯವಾದ ಸಂಧಿಯನ್ನು ಒದಗಿಸಿ ಕೊಟ್ಟದ್ದರಿಂದ, ಅವರು ಸರ್ವಾಂತರ್ಯಾಮಿ ಪರಮಾತ್ಮನನ್ನು ಅನನ್ಯ ಭಾವದಿಂದ ಪ್ರಾರ್ಥಿಸಿದರು

ತಮ್ಮ ಮನಸ್ಸಿನಲ್ಲಿ ಹುಟ್ಟಿದ ಕೃಷ್ಣಚಿತ್ರವನ್ನು ರಾಣಿಯ ಮುಂದೆ ನಿಕ್ಷಿಸಲಿಕ್ಕೆ ಯಾರಿಗೂ ಧೈರ್ಯವಾಗದ್ದರಿಂದ, ಆ ದಾಸಿಯರು ವಿಶಿಷ್ಟವಾದ ದೃಷ್ಟಿಯಿಂದಲೂ, ಮಂದಹಾಸದಿಂದಲೂ ಒಬ್ಬರ ಮುಖವನ್ನೊಬ್ಬರು ನೋಡುತ್ತ ನಿಂತುಕೊಂಡಿದ್ದರು. ರಾಣಿಯು ಅವರ ಚೇಷ್ಟೆಗಳ ಕಡೆಗೆ ಲಕ್ಷ್ಯವಿಲ್ಲದವ

ಳಾಗಿದ್ದಳು; ಅವಳು ತನ್ನ ಸ್ವಪ್ನದ ಬಗ್ಗೆ ವಿಚಾರಿಸುತ್ತ ತಟಸ್ಥಳಾಗಿ ಕುಳಿತು ಬಿಟ್ಟಳು. ಕೆಲವು ಹೊತ್ತಿನ ಮೇಲೆ ಅವಳು ದಾಸಿಯರನ್ನು ಕುರಿತು,

"ನನಗೆ ಭೀಷಣವಾದ ಸ್ವಪ್ನವು ಬಿದ್ದಿತ್ತು. ಅದರಿಂದ ನನ್ನ ಸ್ಥಿತಿಯು ಹೀಗಾಗಿದೆ. ನೀವು ಈಗಲೆ ಸಂಭಾಜಿಮಹಾರಾಜರ ಮಂದಿರಕ್ಕೆ ಹೋಗಿ, ಅವರನ್ನು ಕರೆದುಕೊಂಡು ಬನ್ನಿರಿ." ಎಂದು ನುಡಿದ ಕೂಡಲೆ ದಾಸಿಯರು ಅವನನ್ನು ಕರೆಯುವದಕ್ಕಾಗಿ ಹೊರಟರು. ಅನಂತರದಲ್ಲಿ ಚಂದ್ರಿಕೆಯು ನೆನಪಾಗಿ ರಾಜಸಬಾಯಿಯು ಅಲ್ಲಿದ್ದ ದಾಸಿಯನ್ನು ಕುರಿತು, "ಚಂದ್ರಿಕೆಯು ಕಾಣುವದಿಲ್ಲವಲ್ಲ?" ಎಂದು ಕುತೂಹಲಪೂರ್ವಕವಾಗಿ ವಿಚಾರಿಸಿದ ಕೂಡಲೆ, ಅವರು ಅವಳ ಮಾತಿಗೆ ಉತ್ತರ ಕೊಡದೆ ಮುಖವನ್ನು ತಿರುಗಿಸಿ, ಬಾಯಿಗೆ ಸೆರಗು ಮುಚ್ಚಿ ಪಿಸಿಪಿಸಿ ನಗತೊಡಗಿದರು. ಅವಳು ತನ್ನ ಪ್ರಿಯಕರನ ಬಳಿಗೆ ಹೋಗಿರುವಳೆಂದು ತಿಳಿಸುವದಕ್ಕಾಗಿ ಹೀಗೆ ಕುತ್ಸಿತವಾದ ಅಭಿನಯವನ್ನು ಮಾಡತೊಡಗಿದ್ದರು. ತಮ್ಮ ಈ ದುಷ್ಟವಾದ ಮನೋಗತವನ್ನು ತಿಳಿಸಿ ಬಿಡಬೇಕೆಂದು ಅವರ ಮನಸ್ಸಿನಲ್ಲಿದ್ದರೂ ಒಬ್ಬರಿಗೂ ಧೈರ್ಯವಾಗಲಿಲ್ಲ. ಆಗ ಒಬ್ಬ ವಯಾತೀತದಾಸಿಯೊಬ್ಬಳು ರಾಣಿಯನ್ನು ಕುರಿತು, "ಹರೆಯದ ಹುಡುಗಿಯು. ಸ್ವೇಚ್ಛಾವಿಹಾರಿಯಾದ ಅವಳು ಎಲ್ಲಿಗೆ ಹೋಗಿರುವಳೆಂಬದನ್ನು ಹೇಗೆ ಹೇಳಬೇಕು?"

ಹೀಗೆ ಒಬ್ಬ ದಾಸಿಯು ನುಡಿದ ಕೂಡಲೆ, ಮತ್ತೊಬ್ಬಳು ವಿಕಟಹಾಸ್ಯಗೈಯುತ್ತ ಕುಚೇಷ್ಟೆಯಿಂದ, "ರಾಣೀಸರಕಾರಕ್ಕೆ ಸ್ವಪ್ನವು ಬಿದ್ದು ಅವರು ಎಚ್ಚರಾಗುವದಕ್ಕೂ, ಆ ಮಾನಸಿಕರಾಣಿಯು ಇಲ್ಲಿ ಇಲ್ಲದಂತಾದದ್ದಕ್ಕೂ ಗಂಟೇ ಬಿದ್ದಿತು. ಅವಳು ಹೊರಗೆ ಹೋದದ್ದು ಇಂದು ಮೊದಲನೆಯ ಸಾರೆ ನಮಗೆ ಗೊತ್ತಾಯಿತು. ದಿನಾಲು ಹೀಗೆಯೇ ಹೋಗುತ್ತಿರುವಳೆಂದು ನಾವು ಹೇಗೆ ತಿಳಿಯಬೇಕು? ದಿನಾಲು ಇದೇ ಪ್ರಕಾರವಾಗಿ ಸ್ವೈರಸಂಚಾರ ಮಾಡುತ್ತಿರುವಳೆಂದು ನಾವು ಸಾಧಿಸಿದರೆ, ಅವಳು ನಮ್ಮೊಡನೆ ಜಗಳಾಡಲಿಕ್ಕಿಲ್ಲವೆ?" ಎಂದು ಮೂರನೆಯವಳು ಬುದ್ಧಿಪೂರ್ವಕವಾಗಿ ಹೀಗೆ ನುಡಿದಳು. ಆಗ ಮತ್ತೊಬ್ಬಳು ಕಣ್ಣು ಚಿವುಟಿ, 'ಏನೇ, ನೀನು ಇಷ್ಟೇಕೆ ಹೆದರುವೆ? ಹೇಳೇ ಅವಳು ದಿನಾಲು ಹೋಗುತ್ತಿರುವಳೆಂದು. ನಾವು ಮಾತನಾಡಿದ್ದನ್ನು ಅವಳ ಮುಂದೆ ಯಾರು ಹೇಳಲಿಕ್ಕೆ ಹೋಗುವರು? ಒಂದು ವೇಳೆ ಯಾರಾದರೂ ಹೇಳಿದರೆ, ಹೇಳಲಿ, ಅವಳು ಹೇಳಿಕೆಯ ಮಾತುಗಳನ್ನು ಕೇಳಿ ನಮಗೆ ಮಾಡುವದೇನು?

ಮೂಗು ಕೊಯಿಸಿಕೊಂಡ ಅವಳು ನನ್ನೊಡನೆ ವ್ಯಾಜ್ಯಕ್ಕೆ ಒರುವ ಧೈರ್ಯ ಮಾಡುವಳೇ?''

''ಸಾಧ್ವಿಯರಂತೆ ಆಡಂಬರ ಮಾಡುತ್ತ ಸ್ವೇಚ್ಛಾವಿಹಾರಿಗಳಾದ ಇಂತಹರನ್ನು ಕಂಡರೆ ನನ್ನ ಮೈಯುರಿಯುತ್ತದೆ'' ಎಂದು ಇನ್ನೊಬ್ಬ ದಾಸಿಯು ಸಿಟ್ಟಿನ ಅಭಿಪ್ರಾಯವ ತೋರಿಸಿ ಮಾತನಾಡಿದಳು.

ಚಂದ್ರಿಕೆಯು ವಿಷಯವಾಗಿ ಮತ್ಸರಗ್ರಸ್ತರಾದ ದಾಸಿಯರು ತಮ್ಮ ತಮ್ಮೊಳಗೆ ಮಾತನಾಡತೊಡಗಿದ್ದರು. ಈ ಮಾತುಗಳು ರಾಣಿಯ ಕಿವಿಗೆ ಬೀಳಬೇಕೆಂದು ಅವರ ಮನೀಷೆಯಿತ್ತು. ರಾಜಸಬಾಯಿಯ ಮನಸ್ಸು ಚಲವಿಚಲವಾದದ್ದರಿಂದ, ಇವರ ಕೋಟಿಕ್ರಮದ ಕಡೆಗೆ ಲಕ್ಷ್ಯವಿದ್ದಿಲ್ಲ. ಆದ್ದರಿಂದ ಆ ದಾಸಿಯರ ಯತ್ನವು ನಿಷ್ಪ್ರಯೋಜಕವಾಯಿತು.

ದಾಸಿಯರಿಂದ ನಿರೋಪವು ತಿಳಿದ ಕೂಡಲೆ, ಸಂಭಾಜಿರಾಜನೂ ಅವನ ಪತ್ನಿಯಾದ ಜಿಜಾಬಾಯಿಯೂ ಅಲ್ಲಿಗೆ ಬಂದು ರಾಜಸಬಾಯಿಗೆ ಆದರದಿಂದ ನಮಿಸಿ ಸಂಭಾಜಿರಾಜನು,

''ಮಾಸಾಹೇಬ, ಸ್ವಪ್ನವು ಬಿದ್ದುದರಿಂದ ನೀವು ಭಯಭೀತರಾಗುವಿರೆಂದು ದಾಸಿಯರು ಹೇಳಿದರು. ನಿಮಗೆ ಅಂಥ ಭೀಷಣವಾದ ಸ್ವಪ್ನವೇನು ಬಿದ್ದಿತ್ತು?''

''ಜಿಜಾಬಾಯಿ, ನೀನೂ ಈ ವೇಳೆಯಲ್ಲಿ ಬಂದದ್ದರಿಂದ, ಆನಂದವಾಯಿತು. ಮನಸ್ಸಿನ ಗೊಂದಲದಲ್ಲಿ ನಾನು ನಿನ್ನನ್ನು ಕರೆದುಕೊಂಡು ಒರುವದಕ್ಕಾಗಿ ತಿಳಿಸಲಿಕ್ಕೆ ಮರೆತೆನು.''

''ತಾವು ನನಗೆ ಹೇಳಿ ಕಳುಹಿಸಬೇಕೇನು? ನೀವು ಭಯಪಟ್ಟಿಲರಾದದ್ದನ್ನು ಕೇಳಿ, ಸ್ವಸ್ಥವಾಗಿ ಮನೆಯಲ್ಲಿಯೇ ಕುಳಿತುಕೊಳ್ಳಲಿಕ್ಕೆ ನನಗೆ ಹೇಗೆ ಮನಸ್ಸಾಗಬೇಕು?''

''ಜಿಜಾ, ನೀನು ಸುಜ್ಞಳಿರುವೆ. ಸದ್ಗುಣಿಯಾದ ನಿನ್ನಂಥ ಸೊಸೆಯು ದೊರೆತದ್ದರಿಂದ ನನಗೆ ಆನಂದವಾಗಿದೆ'' ಎಂದು ರಾಜಸಬಾಯಿಯು ಜಿಜಾಬಾಯಿಯ ಶ್ಲಾಘನೆ ಮಾಡಿ, ಅಲ್ಲಿದ್ದ ಪರಿಚಾರಕರಿಗೆ ಹೊರಗೆ ಹೋಗಬೇಕೆಂದು ತಿಳಿಸಿದಳು. ಅವರು ಹೊರಟು ಹೋದ ಮೇಲೆ ರಾಜಸಬಾಯಿಯು ''ನಾನು ಇಂದು ಭೀಷಣವಾದ ಸ್ವಪ್ನವನ್ನು ಕಂಡೆನು. ತಾರಾಬಾಯಿಯ ಮೊಮ್ಮಗನೂ ಹುಚ್ಚ ಶಿವಾಜಿಯ ಮಗನೂ ಆದ ರಾಮರಾಜನು ಮಡಿದು ಎಷ್ಟೋ ವರ್ಷಗಳಾಗಿ ಹೋಗಿರುವವಲ್ಲವೆ? ಅವನ ವಿಷಯವಾಗಿ ಇಂದು ಸ್ವಪ್ನವು ಬಿದ್ದ

ಕಾರಣವೇನಿರಬಹುದು? ನನ್ನ ಕನಸಿನಲ್ಲಿ ಒಂದು ಅಕ್ರಾಳ-ವಿಕ್ರಾಳ ಪಿಶಾಚಿಯು ಬಂದು ನನ್ನನ್ನು ನೋಡಿ, ಹಲ್ಲು ತಿನ್ನುತ್ತ ಕರ್ಕಶವಾದ ಸ್ವರದಿಂದ—'ರಾಮು ರಾಜನು ಮಡದಿರುವನೆಂದು ನೀನು ತೀರ ನಿಶ್ಚಿಂತಳಾಗಿರುವೆಯಲ್ಲವೆ? ನಿನ್ನ ಕಲ್ಪನೆಯು ತೀರ ತಪ್ಪಾದದ್ದಾಗಿರುವದು. ರಾಮುರಾಜನ ಕಲೇವರವೆಂದು ಯಾವ ದೇಹವು ಮಣ್ಣುಪಾಲಾಯಿತೋ, ಅದು ಅವನ ದೇಹವಲ್ಲ. ನಿಜವಾದ ರಾಮುರಾಜನು ನಿನ್ನ ಕಣ್ಣಲ್ಲಿ ಮಣ್ಣು ಹಾಕಿ, ಸುರಕ್ಷಿತವಾದ ಸ್ಥಳದಲ್ಲಿ ಬೆಳೆಯುತೊಡಗಿರುವನು. ಅಂದು ಮಣ್ಣುಪಾಲು ಮಾಡಿದ ಪ್ರೇತವು ನನ್ನದಾಗಿತ್ತು. ರಾಮುರಾಜನು ಸತ್ತನೆಂದೂ, ನಿನಗೆ ಯಾರೂ ಪ್ರತಿಸ್ಪರ್ಧಿಗಳು ಉಳಿಯಲಿಲ್ಲವೆಂದೂ, ನೀನು ನಿಶ್ಚಿಂತಳಾಗಿ ಕುಳಿತಿರುವೆ. ಈಗ ನಿನ್ನ ವಿರುದ್ಧವಾಗಿ ಭಯಂಕರವಾದ ಕಾರಸ್ಥಾನವು ನಡೆದಿರುವದು. ಈ ಸಂಧಿಯಲ್ಲಿ ನೀನು ಎಚ್ಚರಗೊಳ್ಳದಿದ್ದರೆ, ನಿಶ್ಚಯವಾಗಿ ಕೆಡುವೆ. ತಾರಾಬಾಯಿಯು ಸ್ವಾರ್ಥಲೋಲುಪಳಾಗಿ ನನ್ನ ದೇಹದ ವಿಟಂಬನೆ ಮಾಡಿದ್ದರಿಂದ, ಅವಳ ಕಾರ್ಯನಾಶಮಾಡಿ ಸೇಡು ತೀರಿಸಿಕೊಳ್ಳಬೇಕೆಂದು ನಾನು ನಿಜಸ್ಥಿತಿಯನ್ನು ನಿನಗೆ ತಿಳಿಸಿರುವೆನು. ನನ್ನ ಮಾತಿನ ಸತ್ಯತೆಯು ಬೇಗನೆ ಕಂಡು ಬರುವದು, ಎಂದು ನುಡಿದು, ಆ ಪಿಶಾಚಿಯು ಮೊದಲಿಗಿಂತ ದೊಡ್ಡ ಸ್ವರೂಪವನ್ನು ತಾಳಿ ಹೊರಟು ಹೋಯಿತು. ಅದು ಹೋಗುವಾಗ ಭಯಂಕರವಾದ ಧ್ವನಿಯಾದ್ದರಿಂದ ನಾನು ಬೆದರಿ ಎಚ್ಚತ್ತೆನು. ಈ ಭೀಷಣವಾದ ಸ್ವಪ್ನವನ್ನು ಮನಸ್ಸಿನಲ್ಲಿ ತಂದರೆ ಈಗಲೂ ನಡುಗು ಹುಟ್ಟುತ್ತಲಿದೆ."

ರಾಜಸಬಾಯಿಯು ಹೇಳಿದ ಭೀಷಣವಾದ ಸ್ವಪ್ನದ ಸಂಗತಿಯನ್ನು ಕೇಳಿ, ಸಂಭಾಜಿರಾಜನೂ ಜಿಜಾಬಾಯಿಯೂ ಭಯಚಕಿತರಾದರು.

---

## ಕರ್ಮಕಥೆ.

ರಾಜಸಬಾಯಿಯ ಭೀಷಣವಾದ ಸ್ವಪ್ನದ ಸಂಗತಿಯನ್ನು ಕೇಳಿ ಸಂಭಾಜಿರಾಜನ ಮನಸ್ಸು ಗಾಬರಿಗೊಂಡಿದ್ದರೂ, ತನ್ನ ಮನಸ್ಸಿನೊಳಗಿನ ವಿಕಾರವನ್ನು ವ್ಯಕ್ತಪಡಿಸಲಿಲ್ಲ. ಭಯವಿಹ್ವಲಳಾದ ತಾಯಿಯ ಮನಸ್ಸನ್ನು ಸಮಾಧಾನಪಡಿಸಬೇಕೆಂದು ಅವನು ನಿಶ್ಚಯಿಸಿಕೊಂಡನು. ಇದೊಂದು ಅಶುಭಸೂಚಕ ಸ್ವಪ್ನವೆಂದು ಅವನಾದರೂ ತಿಳಿದುಕೊಂಡಿದ್ದನು. ಅವನ ಪತ್ನಿಯಾದ ಜಿಜಾಬಾಯಿಯೂ

ಈ ಘಟನೆಯಿಂದ ಬಹಳವಾಗಿ ಅಂಜಿದ್ದಳು. ಆ ಪತಿ-ಪತ್ನಿಯರು ಭಯವಿಹ್ವಲವಾದ ತಮ್ಮ ಮನಸ್ಸನ್ನು ಹೇಗಾದರೂ ಗಟ್ಟಿಮಾಡಿಕೊಂಡು ರಾಜಸಬಾಯಿಯನ್ನು ಸಮಾಧಾನಪಡಿಸಲುದ್ಯುಕ್ತರಾದರು.

"ಮಾಸಾಹೇಬ, ಸ್ವಪ್ನಗಳೆಲ್ಲವೂ ನಿಜವಾದವುಗಳಿರುತ್ತವೆಂದು ತಿಳಿದುಕೊಳ್ಳಕೂಡದು. ಯಾವಾಗಲೋ ಒಮ್ಮೆ ನಿಮ್ಮ ಮನಸ್ಸಿನಲ್ಲಿ ಈ ವಿಷಯದ ವಿಚಾರವು ಪ್ರಾದುರ್ಭವಿಸಿರಬಹುದು; ಆದ್ದರಿಂದಲೇ ನಿಮಗೆ ಇಂತಹ ಸ್ವಪ್ನವು ಬಿದ್ದಿತು. 'ಮನಸಿನಲ್ಲಿದ್ದದ್ದು ಕನಸಿನಲ್ಲಿ' ಎಂಬ ನಾಣ್ಣುಡಿಯು ಸತ್ಯವಾದದ್ದಿರುವದು." ಎಂದು ಸಂಭಾಜಿರಾಜನು ನುಡಿಯಲು, ರಾಜಸಬಾಯಿಯು:

"ಸಂಭಾಜಿರಾಜ, ನಿನ್ನ ಅಭಿಪ್ರಾಯವು ನಿಜವಿರುವದು. ಹಗಲು ಯಾವದೊಂದು ವಿಚಾರವು ಮನಸ್ಸಿನಲ್ಲಿದ್ದು ಅದು ಒಂದೇಸವನೆ ಕಟೆಯುತ್ತಿದ್ದರೆ, ಅದೇ ಚಿತ್ರವು ಕನಸ್ಸಿನಲ್ಲಿ ಕಾಣುವದು. ಈ ಸ್ವಪ್ನದಂತಹ ವಿಚಾರವನ್ನು ನಾನು ಎಂದೂ ಮಾಡಿಲ್ಲ; ಹೀಗಿದ್ದು ಈ ಬಗೆಯ ಕನಸು ಬಿದ್ದ ಕಾರಣವೇನು? ನನಗಂತೂ ಈ ಸ್ವಪ್ನವು ನಿಜವೆಂದು ಭಾಸವಾಗತೊಡಗಿದೆ. ತಂತ್ರಗಾರಳಾದ ತಾರಾಬಾಯಿಯು ಈ ಬಗೆಯ ಕಾರಸ್ಥಾನಗಳನ್ನು ರಚಿಸಿರಬಹುದೆಂದು ನನಗೆ ಸಂಶಯ ಬರತೊಡಗಿದೆ."

"ಕೈಯೊಳಗಿನ ಕಂಕಣಕ್ಕೆ ಕನ್ನಡಿಯೇಕೆ ಬೇಕು? ಸ್ವಪ್ನದ ಪ್ರಚೀತಿಯು ಬೇಗನೆ ಕಂಡು ಬರುವದೆಂದು ಪಿಶಾಚಿಯು ಹೇಳಿಲ್ಲವೆ? ಹೀಗಿದ್ದ ಮೇಲೆ ಸತ್ಯಾಸತ್ಯಗಳ ನಿರ್ಣಯವು ತಾನಾಗಿಯೇ ಆಗುವದು."

ರಾಜಸಬಾಯಿಗೆ ಜಿಜಾಬಾಯಿಯು ಹೀಗೆ ಹೇಳುತ್ತಿರಲು, ಒಬ್ಬ ಪರಿಚಾರಕನು ಅಲ್ಲಿಗೆ ಬಂದು ಮುಜುರೆ ಮಾಡಿ,

"ಸರಕಾರ, ಸುಭಾನರಾವ ಕಿಲ್ಲೇದಾರರು ಮಾರುತಿಯ ದೇವಾಲಯದಲ್ಲಿ ಭಯಂಕರವಾದ ಗಾಯಹೊಂದಿ ಬಿದ್ದಿರುವರೆಂದೂ, ಅವರು ತೀರ ಮರಣೋನ್ಮುಖ ಸ್ಥಿತಿಯಲ್ಲಿರುವರೆಂದೂ ಇಬ್ಬರು ಮನುಷ್ಯರು ಹೇಳಿದರು. ಯಾರೋ ದುಷ್ಟರು ಅವರ ಹೃದಯದಲ್ಲಿ ಕಠಾರಿಯಿಂದ ಇರಿದಂತೆ ಕಾಣುವದೆಂದು ಆ ಮನುಷ್ಯರು ನನಗೆ ತಿಳಿಸಿದ್ದರಿಂದ, ನಾನು ಇಲ್ಲಿಗೆ ಧಾವಿಸಿ ಬಂದೆನು. ಪ್ರಾಣೋತ್ಕ್ರಮಣವಾಗುವದಕ್ಕಿಂತ ಮುಂಚೆ ನಿಮಗೆ ಭೆಟ್ಟಿಯಾಗಿ ನಾಲ್ಕು ಮಹತ್ವದ ಮಾತುಗಳನ್ನು ಹೇಳಬೇಕೆಂದು ಅವರು ಪ್ರಾಣವನ್ನು ಹಿಡಿದಿರುವರಂತೆ" ಎಂದು ಸೇವಕನಾದ ಬಹಿರಜಿಯು ಹೇಳಿದ ಕೂಡಲೆ, ರಾಜಸಬಾಯಿಯು ಸಂಭಾಜಿಯನ್ನು ಕುರಿತು,

"ನನಗೆ ಬಿದ್ದ ಸ್ವಪ್ನದ ದೃಷ್ಟಾಂತವಾಗುವದೆಂಬಂತೆ ತೋರುವದು" ಎಂದು ಹೇಳಿ, ಬಹಿರಜಿಯನ್ನು ಕುರಿತು:—"ನೀನು ಈಗ ಯಾವ ವ್ಯವಸ್ಥೆಯನ್ನು ಮಾಡಿ ಬಂದಿರುವೆ?"

"ಇಂತಹ ಅಪರಾತ್ರಿಯಲ್ಲಿ ಸರಕಾರದ ಸ್ವಾರಿಯು ದೇವಾಲಯಕ್ಕೆ ಹೋಗುವದು ಯುಕ್ತವಲ್ಲನೆಂದು ತಿಳಿದು, ಸುಭಾನರಾಯನನ್ನು ತರುವದಕ್ಕಾಗಿ ಮೇಣೆಯನ್ನು ಕಳುಹಿಸಿ ಇಲ್ಲಿಗೆ ಬಂದೆನು ಹೆಚ್ಚಿಗೆ ವೇಳೆ ಕಳೆದರೆ ಸುಭಾನರಾಯರ ಅಂತವಾಗಿ ಕಾರ್ಯವು ಕೆಡುವದೆಂದು, ಸರಕಾರದ ಆಜ್ಞೆಯಿಲ್ಲದೆ ಅವರನ್ನು ತರುವದಕ್ಕೆ ಮೇಣೆಯನ್ನು ಕಳುಹಿದ್ದನ್ನು ನೋಡಿ ಸಿಟ್ಟಾಗಬಾರದೆಂದು ಪ್ರಾರ್ಥಿಸುವೆನು."

"ಬಹಿರಜಿ, ನೀನು ಪ್ರಸಂಗಾವಧಾನದಿಂದ ನಡೆದದ್ದಕ್ಕಾಗಿ ನಾವು ನಿನ್ನ ದೂರದರ್ಶಿತ್ವವನ್ನು ಹೊಗಳುವೆವು. ಕಿಲ್ಲೇದಾರನು ಇಲ್ಲಿಗೆ ಬರುವದರೊಳಗೆ ರಾಜವೈದ್ಯರನ್ನು ಕರೆದುಕೊಂಡು ಬಾ." ಎಂದು ಸಂಭಾಜಿಯು ಆಜ್ಞೆಯಾದ ಕೂಡಲೆ, ಬಹಿರಜಿಯು ಅಲ್ಲಿಂದ ಹೊರಟನು. ಅವನು ಅಲ್ಲಿಂದ ಹೊರಟು ಹೋದ ಮೇಲೆ, ರಾಜಸಬಾಯಿಯ ಮನಸ್ಸಿನಲ್ಲಿ ನಾನಾ ಬಗೆಯ ವಿಚಾರ ತರಂಗಗಳು ಹೊಯ್ದಾಡಹತ್ತಿದವು. 'ಇಂತಹ ವೇಳೆಯಲ್ಲಿ ಸುಭಾನರಾಯನು ಮಾರುತಿಯ ದೇವಾಲಯಕ್ಕೆ ಹೋದ ಉದ್ದೇಶವೇನಿರಬಹುದು? ಅಲ್ಲಿ ಅವನು ಗಾಯಹೊಂದಿದ ಕಾರಣವೇನಿದ್ದೀತು? ಪ್ರಾಣೋತ್ಕ್ರಮಣವಾಗುವದಕ್ಕಿಂತ ಮುಂಚೆ, ನನಗೆ ಭೆಟ್ಟಿಯಾಗುವಂತಹ ಮಹತ್ವದ ಕಾರಣವೇನಿರಬಹುದು? ಪಿಶಾಚಿಯು ನನಗೆ ಸ್ವಪ್ನದಲ್ಲಿ ಹೇಳಿದ ಮಹತ್ವದ ಸುದ್ದಿಯನ್ನೇ ಅವನು ತಿಳಿಸುತ್ತಿರಬಹುದೇನು?' ಮೊದಲಾದ ವಿಚಾರಗಳು ರಾಜಸಬಾಯಿಯ ಮನಸ್ಸಿನಲ್ಲಿ ಏಳ ಹತ್ತಿದ್ದವು. ಅವಳು ಮಗನ ಹಾಗು ಸೊಸೆಯ ಸಂಗಡ ಈ ವಿಷಯವಾಗಿ ಬಹುಪರಿಯಿಂದ ಆರೆದಾಟಮಾಡಹತ್ತಿದ್ದಳು. ಈ ವೇಳೆಯಲ್ಲಿ ಚಂದ್ರಿಕೆಯು ಇಲ್ಲದಂತಾಗಿರುವದರಿಂದ, ಈ ಕೊಲೆಗೆ ಅವಳ ಸಂಬಂಧವೇನಾದರೂ ಇರಬಹುದೇನೆಂದು ಅವರು ಸಂಶಯ ಪಡಹತ್ತಿದರು. ಅಷ್ಟರಲ್ಲಿ ರಾಜವೈದ್ಯನು ಅಲ್ಲಿಗೆ ಬಂದನು. ಅವನು ತನ್ನ ಎಲ್ಲ ಔಷಧಿಯ ಬಡವೆಗಳನ್ನು ವ್ಯವಸ್ಥೆಯಿಂದಿರಿಸಿ, ಸುಭಾನರಾಯನ ಮಾರ್ಗಪ್ರತೀಕ್ಷೆ ಮಾಡಹತ್ತಿದನು. ಅಷ್ಟರಲ್ಲಿ ಮೇಣೆಯೂ ರಾಜಮಂದಿರದ ಬಾಗಿಲ ಒಳಗೆ ಬಂದಿತು.

ಬೋವಿಗಳು ಮೇಣೆಯನ್ನು ಕೆಳಗಿಳಿಸಿ, ಅದರ ಮೇಲಿನ ಆವರಣವನ್ನು

ಓರೆಮಾಡಿದರು. ಒಳಗೆ ಸುಭಾನರಾಯನು ಮೃತ್ಯುಪಥವನ್ನು ಹಿಡಿಯುವದಕ್ಕೆ ಸಿದ್ಧನಾಗಿದ್ದನು. ಅವನ ವಸ್ತ್ರಗಳೆಲ್ಲ ರಕ್ತಮಯವಾಗಿದ್ದವು. ಇನ್ನೂ ಅವನ ಶರೀರದಿಂದ ರುಧಿರಪ್ರವಾಹವು ಸಾಗಿತ್ತು! ಈ ಲೋಮಹರ್ಷಣವಾದ ಸ್ಥಿತಿಯನ್ನು ನೋಡಿ, ರಾಜಸಬಾಯಿಯೇ ಮೊದಲಾದವರು ಬಹಳವಾಗಿ ಅಂಜಿದರು. ಆಗ ವೈದ್ಯರಾಜನು ಅವನ ನಾಡಿಗಳನ್ನು ಹಿಡಿದು ನೋಡಿ, ಗಂಭೀರಮುದ್ರೆಯಿಂದ ಗಹನವಾದ ವಿಚಾರದಲ್ಲಿರುವ ಅಭಿಪ್ರಾಯವನ್ನು ತೋರಿಸುತ್ತ ಸ್ವಲ್ಪ ವೇಳೆಯವರೆಗೆ ತಟಸ್ಥನಾಗಿ ಕುಳಿತನು. ಸ್ವಲ್ಪಹೊತ್ತಿನ ಮೇಲೆ ಅವನು ವಿಷಾದಯುಕ್ತಧ್ವನಿಯಿಂದ, "ಸುಭಾನರಾಯರ ನಾಡಿಯು ಬಹಳೇ ಕ್ಷೀಣವಾಗಿರುವದು. ಇನ್ನು ಮೇಲೆ ಇವರು ಬದುಕಲಾರರು." ಎಂದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದನು. ಸ್ವಲ್ಪ ವೇಳೆಯ ಮೇಲೆ ಸುಭಾನರಾಯನು ಮೆಲ್ಲಗೆ ಕಣ್ಣು ತೆರೆದನು. ಆಗ ಸಮ್ಮುಖದಲ್ಲಿ ರಾಜಸಬಾಯಿಯು ಇದ್ದದ್ದನ್ನು ನೋಡಿ, ಅವನಿಗೆ ಅತ್ಯಾನಂದವಾಯಿತು. ಅವನು ತನ್ನ ಮನಸ್ಸಿನ ಗುಹ್ಯವಾದ ವಾರ್ತೆಯನ್ನು ಹೇಳಬೇಕೆಂದು ಯತ್ನಿಸತೊಡಗಿದ್ದನು; ಅವನ ಮುಖದಿಂದ ಮಾತುಗಳೇ ಹೊರಡದಂತಾದ್ದರಿಂದ, ಅವನು ಒಂದೇ ಸವನೆ ಚಡಪಡಿಸತೊಡಗಿದನು. ಆಗ ರಾಜಸಬಾಯಿಯು ರಾಜವೈದ್ಯನನ್ನು ಕುರಿತು,

"ವೈದ್ಯರಾಜರೆ, ಸುಭಾನರಾಯನು ಏನೋ ಹೇಳಬೇಕೆಂದು ಯತ್ನಿಸುತ್ತಿರುವನು. ಔಷಧೀದ್ರವ್ಯವನ್ನು ಹಾಕಿ ಅವನಿಗೆ ಮಾತನಾಡುವ ಶಕ್ತಿ ಬರುವಂತೆ ಮಾಡಿರಿ." ಎಂದು ನುಡಿಯಲು, ಅವನು ತನ್ನಲ್ಲಿದ್ದ ಕುಪ್ಪಿಯೊಳಗಿಂದ ಚಿಂತಾಮಣಿ ಮಾತ್ರೆಯನ್ನು ತೆಗೆದು! "ರಾಣೀಸರಕಾರ, ಈ ಮಾತ್ರೆಯ ಘನತೆಯನ್ನು ಎಷ್ಟೆಂದು ಹೇಳಲಿ? ಇದು ಪ್ರಾಣಹೋದವರನ್ನು ಸಹ ಮಾತನಾಡಿಸುತ್ತದೆ!" ಎಂದು ನುಡಿದು, ಅವನು ಅದರ ಒಂದೆರಡು ಗೆರೆಗಳನ್ನು ತೆಯ್ದು ಸುಭಾನರಾಯನ ಬಾಯಿಯಲ್ಲಿ ಹಾಕಿದನು. ಅವನ ಹೇಳಿಕೆಯಂತೆ ಆ ಮಾತ್ರೆಯ ಮಹತ್ವವು ದೊಡ್ಡದಾಗಿತ್ತು. ಸ್ವಲ್ಪ ಹೊತ್ತಿನಲ್ಲಿ ಸುಭಾನರಾಯನಿಗೆ ಮಾತಾಡುವ ಶಕ್ತಿಯು ಬಂದಿತು. ಆಗ ಅವನು ರಾಜಸಬಾಯಿಯನ್ನು ಕುರಿತು, "ಸರಕಾರ, ನಾನು ಹೇಳುವ ಸಂಗತಿಯು ಬಹಳೇ ಮಹತ್ವದ್ದಿರುವದು. ರಾಜಪರಿವಾರದ ಹೊರತು ಅದನ್ನು ಯಾರಿಗೂ ತಿಳಿಸುವಂತಿಲ್ಲ." ಎಂದು ನುಡಿಯಲು, ರಾಜಸಬಾಯಿಯು ರಾಜವೈದ್ಯನಿಗೂ ಅಲ್ಲಿದ್ದ ಒಬ್ಬಿಬ್ಬರು ದಾಸಿಯರಿಗೂ ಅಲ್ಲಿಂದ ಹೋಗಬೇಕೆಂದು ಆಜ್ಞೆ ಮಾಡಿದಳು. ಅಲ್ಲಿ ರಾಜಸಬಾಯಿಯೂ

ಸಂಭಾಜಿರಾಜನೂ ಅವನ ಪತ್ನಿಯಾದ ಜಿಜಾಬಾಯಿಯೂ ಹೀಗೆ ಮೂವರೇ ಉಳಿದರು. ಅನಂತರದಲ್ಲಿ ಸುಭಾನರಾಯನು ಪಶ್ಚಾತ್ತಾಪಯುಕ್ತ ಧ್ವನಿಯಿಂದ:

"ನಾನು ದೊಡ್ಡ ಅಪರಾಧಿಯಿರುವೆನು. ನನ್ನ ಕರ್ಮಕ್ಕೆ ಸರಿಯಾದ ಫಲವು ಲಭಿಸಿರುವದರಿಂದ, ನಾನು ಮಾಡಿದ ಅಪರಾಧವನ್ನು ಹೇಳಲಿಕ್ಕೆ ಯಾರಿಗೂ ಅಂಜುವದಿಲ್ಲ. ನಾನಿನ್ನು ಒಂದೆರಡು ಗಳಿಗೆ ಮಾತ್ರ ಬಾಳುವೆನು. ಅಷ್ಟರಲ್ಲಿ ಎಲ್ಲ ಸಂಗತಿಯನ್ನು ತಿಳಿಸಿ ನಿಮ್ಮನ್ನು ಜಾಗ್ರತೆ ಪಡಿಸಿದರೆ, ನನ್ನ ಪಾತಕದೊಳಗಿನ ಕೆಲವು ಭಾಗವಾದರೂ ಕಡಿಮೆಯಾಗಬಹುದೆಂದು ನಿಶ್ಚಯಿಸಿ, ತಮ್ಮ ಸಮ್ಮುಖದಲ್ಲಿ ಬಂದಿರುವೆನು. ನೀವು ನನ್ನನ್ನು ಕ್ಷಮಿಸಿದರೆ ನನ್ನ ಕರ್ಮ ಕಥೆಯನ್ನು ಹೇಳಲಾರಂಭಿಸುವೆನು."

"ನಾನು ನಿನ್ನ ಅಪರಾಧಗಳನ್ನು ಕ್ಷಮಿಸಿರುವೆನು. ನೀನು ಹೇಳಬೇಕಾದ ಸಂಗತಿಯೇನೆಂಬದನ್ನು ಬೇಗನೆ ಅರುಹು. ನಿನ್ನಂತಹ ಏಕನಿಷ್ಠ ಸೇವಕನ ಅಪರಾಧವನ್ನು ಕ್ಷಮಿಸದಿದ್ದರೆ ಹೇಗೆ? ಎಂತಹರಿಂದಲಾದರೂ ಒಮ್ಮೊಮ್ಮೆ ತಪ್ಪು ಕೆಲಸಗಳು ಘಟಿಸುತ್ತಿರುವವು. ಈ ವಿಷಯವಾಗಿ ನೀನು ಮನಸ್ಸಿಗೆ ಹಚ್ಚಿ ಕೊಳ್ಳಬೇಡ." ಎಂದು ರಾಜಸಬಾಯಿಯು ನುಡಿಯಲು, ಸುಭಾನರಾಯನು ದುಃಖದಿಂದ: "ರಾಣಿಯವರೇ, ನಾನು ಸ್ವಾಮಿನಿಷ್ಠನೆನಿಸಿಕೊಳ್ಳಲಿಕ್ಕೆ ಅನರ್ಹ ನಿರುವೆನು. ಸ್ವಾಮಿದ್ರೋಹವೆಸಗಿದ ಬಗ್ಗೆ ನಾನೀಗ ಪ್ರಾಯಶ್ಚಿತ್ತವನ್ನು ಹೊಂದಿರುವೆನು. ನೀವು ನನ್ನನ್ನು ನಂಬಿಗೆಯವನೆಂದು ತಿಳಿದು ತಾರಾಬಾಯಿ ಯವರ ಕಾವಲಿಗಾಗಿ ನಿಯಮಿಸಿದಿರಿ; ಆದರೆ ನಾನು ಅವರ ಕಾರಸ್ಥಾನದಲ್ಲಿ ಸೇರಿ, ನಿಮ್ಮ ದ್ರೋಹಚಿಂತನೆಮಾಡಿರುವೆನು. ನನ್ನ ಅಪರಾಧಕ್ಕಾಗಿ ನೀವು ಯಾವ ಶಾಸನವನ್ನು ವಿಧಿಸುತ್ತಿದ್ದರೂ, ನಾನು ನನ್ನ ಪಾಪವನ್ನು ಆಡಿತೋರಿಸದೆ ಇರಲಾರೆನು. ನನ್ನ ಕರ್ಮಕಥೆಯನ್ನುಸುರದಿದ್ದರೆ, ನನಗಾಗಿರುವ ಮಾನಸಿಕ ಯಾತನೆಯು ಕಡಿಮೆಯಾಗಲಾರದೆಂದು ನನ್ನ ಭಾವನೆಯಿರುವದು. ರಾಣಿ ಯವರೇ, ನಾನು ದ್ರವ್ಯಲೋಭಕ್ಕೊಳಗಾಗಿ, ತಮ್ಮ ಕಾರಸ್ಥಾನಕ್ಕೆ ಸಹಾಯ ವಾಗದ್ದರಿಂದ ತಾರಾಬಾಯಿಯವರು ನನ್ನನ್ನು ಒಡೆಯಿಸಿಕೊಳ್ಳುವ ಕಾರ್ಯ ದಲ್ಲಿ ಚಂದ್ರಿಕೆಯನ್ನು ಮುಂದೆ ಮಾಡಿದರು. ನಾನು ಆ ದಿವ್ಯಲಾವಣ್ಯದ ಪ್ರಾಪ್ತಿಗಾಗಿ ಅನೇಕ ಘೋರ ಕರ್ಮಗಳನ್ನಾಚರಿಸಿದೆನು. ಸಗುಣಾ ಗವಳಿ ತಿಯು ಹಾಲು ಮಾರುವ ನೆವದಿಂದ ದುರ್ಗದೊಳಗಿನ ಎಲ್ಲ ಸಂಗತಿಯನ್ನು ಚಂದ್ರಿಕೆಯ ಮುಖಾಂತರವಾಗಿ ತಿಳಿದುಕೊಂಡು ಹೋಗುತ್ತಿದ್ದಳು. ನಿಮ್ಮ

ರಾಜಕಾರಣವು ತಿಳಿಯಬೇಕೆಂದು ತಾರಾಬಾಯಿಯವರು ಚಂದ್ರಿಕೆಯೊಡನೆ ಜಗಳಾಡಿದಂತೆ ನಟಿಸಿ, ಅವಳನ್ನು ಹೊರಗೆ ಹಾಕಿದರು; ಅವಳು ನಿಮ್ಮ ಬಳಿಯಲ್ಲಿದ್ದು ಅವರಿಗೆ ಅನುಕೂಲೆಯಾಗಿ ನಡೆಯತೊಡಗಿದಳು. ಅವಳು ಇಂದಿಲ್ಲದಿದ್ದರೆ ನಾಳೆಯಾದರೂ ನನ್ನವಳಾಗಬಹುದೆಂದು ನಾನು ಅವರ ಕಾರಸ್ಥಾನವನ್ನು ಯಥೇಷ್ಟವಾಗಿ ನಡೆಯಗೊಟ್ಟೆನು. ಶಿವಾಜಿರಾಜನ ಮಗನಾದ ರಾಮರಾಜನನ್ನು ದುರ್ಗದಿಂದ ದಾಟಿಸುವಕಾರ್ಯದಲ್ಲಿ ನಾನು ಅವರಿಗೆ ಚನ್ನಾಗಿ ಸಹಾಯ ಮಾಡಿದೆನು.''

"ಹಾ! ಸುಭಾನರಾಯಾ! ಇದೇನು ಹೇಳುವೆ? ರಾಮರಾಜನು ನಿಜವಾಗಿಯೂ ದಾಟಿ ಹೋಗಿರುವನೇನು?''

"ಹೌದು; ರಾಣಿಯವರೆ, ರಾಮರಾಜನು ಭೂತಳದ ಮೇಲೆ ಎಲ್ಲಿಯೋ ಸುರಕ್ಷಿತವಾಗಿ ಬೆಳೆದು ದೊಡ್ಡವನಾಗುತ್ತಿರುವನಾಗಿದ್ದೀತು.''

"ಸ್ವಪ್ನದ ಸಂಗತಿಯು ನಿಜವಾಯಿತು!'' ಎಂದು ಸಂಭಾಜಿರಾಯನು ಉದ್ಗಾರ ತೆಗೆಯಲು, ಜಿಜಾಬಾಯಿಯು ಸುಭಾನರಾಯನನ್ನು ಕುರಿತು,

"ಸುಭಾನರಾವ, ನಿಮ್ಮ ಎದೆಯಲ್ಲಿ ಕಠಾರಿಯಿಂದ ಇರಿದವರಾರು?''

"ಒಡೆಯರೇ, ಎಲ್ಲವನ್ನೂ ಹೇಳುವೆನು ಕೇಳಿರಿ. ನಾನು ಚಂದ್ರಿಕೆಯಲ್ಲಿ ಪಾಪದೃಷ್ಟಿಯುಳ್ಳವನಾಗಿ ಅವಳ ಪ್ರಾಪ್ತಿಯಾಗಬೇಕೆಂದು ಅಹೋರಾತ್ರಿಯಲ್ಲಿ ಚಿಂತಿಸುತ್ತಿದ್ದೆನು. ಆ ಕಾರ್ಯಸಾಧಕಳಲ್ಲಿ ನನ್ನ ಮನಸ್ಸನ್ನು ತೃಪ್ತಿಪಡಿಸುವ ಚಿಹ್ನಗಳೇ ಕಾಣದ್ದರಿಂದ, ಒಮ್ಮೆ ಗಟ್ಟಿಗೆ ಹಚ್ಚಬೇಕೆಂದು ನಾನು ನಿಶ್ಚಯಿಸಿಕೊಂಡೆನು. ಇಂದು ನನಗೆ ಸ್ವಲ್ಪ ಅನುವು ದೊರೆತದ್ದರಿಂದ, ಮಾರುತಿಯ ದೇವಾಲಯದಲ್ಲಿ ಅವಳನ್ನು ಕರೆಯಿಸಿ ಕಾರ್ಯಸಿದ್ಧಿಮಾಡಿಕೊಳ್ಳಬೇಕೆಂದು ಹವಣಿಸಿದೆನು. ನಿಜವಾಗಿ ಹೇಳಬೇಕೆಂದರೆ ಚಂದ್ರಿಕೆಯು ಸಾಧ್ವಿಯಿರುವಳು. ತನ್ನ ಒಡತಿಯ ಕಾರ್ಯಸಾಧನೆಗಾಗಿ ನನ್ನೊಡನೆ ಮಾತು-ಕಥೆಗಳ ವ್ಯವಹಾರ ಮಾಡುತ್ತಿದ್ದಳು. ಅವಳು ನನ್ನಲ್ಲಿ ಪ್ರೇಮಗೊಂಡಿರುವಳೆಂದು ತಿಳಿದು ನಾನೇ ಹುಚ್ಚೆದ್ದು ಹರಿಯತೊಡಗಿದ್ದೆನು. ಬಲುಮೆಯಿಂದಲಾದರೂ ಅವಳ ಶೀಲವನ್ನು ಸೂರೆಗೈದು ನನ್ನ ದುಷ್ಟವಾದ ಆತ್ಮಸಂತುಷ್ಟಿಗೊಳಿಸಬೇಕೆಂದು ನಾನು ಅವಳ ಮೈಮೇಲೇರಿ ಹೋಗಲು, ತನ್ನಲ್ಲಿ ಗುಪ್ತವಾಗಿರಿಸಿಕೊಂಡಿದ್ದ ಕಠಾರಿಯನ್ನು ಹೊರಗೆ ತೆಗೆದು, ಅವಳು ನನ್ನ ಎದೆಗೆ ಚುಚ್ಚಿದಳು! ಕೂಡಲೆ ನಾನು ಭೂಮಿಗೆ ಬಿದ್ದೆನು. ಅಷ್ಟರಲ್ಲಿ ಅವಳು ಮಿಂಚಿನಂತೆ ಎತ್ತಕಡೆಗೋ ಸಾಗಿ ಹೋದಳು. ತರುವಾಯ ಹಾದಿಕಾರರ ಮುಖಾಂತರವಾಗಿ ಬಹಿರಬಿಯವರಿಗೆ ನಾನು ಗಾಯ

ಹೊಂದಿದ ಸಂಗತಿಯನ್ನು ತಿಳಿಸಿದೆನು. ರಾಣಿಯವರೆ, ಸಂಭಾಜಿರಾಜರೆ, ನೀವು ನನ್ನನ್ನು ಕ್ಷಮಿಸಿರಿ. ರಾಮರಾಜನು ಈಗ ಎಲ್ಲಿಯೋ ಬೆಳೆಯುತ್ತಿರುವನು. ತಾರಾಬಾಯಿಯವರು ನಿಮ್ಮ ವಿರುದ್ಧವಾಗಿ ಇನ್ನೂ ಕಾರಸ್ಥಾನ ನಡೆಯಿಸಿರುವರು........'' ಎಂದು ಸುಭಾನರಾಯನು ತನ್ನ ಕರ್ಮಕಥೆಯನ್ನು ಹೇಳುತ್ತಿರಲು, ಅವನ ಮಾತುಗಳು ಕಟ್ಟಾದವು. ಪರಕ್ಷಣದಲ್ಲಿ ಅವನ ಅಂತರಾತ್ಮವು ಜಡಶರೀರವನ್ನು ತೊರೆದು ಹೊರಟು ಹೋಯಿತು!

ನಂಬಿಗೆಯವಳೆಂದು ತಿಳಿದುಕೊಂಡ ಚಂದ್ರಿಕೆಯು ಈ ಬಗೆಯ ಪಾತಾಳಯಂತ್ರಿಯಾಗಿದ್ದನ್ನು ನೋಡಿ ರಾಜಸಬಾಯಿಯು ಆಶ್ಚರ್ಯಚಕಿತಳಾದಳು. ರಾಮರಾಜನು ಜೀವಂತವಿರುವ ಸಂಗತಿಯನ್ನು ಕೇಳಿ ಅವಳ ಮನಸ್ಸಿಗೆ ವಿಷಾದವಾಯಿತು. ಸುಭಾನರಾಯನ ಕರ್ಮಕಥೆಯು ತಾರಾಬಾಯಿಯ ಕಾರಸ್ಥಾನವನ್ನೆಲ್ಲ ಹೊರಗೆಡಹಿ ಅವಳನ್ನು ಚನ್ನಾಗಿ ಜಾಗ್ರತೆಗೊಳಿಸಿತು!

---

## ಚಂದ್ರಸೇನಾ!

ಶೀಲಯುವತಿಯರಿಗೆ ಪ್ರಾಣಕ್ಕಿಂತಲೂ ಅಧಿಕವಾದ ಪಾತಿವ್ರತ್ಯವನ್ನು ಭ್ರಷ್ಟಪಡಿಸುವದಕ್ಕಾಗಿ ಸಿದ್ಧನಾದ ನರಪಶುವಿಗೆ ಯೋಗ್ಯದಂಡನೆ ವಿಧಿಸಿದ ಚಂದ್ರಿಕೆಯು ಕ್ಷಣಮಾತ್ರವಾದರೂ ವಿಲಂಬಮಾಡದೆ ಅಲ್ಲಿಂದ ಹೊರಟಳು. ಸುಭಾನರಾಯನ ಹೃದಯದಲ್ಲಿ ಕಠಾರಿಯಿಂದಾದ ಗಾಯದಿಂದ ನೆತ್ತರವು ಕಾರಂಜಿಯಂತೆ ಪುಟಿಯತೊಡಗಿದ್ದನ್ನು ಅವಳು ಕಣ್ಣಾರೆ ನೋಡಿದ್ದಳು. ತನ್ನ ಒಲವಾದ ಶಸ್ತ್ರಾಘಾತದಿಂದ ಅವನು ನಿಶ್ಚಯವಾಗಿ ಗತಾಸುವಾಗುವನೆಂದು ಅವಳು ತಿಳಿದಳು. ಈ ಭೀಷಣವಾದ ನರವಧೆಯಿಂದ ಪಾಪಸಂಚಯವಾಗದಿರದೆಂದು ಅವಳು ವಿಷಾದಗೊಂಡಿದ್ದಳು. ತನ್ನಿಂದ ಇದೊಂದು ಅನುಚಿತಕಾರ್ಯವು ಘಟಿಸಿತೆಂದು ಅವಳು ಪಶ್ಚಾತ್ತಾಪಪಡತೊಡಗಿದ್ದಳು. ಸಂತಾಪದ ಭರದಲ್ಲಿ ಅವಳು ಇಂತಹ ಉಗ್ರಕರ್ಮವನ್ನಾಚರಿಸಿದ್ದರೂ ಕೆಲವು ವೇಳೆಯ ಮೇಲೆ ಸ್ತ್ರೀಯರ ನೈಸರ್ಗಿಕ ಸ್ವಭಾವಾನುರೋಧವಾಗಿ ಅವಳ ಕೋಮಲವಾದ ಹೃದಯವು ಕರಗಿತು. ಅವನನ್ನು ಇಂತಹ ಶೋಚನೀಯವಾದ ದುರವಸ್ಥೆಯಲ್ಲಿ ಏಕಾಕಿಯಾಗಿ ಬಿಟ್ಟು ಹೋಗುವದಕ್ಕೆ ಅವಳು ಹಿಂಜರಿಯತೊಡಗಿದಳು. ತಿರುಗಿ ಮಾರುತಿಯ ದೇವಾಲಯಕ್ಕೆ ಹೋಗಿ ಗಾಯಹೊಂದಿದವನನ್ನು ಉಪಚರಿಸ

ಬೇಕೆಂದು ನಿಶ್ಚಯಿಸಿಕೊಂಡು ಹಿಂದಿರುಗತಕ್ಕವಳು; ಅಷ್ಟರಲ್ಲಿ ಮತ್ತೊಂದು ವಿಧವಾದ ಆಲೋಚನೆಯು ಅವಳಲ್ಲಿ ಪ್ರಾದುರ್ಭವಿಸಿತು. ಇನ್ನು ಮರಣೋನ್ಮುಖನಾಗಿ ಬಿದ್ದ ಸುಭಾನರಾಯನಿಂದ ಎಲ್ಲ ಕಾರಸ್ಥಾನವು ಹೊರಬೀಳುವದೆಂದೂ, ಇಂತಹ ಪ್ರಸಂಗದಲ್ಲಿ ಅವನನ್ನು ಕೊಲೆ ಮಾಡಿದ ತನಗೆ ಅಪಾಯ ಪೊದಗದಿರಲಾರದೆಂದೂ ಅವಳು ದೃಢಪಡಿಸಿಕೊಂಡಳು. ತಾನು ರಾಜಪತ್ನಿಯ ಕೈಯಲ್ಲಿ ಸಿಲುಕಿದರೆ, ಅಪರಾಧಿಯಾದ ತನಗೆ ಯೋಗ್ಯ ದಂಡನೆಯು ವಿಧಿಸಲ್ಪಟ್ಟು, ತಾರಾಬಾಯಿಯ ಕಾರ್ಯಕ್ಕೆ ಅಡ್ಡಿಯಾಗುವದೆಂದು ಅವಳು ಭಾವಿಸಿದಳು. ನೀಚನೂ ಕುಲಾಂಗಾರನೂ ಆದ ಸುಭಾನರಾಯನು ಕರ್ಮಕ್ಕೆ ತಕ್ಕ ಫಲವನ್ನು ಹೊಂದಿರುವನೆಂದು ಮನಸ್ಸನ್ನು ಸಮಾಧಾನಪಡಿಸಿಕೊಂಡು, ತಾರಾಬಾಯಿಯ ದರ್ಶನಹೊಂದಿ ನಡೆದ ಸಂಗತಿಯನ್ನು ನಿವೇದಿಸಬೇಕೆಂದು ಅವಳು ರಭಸದಿಂದ ಕಾರಾಗೃಹದ ಹಾದೀ ಹಿಡಿದಳು.

ಚಿಂತಾನಲದಿಂದ ಪರಿತಪಿಸಿದ ತಾರಾಬಾಯಿಯು ತನ್ನ ಮಂದಿರದಲ್ಲಿ ವಿಷಣ್ಣವದನೆಯಾಗಿ ಕುಳಿತಿದ್ದಳು. ಮಧ್ಯರಾತ್ರಿಯು ಗತಿಸಿಹೋಗಿದ್ದರೂ ಅವಳು ಎಚ್ಚರಾಗಿಯೇ ಇದ್ದಳು. ಇಂದು ಯಾವ ಕಾರಣದಿಂದಲೋ ಅವಳ ಮನಸ್ಸಿನಲ್ಲಿ ವಿಚಿತ್ರವಾದ ವಿಚಾರತರಂಗಗಳು ತಾಕಲಾಡತೊಡಗಿದ್ದರಿಂದ, ಅವಳ ಮನಃಸ್ಥಿತಿಯು ಚಂಚಲೆಗಿಂತಲೂ ಚಂಚಲವಾಗಿತ್ತು. ಅವಳು ತನ್ನ ರಾಮರಾಜನ ಭಾಗ್ಯೋದಯ ಚಿಂತನೆಯಲ್ಲಿ ತೊಡಗಿರಬಹುದೆಂದು ತರ್ಕಿಸಿ, ಮುಂದೆ ಸಾಗುವದು ಉಚಿತವು. ಅವಳು ಪರ್ಯಂತದ ಮೇಲೆ ಕುಳಿತಾಗ ಭಿತ್ತಿವಾತಾಯನದ ಬಾಗಿಲಿಗೆ ಯಾರೋ ಕಲ್ಲು ಒಗೆದಂತಾಯಿತು. ಕೂಡಲೆ ಅವಳು ಝಟ್ಟನೆ ಅಲ್ಲಿಂದೆದ್ದು, ಕೈಯಲ್ಲಿ ಹಗ್ಗವನ್ನು ತೆಗೆದುಕೊಂಡು ವಾತಾಯನದ ಬಳಿಗೆ ಹೋದಳು. ಅವಳು ಬಾಗಿಲ ತೆರೆದು ಕೈಯಲ್ಲಿದ್ದ ಹಗ್ಗವನ್ನು ಅಲ್ಲಿಯೇ ಇದ್ದ ಲೋಹಶಲಾಕಕ್ಕೆ ಬಿಗಿದು, ಒಂದು ತುದಿಯನ್ನು ಹೊರಗೆ ಒಗೆದಳು. ಸ್ವಲ್ಪ ವೇಳೆಯಲ್ಲೇ ಹಗ್ಗದ ಆಧಾರದಿಂದ ಒಂದು ವ್ಯಕ್ತಿಯು ಒಳಗೆ ಬಂದಿತು. ಕೂಡಲೆ ತಾರಾಬಾಯಿಯು ಸಂಭ್ರಮದಿಂದ ಕಿಟಿಕೆಯ ಬಾಗಿಲವನ್ನು ಮುಚ್ಚಿ ಆ ವ್ಯಕ್ತಿಯನ್ನು ತನ್ನ ಮಂಚಕದ ಬಳಿಗೆ ಕರೆತಂದಳು. ಆ ವ್ಯಕ್ತಿಯು ಮತ್ತಾವದೂ ಇದ್ದಿಲ್ಲ; ಸುಭಾನರಾಯನನ್ನು ಘಾತಿಸಿ ಬಂದ ಚಂದ್ರಿಕೆಯೇ ಅದು!

ಮಾರುತಿಯ ದೇವಾಲಯದಲ್ಲಿ ಘಟಿಸಿದ ಭಯಂಕರವಾದ ಸಂಗತಿಯಿಂದ

ಚಂದ್ರಿಕೆಯ ಮನಸ್ಸು ಭಯಕಾತರಗೊಂಡಿತ್ತು. ತಾರಾಬಾಯಿಯ ಸೂಕ್ಷ್ಮ ದೃಷ್ಟಿಗೆ ಅವಳ ಸ್ಥಿತಿಯು ತಿಳಿಯದಿರಲಿಲ್ಲ. ಚಂದ್ರಿಕೆಯಾದರೂ ಅವಳಿದುರಿಗೆ ಯಾವ ಸಂಗತಿಯನ್ನೂ ಬಚ್ಚಿಡುತ್ತಿರಲಿಲ್ಲ. ಅವರೀರ್ವರಲ್ಲಿ ತಾಯಿಮಕ್ಕಳ ಭಾವನೆಯು ನೆಲೆಗೊಂಡಿತ್ತು. ಅಂತೆಯೇ ತಾರಾಬಾಯಿಯು ವಿಶ್ವಾಸಪಾತ್ರಳಾದ ಚಂದ್ರಿಕೆಯನ್ನು ರಾಜಸಬಾಯಿಯ ಬಳಿಯಲ್ಲಿರಿಸಿ, ಅವಳ ಗುಪ್ತಕಾರಸ್ಥಾನಗಳನ್ನು ತಿಳಿದುಕೊಳ್ಳತೊಡಗಿದ್ದಳು. ಮಧ್ಯರಾತ್ರಿಯ ಅಂಧಕಾರಮಯವಾದ ವೇಳೆಯಲ್ಲಿ ಚಂದ್ರಿಕೆಯ ಅನಪೇಕ್ಷಿತ ಆಗಮನದಿಂದ ತಾರಾಬಾಯಿಯು ವಿಸ್ಮಯಗೊಂಡಳು. ಚಂದ್ರಿಕೆಯು ಸುಭಾನರಾಯನ ಸಂಭಂಧದ ಎಲ್ಲ ಸಂಗತಿಗಳನ್ನು ತಿಳಿಸಿದ ಕೂಡಲೆ, ಅವಳ ಮನಸ್ಸಿನ ಗೊಂದಲವು ಶಾಂತವಾಯಿತು. ತನ್ನ ಕೃತಿಯಿಂದ ತಾರಾಬಾಯಿಯು ಕ್ರೋಧಗೊಳ್ಳುವಳೆಂದು ಅವಳು ಬೆದರಿದ್ದಳು. ಚಂದ್ರಿಕೆಯ ಶೌರ್ಯ ಧೈರ್ಯ ಸಾಹಸಗಳನ್ನೂ, ಸಚ್ಛೀಲತನವನ್ನೂ ನೋಡಿ ಅವಳು ತನ್ನ ಮಾನಸ ಪುತ್ರಿಯನ್ನು ಅಭಿಮಾನಪೂರ್ವಕವಾಗಿ ಹೊಗಳಿದಳು. ಇನ್ನೂ ಜೀವಂತಸ್ಥಿತಿಯಲ್ಲಿದ್ದ ಸುಭಾನರಾಯನಿಂದ ತನ್ನ ಎಲ್ಲ ಕಾರಸ್ಥಾನಗಳು ಹೊರಬಿದ್ದು ಗಂಡಾಂತರವೊದಗದಿರಲಾರದೆಂದು ಅವಳು ಬೆದರಿದಳು. ಆಗ ಚಂದ್ರಿಕೆಯು ಅವಳ ಮನೋಗತವನ್ನು ತಿಳಿದು,

"ಅಮ್ಮಾ, ದಯಾಘನನಾದ ಪರಮೇಶ್ವರನು ತಮಗೆ ಯಶೋಲಾಭವನ್ನು ಒದಗಿಸಿ ಸುಖಿಯಾಗ ಮಾಡುವನು. ನೀವು ಈ ವಿಷಯದಲ್ಲಿ ನಿಶ್ಚಿಂತರಾಗಿರಿ. ದೈವದುರ್ವಿಲಾಸದಿಂದ ಈಗ ನೀವು ಕಷ್ಟಮಯ ಸ್ಥಿತಿಯಲ್ಲಿದ್ದರೂ, ಬೇಗನೆ ಭಾಗ್ಯೋದಯವಾಗದಿರಲಾರದೆಂದು ನನ್ನ ಮನೋದೇವತೆಯು ಹೇಳುತ್ತಿರುವದು; ಅತೀಂದ್ರಿಯ ಶಕ್ತಿಯುವರೂ ಅದ್ವಿತೀಯ ತಪಃಸಿದ್ಧಿಯನ್ನು ಪಡೆದವರೂ ತ್ರಿಕಾಲಜ್ಞಾನಿಗಳೂ ಆದ ಮಹಾತ್ಮಾ ಬಂಕಟಸ್ವಾಮಿಗಳ ಆಶೀರ್ವಾದವಾದರೂ ಹೀಗೆಯೇ ಇರುವದು."

ಚಂದ್ರಿಕೆಯ ಈ ಮಾತಿನಿಂದ ತಾರಾಬಾಯಿಯ ಮನಶ್ಶಾಂತಿಯಾಯಿತು. ಚಂದ್ರಿಕೆಯು ಕರ್ತವ್ಯಪ್ರಭಾವದಿಂದ ತನ್ನ ಶೀಲವನ್ನು ಕಾಯ್ದುಕೊಂಡದ್ದರಿಂದ ತಾರಾಬಾಯಿಗೆ ಕಡುತರವಾದ ಸಂಭ್ರಮವಾಗಿತ್ತು. ಆಗ ಅವಳು ಆನಂದಯುಕ್ತ ಧ್ವನಿಯಿಂದ,

"ಚಂದ್ರೆ, ನನ್ನ ಕಾರ್ಯದ ಕಡೆಗೆ ಲಕ್ಷ್ಯಗೊಟ್ಟು ನೀನು ನಿನ್ನ ಪಾವಿತ್ರ್ಯವನ್ನು ನಾಶಮಾಡಿಕೊಂಡಿದ್ದರೆ ಮಾತ್ರ ನನಗೆ ಪರಮಾವಧಿಯಾದ ವ್ಯಸನವಾಗು

ತ್ತಿತ್ತು. ನೀನು ವೀರಪುತ್ರಿಯಿರುವೆ; ಕುಲಯುವತಿಯಿರುವೆ. ಅಂತೆಯೇ ನಿನ್ನಿಂದ ಇಂತಹ ವರ್ಣನೀಯ ಕೃತಿಯು ಘಟಿಸಿತು. ಈ ಕಾರ್ಯಕ್ಕಾಗಿ ನಿನ್ನ ಧನ್ಯತೆಯನ್ನು ಎಷ್ಟು ರೀತಿಯಿಂದ ಬಣ್ಣಿಸಿದರೂ ಸ್ವಲ್ಪವೇ ಇರುವದು. ನಿನ್ನಲ್ಲಿಯ ಗುಣಗೌರವವನ್ನು ಎಷ್ಟು ರೀತಿಯಿಂದ ಪ್ರಕಟಿಸಿದರೂ ಸ್ವಲ್ಪವೇ ಇರುವದು. ನಿನ್ನಲ್ಲಿಯ ಗುಣಗೌರವವನ್ನು ತಿಳಿದದ್ದರಿಂದ ನಾನು ಹೊಟ್ಟೆಯ ಮಗಳಂತೆ ನಿನ್ನನ್ನು ಪ್ರೀತಿಸುತ್ತಲಿರುವೆನು.'' ಎಂದು ತಾರಾಬಾಯಿಯು ಅವಳ ವಿಷಯವಾಗಿ ಅನಂತ ಧನ್ಯೋದ್ಗಾರಗಳನ್ನು ತೆಗೆದು, "ಚಂದ್ರಿಕೆ, ನೀನು ಇಲ್ಲಿ ಅರಕ್ಷಣವಾದರೂ ನಿಲ್ಲದೆ ಬಂಕಟಸ್ವಾಮಿಗಳ ಮಠಕ್ಕೆ ತೆರಳು. ರಾಜಸ ಬಾಯಿಯು ಇನ್ನು ಮೇಲೆ ನಿನ್ನ ಶೋಧಕ್ಕಾಗಿ ಗುಪ್ತಚಾರರನ್ನು ಕಳುಹಿಸುವ ಸಂಭವವುಂಟು. ಆದ್ದರಿಂದ ಅಲ್ಲಿಯಾದರೂ ನೀನು ಯಾರ ದೃಷ್ಟಿಗೂ ಬೀಳ ಬೇಡ. ಯಾವಾಗಲೂ ನೆಲಮನೆಯಲ್ಲಿ ವಾಸವಾಗಿರು. ನಾನು ನಾಳಿನ ದಿವಸ ರಾತ್ರಿಯಲ್ಲಿ ಅಲ್ಲಿಗೆ ಬರುವೆನು. ನೀನು ಸಗುಣಾಬಾಯಿಯ ಬಳಿಯ ಲ್ಲಿದ್ದ ಎರಡು ಕುದುರೆಗಳನ್ನು ತೆಗೆದುಕೊಂಡು ನೆಲಮಾರ್ಗದ ದ್ವಾರದಲ್ಲಿ ಬಂದು ನಿಂತಿರು. ರಾಜಸಬಾಯಿಯು ಕಾವಲನ್ನು ಬಿಗಿಯಾಗಿರಿಸುವ ಸಂಭವ ವಿರುವದು. ನೆಲಮಾರ್ಗದ ಗುರುತು ಅವಳಿಗಿಲ್ಲದ್ದರಿಂದ ನಾನು ನಿರಾತಂಕವಾಗಿ ಮಠಕ್ಕೆ ಬರುವೆನು. ನೀನು ಎರಡು ಜೊತೆ ಪುರುಷವೇಷದ ಉಡಿಗೆತೊಡಿಗೆ ಗಳನ್ನು ತೆಗೆದುಕೊಂಡು ಬಾ. ನಾವೀರ್ವರೂ ವೇಷಾಂತರ ಹೊಂದಿ ಪ್ರಯಾಣ ಮಾಡಿದರೆ, ಯಾರಿಗೂ ಸಂಶಯಬಾರದೆ ನಿರ್ಬಾಧಕವಾಗಿ ಪಾರಾಗು ವೆವು. ನಾನು ಬಾಲರಾಜನನ್ನು ನೋಡದೆ ಬಹಳೇ ದಿನಗಳಾದವು. ಅವನನ್ನು ಕರೆದುಕೊಂಡು ಬರುವದಕ್ಕಾಗಿ ಪಂತರಿಗೂ ಜನಾಬಾಯಿಗೂ ಸಂದೇಶ ಕಳು ಹಿಸಬೇಕೆಂದು ಸ್ವಾಮಿಮಹಾರಾಜರಿಗೆ ನನ್ನ ವಿನಂತಿಯನ್ನರುಹು.'' ತಾರಾ ಬಾಯಿಯು ಹೀಗೆ ನುಡಿದು, ಅಲ್ಲಿಂದ ಹೊರಡುವದಕ್ಕೆ ಚಂದ್ರಿಕೆಗೆ ಆಜ್ಞಾ ಪಿಸಿದಳು.

ತಾರಾಬಾಯಿಯ ಆಜ್ಞೆಯನ್ನು ಹೊಂದಿ ಚಂದ್ರಿಕೆಯು ಬಂಕಟಸ್ವಾಮಿ ಗಳ ಮಠಕ್ಕೆ ಬಂದಳು. ಆಗ ಸ್ವಾಮಿಮಹಾರಾಜರು ವ್ಯಾಘ್ರಾಸನದಲ್ಲಿ ಕುಳಿತು ಕೊಂಡು ಶ್ರೀ ಸಮರ್ಥ ರಾಮದಾಸ ಪ್ರಣೀತ ದಾಸಬೋಧವನ್ನೋದ ತೊಡ ಗಿದ್ದರು. ಚಂದ್ರಿಕೆಯು ಅವರ ಬಳಿಗೆ ಹೋಗಿ ನಮಸ್ಕರಿಸಿದ ಕೂಡಲೆ, "ಅಷ್ಟ ಪುತ್ರಾ ಸೌಭಾಗ್ಯವತೀಭವ'' ಎಂದು ಅವಳನ್ನು ಆಶೀರ್ವದಿಸಿದರು. ಆಗ ಚಂದ್ರಿ

ಕೆಯ ಮುಖವು ಆನಂದದಿಂದ ಪ್ರಫುಲ್ಲಿತವಾಯಿತು. ಅವಳು ಹಸನ್ಮುಖಿಯಾಗಿ ಸ್ವಾಮಿಗಳನ್ನು ಕುರಿತು— ಮಹಾರಾಜರೆ, ತಮ್ಮ ಆಶೀರ್ವಾದವು ಫಲದ್ರೂಪವಾಗುವದೆಂದು ಕುತೂಹಲಗೊಂಡಿರುವೆನು.”

“ಚಂದ್ರಿಕಾಬಾಯಿ, ಪರಮಾತ್ಮನು ಪ್ರತಿಯೊಬ್ಬ ಮನುಷ್ಯನ ಗುಣಧರ್ಮಗಳನ್ನು ಒರೆಗೆ ಹಚ್ಚುತ್ತಿರುತ್ತಾನೆ. ಅವರು ಅವನ ಪರೀಕ್ಷೆಯಲ್ಲಿ ಉತ್ತೀರ್ಣರಾದರೆಂದರೆ, ಅವರ ಭಾಗ್ಯೋದಯವು ನಿಶ್ಚಯವಾಗಿ ಆಗುವದೆಂದು ತಿಳಿಯತಕ್ಕದ್ದು. ನಿನ್ನ ಹಾಗು ತಾರಾಬಾಯಿ ರಾಮರಾಜರ ಭಾಗ್ಯೋದಯ ಕಾಲವು ಸಮೀಪಿಸಿದ ಬಗ್ಗೆ ಪೂರ್ವಚಿಹ್ನವು ನನಗೆ ತೋರಲಾರಂಭಿಸಿರುವದು. ಎಲ್ಲರೂ ಬೇಗನೆ ಸಂಕಟವಿಮೋಚನೆ ಹೊಂದಿ ಸುಖಿಗಳಾಗುವಿರಿ.”

ಸ್ವಾಮಿಮಹಾರಾಜರ ಆಶ್ವಾಸನೆಯನ್ನು ಕೇಳಿ ಚಂದ್ರಿಕೆಗೆ ಹಿಡಿಸಲಾರದಷ್ಟು ಸಂಭ್ರಮವಾಯಿತು. ಇಷ್ಟು ದಿನಗಳ ವರೆಗೆ ಏಕನಿಷ್ಠೆಯಿಂದ ಸ್ವಾಮಿಸೇವೆ ಮಾಡಿದ್ದಕ್ಕೆ ಕೃತಾರ್ಥಳಾಗುವೆನೆಂದು ಅವಳು ಹಿರಿಹಿರಿ ಹಿಗ್ಗಿದಳು. ಅನಂತರದಲ್ಲಿ ಅವಳು ಸುಭಾನರಾಯನ ದುರ್ವರ್ತನವನ್ನೂ, ತನ್ನಿಂದ ಘಟಿಸಿದ ಕೃತಿಯನ್ನೂ ಬಂಕಟಸ್ವಾಮಿಗಳ ಸಮ್ಮುಖದಲ್ಲಿ ನಿವೇದಿಸಿದಳು. ಆಗ ಅವರಾದರೂ ಅವಳ ಸದ್ಗುಣಗಳನ್ನು ಬಹಳವಾಗಿ ಕೊಂಡಾಡಿ, ಪಾಪಿಯಾದ ಸುಬಾನನು ತನ್ನ ದುಷ್ಕರ್ಮದ ಫಲವನ್ನು ಭೋಗಿಸಿದನೆಂದು ನುಡಿದರು. ತರುವಾಯ ಅವಳು ತನ್ನ ಒಡತಿಯು ಹೇಳಿದ ಸಂಗತಿಯನ್ನು ಅವರಿಗೆ ತಿಳಿಸಿದಳು.

ಬಂಕಟಸ್ವಾಮಿಗಳು ಚಂದ್ರಿಕೆಯ ಹೇಳಿಕೆಯಂತೆ ಶಿವರಾಮ-ರಾಮರಾಜ-ಜನಾಬಾಯಿಯರನ್ನು ಕರೆತರುವದಕ್ಕಾಗಿ ಬಾವಡೆಗ್ರಾಮಕ್ಕೆ ತನ್ನ ಶಿಷ್ಯರನ್ನು ಕಳುಹಿಸಿದರು. ಸಗುಣಾಗವಳಿತಿಯ ಬಳಿಯಲ್ಲಿದ್ದ ಕುದುರೆಗಳನ್ನು ತೆಗೆದುಕೊಂಡು ಚಂದ್ರಿಕೆಯೂ ಒಬ್ಬ ಸೇವಕನೂ ತಾರಾಬಾಯಿಯು ಬರುವ ನೆಲಮಾರ್ಗದ ದ್ವಾರದ ಬಳಿಗೆ ಸಾಗಿದರು.

ನಿಯಮಿತ ವೇಳೆಗೆ ಸರಿಯಾಗಿ ಬರುವ ಬಗ್ಗೆ ಸ್ವಾಮಿಗಳು ಎಲ್ಲ ಜನರಿಗೆ ತಿಳಿಸಿದ್ದರು. ಆ ವೇಳೆಯು ಸಮೀಪಿಸಿದ್ದರೂ ಯಾರೂ ಬಾರದ್ದರಿಂದ ಅವರು ಆಲೋಚನೆಯಲ್ಲಿ ಬಿದ್ದಿದ್ದರು. ಅಷ್ಟರಲ್ಲಿ ಸಗುಣಾಗವಳಿತಿಯು ಅಲ್ಲಿಗೆ ಬಂದು, ಸ್ವಾಮಿಗಳಿಗೆ ದೀರ್ಘದಂಡವತ ಪ್ರಣಾಮಗಳನ್ನರ್ಪಿಸಿ—

“ಇನ್ನೂ ತಾರಾಬಾಯಿಯವರೂ ಚಂದ್ರಿಕೆಯೂ ಬಂದಿಲ್ಲವೇನು?”

“ಸಗುಣಾಬಾಯಿ, ಅವರು ಇದುವರೆಗೆ ಯಾಕೆ ಬರಲಿಲ್ಲವೋ ಏನೋ

ಎಂದು ನನ್ನ ಮನಸ್ಸು ಕಾತರಗೊಳ್ಳತೊಡಗಿರುವದು. ಪನ್ಹಾಳಗಡದಲ್ಲಿ ನಿನ್ನೆ ನಡೆದ ಘಟನೆಯಿಂದ ತಾರಾಬಾಯಿಯವರ ಮೇಲೆ ಹೊಸದಾಗಿ ಯಾವದೊಂದು ಆಪತ್ತು ಬಂದೊದಗಿರಬಹುದೇನೆಂದು ನನ್ನ ಮನಸ್ಸು ಗೊಂದಲದಲ್ಲಿ ಬಿದ್ದಿರುವದು. ಬಾವಡೆಯ ಜನರು ಬೇಗನೆ ಒರಬಹುದೆಂಬದರಲ್ಲಿ ಸಂಶಯವಿಲ್ಲ; ಆದರೆ ನನ್ನ ಮನಸ್ಸು ಪನ್ಹಾಳಗಡದ ಕಡೆಗೆ ಹರಿಯತೊಡಗಿದೆ'' ಎಂದು ನುಡಿದು ಬಂಕಟಸ್ವಾಮಿಗಳು ಸ್ವಲ್ಪ ವೇಳೆಯವರೆಗೆ ವಿಚಾರ ಮಾಡಿ, ''ರಾಜಸಬಾಯಿಯು ಬೇಕಾದಂತಹ ಕಾವಲಿಟ್ಟರೂ ನೆಲಮಾರ್ಗದಿಂದ ತಾರಾಬಾಯಿಯವರು ಪಾರಾಗಿ ಬರಬಹುದಾಗಿದೆ. ಚಂದ್ರಿಕೆ-ಸುಭಾನರಾಯರ ಪ್ರಕರಣದಿಂದ ಅವರು ಮತ್ತಿಷ್ಟು ಸಂಕಟದಲ್ಲಿ ಬಿದ್ದರೆಂದು ಹೇಳಲು ಪ್ರತ್ಯವಾಯವಿಲ್ಲ. ಆಗುವದೆಲ್ಲವೂ ಆಗಿ ಹೋಗಲಿ. ಅನುಕೂಲಕಾಲವೊದಗುವ ವರೆಗೆ ದುಃಖಗಳನ್ನು ಅನುಭವಿಸಲೇ ಬೇಕಾಗುವದು.''

''ಸ್ವಾಮಿಮಹಾರಾಜರೇ, ನಮ್ಮೆಲ್ಲರ ಗೃಹದೆಸೆಯು ತೀರಿ ಎಂದು ಸುದಿಸಗಳನ್ನು ಕಂಡೇವು?''

''ಸಗುಣಾಬಾಯಿ, ಆತುರಗೊಳ್ಳಬೇಡಿರಿ. ನಿಮ್ಮೆಲ್ಲರ ಭಾಗ್ಯೋದಯಕಾಲವು ಸಮೀಪಿಸಿರುವದು.''

ಸಗುಣಾಬಾಯಿಗೆ ಗುರುಮಹಾರಾಜರ ಮಾತಿನಿಂದ ಸಂಭ್ರಮವಾಯಿತು. ಅಷ್ಟರಲ್ಲಿ ಮಠದ ಹೊರಗೆ ಕುದುರೆಗಳ ಖುರಪುಟಗಳ ಧ್ವನಿಯು ಕೇಳತೊಡಗಿತು. ಸ್ವಲ್ಪ ಹೊತ್ತಿನಲ್ಲಿ ಇಬ್ಬರು ಕುದುರೆಗಳಿಂದಿಳಿದು, ಸ್ವಾಮಿಗಳು ಕುಳಿತಿದ್ದ ಆಸಂದವನದಲ್ಲಿ ಬಂದು ಅವರ ಚರಣಗಳ ಮೇಲೆ ಮಸ್ತಕವಿರಿಸಿದರು. ಅವರಲ್ಲಿ ಒಬ್ಬನು ಮಧ್ಯಮವಯಸ್ಸಿನವನಿದ್ದನು; ಮತ್ತೊಬ್ಬನು ತರುಣನಿದ್ದನು. ಅವರೀರ್ವರನ್ನು ನೋಡಿದ ಕೂಡಲೆ ಸ್ವಾಮಿಗಳು ದಂಗು ಬಡೆದು ಕುಳಿತರು. ಈ ಅಪರಿಚಿತರು ಯಾರಿರಬಹುದೆಂದು ಅವರು ಯೋಚನೆಗೊಳಗಾದರು. ಸಗುಣಾಬಾಯಿಯ ಸ್ಥಿತಿಯಾದರೂ ಹಾಗೆಯೇ ಆಯಿತು. ಪರಕ್ಷಣದಲ್ಲಿ ಆ ಆಗಂತುಕರ ಪರಿಚಯವು ಸ್ವಾಮಿಗಳಿಗಾಗಿ, ಅವರು ತರುಣ ಮನುಷ್ಯನನ್ನು ಕುರಿತು, ನಸುನಗುತ್ತ, ''ಚಂದ್ರಸೇನಾ'' ಎಂದು ಸಂಬೋಧಿಸಿದರು.

ವಾಚಕ ಮಹಾಶಯರೇ, ಚಂದ್ರಸೇನನು ಯಾರು? ಮಧ್ಯಮ ವಯಸ್ಕನಾದ ಮತ್ತೊಬ್ಬ ಮನುಷ್ಯನು ಯಾರಿರಬಹುದು?

---

# ಅಮ್ಮಾ! ಇವರು ಯಾರೆ?

ಬಂಕಟಸ್ವಾಮಿಗಳು ಸಂಬೋಧಿಸಿದ ಚಂದ್ರಸೇನನು ಯಾರೆಂಬುದನ್ನು ವಾಚಕ ಮಹಾಶಯರು ಅರಿತಿರಬಹುದು. ಚಂದ್ರಿಕೆಯು ಪುರುಷವೇಷಧಾರಿಯಾದ್ದರಿಂದ ಯಾರಿಗೂ ಅವಳ ಗುರುತು ಬೇಗನೆ ಹತ್ತಲಿಲ್ಲ. ತಾರಾಬಾಯಿಯಾದರೂ ಪುರುಷ ವೇಷವನ್ನು ಧರಿಸಿದ್ದಳು. ಅಶ್ವಾರೋಹಿಗಳಾಗಿ ಬಂದು ಆನಂದವನದಲ್ಲಿದ್ದ ಸ್ವಾಮಿಗಳಿಗೆ ಪ್ರಣಾಮಗಳನ್ನರ್ಪಿಸಿದ ವ್ಯಕ್ತಿಗಳೇ ಚಂದ್ರಿಕೆ-ತಾರಾಬಾಯಿಯವರು. ಬಂಕಟಸ್ವಾಮಿಗಳು ತಮ್ಮ ಉದ್ಯಾನವನ್ನು ಬಿಟ್ಟು, ಆ ಆಗಂತುಕರನ್ನು ಕೂಡಿಕೊಂಡು ನೆಲಮನೆಯಲ್ಲಿ ಹೋದರು. ಮುಂದೆ ಹೇಗೆ ವರ್ತಿಸಿ ಕಾರ್ಯಸಾಧನೆ ಮಾಡಿಕೊಳ್ಳಬೇಕೆಂದು ಎಲ್ಲರೂ ಆ ನೆಲಮನೆಯಲ್ಲಿ ಗುಪ್ತಸಂಚು ನಡೆಯಿಸತಕ್ಕವರಿದ್ದರು. ಬಾವಡೆಯ ಜನರು ಇದುವರೆಗೂ ಬಾರದ್ದರಿಂದ ಅಂದಿನ ಕಾರ್ಯಕ್ರಮವು ಇನ್ನೂ ನಡೆದಿರಲಿಲ್ಲ; ಎಲ್ಲರೂ ಅವರ ಮಾರ್ಗಪ್ರತೀಕ್ಷೆಯನ್ನು ಅತ್ಯಂತ ಉತ್ಕಂಠೆಯಿಂದ ಮಾಡತೊಡಗಿದ್ದರು. ಕೆಲವು ವೇಳೆಯ ಮೇಲೆ ಆ ಜನರು ಮಠಕ್ಕೆ ಬಂದರು.

ರಾಮರಾಜನ ವಯಸ್ಸು ಈಗ ಹದಿನಾಲ್ಕು-ಹದಿನೈದರೊಳಗಿರಬಹುದು. ತಾರುಣ್ಯಪ್ರಾಂತದಲ್ಲಿ ಪ್ರವೇಶ ಮಾಡತೊಡಗಿದ ಅವನ ಮುಖಚರ್ಯೆಯು ಅತ್ಯಂತ ಕಮನೀಯವಾಗಿತ್ತು. ಗಟ್ಟಿಮುಟ್ಟಿಯಾದ ಮೈಕಟ್ಟಿನವನೂ, ಗೌರ ವರ್ಣದವನೂ, ರಾಜಲಕ್ಷಣಗಳಿಂದ ಸೊಬಗು ವೊಡೆದವನೂ ದ ಆ ರಾಜಪುತ್ರನು ಚಿತ್ತಾಕರ್ಷಕನಾಗಿದ್ದನು. ಮಧ್ಯಮ ವಯಸ್ಸಿನ ಸರದಾರನು-ತಾರಾಬಾಯಿಯು ರಾಮರಾಜನನ್ನು ಒಳಿಯಲ್ಲಿ ಕುಳ್ಳಿರಿಸಿಕೊಂಡನು. ಅವನ ಮೈ ಮೇಲೆ ಕೈಯಾಡಿಸುತ್ತ ಆ ಸರದಾರನು ಅವನ ಯೋಗಕ್ಷೇಮವನ್ನು ವಿಚಾರಿಸಲಾರಂಭಿಸಿದನು. ತಮ್ಮ ಸ್ಥಿತಿಯನ್ನು ಬಚ್ಚಿಡಬೇಕೆಂದು ಮೊದಲೇ ನಿಶ್ಚಿತವಾದ್ದರಿಂದ ಚಂದ್ರಿಕೆಯೂ ತಾರಾಬಾಯಿಯೂ ಪುರುಷವೇಷದಿಂದಿದ್ದು, ಪುರುಷರಂತೆಯೇ ನಟಿಸತೊಡಗಿದ್ದರು. ರಾಮರಾಜನಿಗೆ-ಸಂತಾಜಿಗೆ ಈ ನಿಜಸ್ಥಿತಿಯು ಇನ್ನೂ ಕೆಲವು ದಿವಸಗಳ ವರೆಗೆ ತಿಳಿಯಬಾರದೆಂದು ಅವರು ಸಂಕಲ್ಪ ಮಾಡಿಕೊಂಡಿದ್ದರು. ಆಗ ಆ ಮಧ್ಯಮ ವಯಸ್ಸಿನ ಸರದಾರನು ಸಂತಾಜಿಯನ್ನು ಕುರಿತು—"ಸಂತಾಜೀ, ಸದ್ಗುರುಗಳ ಅನುಗ್ರಹದಿಂದ ನೀನು ದೊಡ್ಡವನಾದೆ" ಎಂದು, ನುಡಿದು ಜನಾಬಾಯಿಯನ್ನು ಕುರಿತು–"ಜನೀ, ನಿನ್ನ ಪುಣ್ಯಪ್ರಭಾವದಿಂದ ಇಂತಹ ಕುಮಾರನು ನಿನಗೆ ಲಭಿಸಿರುವನು."

ಆ ಸರದಾರನು ಅಪರಿಚಿತನಿದ್ದರೂ ತನ್ನನ್ನು ಇಷ್ಟೇಕೆ ಪ್ರೀತಿಸುತ್ತಿರ ಬಹುದೆಂದು ಸಂತಾಜಿಯು ವಿಚಾರದಲ್ಲಿ ಮುಳುಗಿದನು. ಈ ವಿಷಯವಾಗಿ ಹಿಂದಿನಿಂದ ತಾಯಿಯನ್ನು ಕೇಳಬೇಕೆಂದು ಅವನು ಸಂಕಲ್ಪ ಮಾಡಿಕೊಂಡು ತಟಸ್ಥನಾಗಿ ಕುಳಿತನು. ಮೊಮ್ಮಗನ ದರ್ಶನದ ಆನಂದಲಹರಿಯಲ್ಲಿ ತಾರಾಬಾಯಿಯ ಮುಖದಿಂದ ಗುಹ್ಯಸಂಗತಿಯು ಎಲ್ಲಿ ಹೊರಬೀಳುವದೋ ಎಂದು ಸ್ವಾಮಿಗಳು ಸಂಶಯಪಟ್ಟಿದ್ದರು. ಅಷ್ಟರಲ್ಲಿ ಸಂತಾಜಿಯನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗುವದಕ್ಕಾಗಿ ತಾರಾಬಾಯಿಯು ಜನಾಬಾಯಿಗೆ ತಿಳಿಸಿದಳು. ಸಂತಾಜಿಯು ಅಲ್ಲಿಂದ ಎದ್ದು ಹೋದ ಬಳಿಕ ತಾರಾಬಾಯಿಯು--

"ಗುರುಮಹಾರಾಜ, ಚಂದ್ರಿಕೆಯು ಪನ್ಹಾಳಗಡದಲ್ಲಿ ಮಾಡಿದ ಶೂರತನದ ಕೃತ್ಯವು ತಮಗೆ ತಿಳಿದಿರಬಹುದಲ್ಲವೆ? ಅಕಸ್ಮಾತ್ತಾಗಿ ಸಂಭವಿಸಿದ ಈ ಸಂಗತಿಯಿಂದ ನಮ್ಮ ಗುಪ್ತಕಾರಸ್ಥಾನವೆಲ್ಲ ಹೊರಬಿದ್ದಿರುವದು. ಸುಭಾನರಾಯನು ಮರಣಹೊಂದುವ ಪೂರ್ವದಲ್ಲಿ ಎಲ್ಲ ಕಾರಸ್ಥಾನವನ್ನು ರಾಜಸಬಾಯಿಗೆ ತಿಳಿಸಿರುವನು. ಅವಳು ಚಂದ್ರಿಕೆಯನ್ನೂ ರಾಮರಾಜನನ್ನೂ ಶೋಧಿಸುವದಕ್ಕಾಗಿ ತನ್ನ ಗುಪ್ತಚಾರರನ್ನು ಅಲ್ಲಲ್ಲಿಗೆ ಕಳುಹಿಸಿರುವಳು. ರಾಮರಾಜನು ಇಂತಹ ಸ್ಥಳದಲ್ಲಿರುವನೆಂಬದು ಸುಭಾನರಾಯನಿಗೆ ಗೊತ್ತಿರದ್ದರಿಂದ ಪರಿಣಾಮವು ಒಳಿತಾಯಿತು. ಮುಂದೆ ಏನು ಮಾಡಬೇಕೆನ್ನುವದು ನನಗೆ ಸೂಚಿಸಲೊಲ್ಲದು. ಇನ್ನು ಮೇಲೆ ಯಾವ ಬಗೆಯ ಧೋರಣಹಿಡಬೇಕೆಂಬದನ್ನು ತಿಳಿಸಿದರೆ, ಸೇವಕರಾದ ನಾವು ನಿಮ್ಮ ಮಾತಿನಂತೆ ನಡೆಯುವದಕ್ಕೆ ಸಿದ್ಧರಾಗುವೆವು. ಈಗಾಗಲೆ ರಾಜಸಬಾಯಿಯು ಮೊದಲಿನ ಕಾವಲುಗಾರರನ್ನು ತೆಗೆದು, ಹೊಸ ಸೇವಕರನ್ನು ಕಾರಾಗೃಹರಕ್ಷಣೆಗಾಗಿ ನಿಯಮಿಸಿರುವಳು. ಕಾವಲು ಅತಿಶಯವಾಗಿ ಬಿಗಿಯಾಗಿರುವದು. ನೆಲಮಾರ್ಗದ ಅನುಕೂಲವಿರುವದೆಂದು ನಮ್ಮ ಒಳಸಂಚು ನಡೆಯಿಸುವದಕ್ಕೆ ಆಸ್ಪದವಿರುವದು. ರಾಜಸಬಾಯಿಗೆ ರಾಮರಾಜನು ಇಂಥ ಸ್ಥಳದಲ್ಲಿರುವನೆಂಬ ಸುಳಿವು ಹತ್ತಿದರೆ, ಪರಿಣಾಮವು ಒಳಿತಾಗಲಾರದೆಂದು ನನಗೆ ತಿಳಿದಿರುವದು."

ತಾರಾಬಾಯಿಯು ಹೀಗೆ ನುಡಿದ ಕೂಡಲೆ ಚಂದ್ರಿಕೆಯು:—"ಅಮ್ಮಾ, ನಮ್ಮ ಆಶೆಯ ತಂತುವಾದ-ಭಾಗ್ಯೋದಯದ ಅಂಕುರವಾದ-ನಮ್ಮೆಲ್ಲರ ಸಾಹಸದ ಕುರುಹಾದ-ಸ್ವರಾಜ್ಯದ ಉದಯೋನ್ಮುಖ ಸೂರ್ಯನಾದ-ನಮ್ಮ ಗೌರವದ ಗುರುತಾದ-ಹಿಂದುಪದಪಾತಶಾಹಿಯ ಭಾವೀ ಛತ್ರಪತಿಗಳಾದ ರಾಮ

ರಾಜರನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿ ಜತನ ಮಾಡದಿದ್ದರೆ, ನಮ್ಮಂತಹ ಸೇವಕವರ್ಗವನ್ನು ಸುಡಬೇಕು!''

''ರಾಮರಾಜರ ಪರಿಚಯವು ಯಾರಿಗೂ ಇರುವದಿಲ್ಲ. ಎಲ್ಲ ಜನರು ಅವರನ್ನು ಜನಾಬಾಯಿಯ ಕುವರನೆಂದೇ ಭಾವಿಸಿರುವರು. ಅವರ ವಿಷಯ ದಲ್ಲಿ ಯಾರೂ ಚಿಂತಿಸಕೂಡದು.'' ಎಂದು ಶಿವರಾಮಪಂತನು ನುಡಿಯಲು, ತಾರಾಬಾಯಿಯು ಬಂಕಟಸ್ವಾಮಿಗಳನ್ನು ಕುರಿತು: ''ನನ್ನ ಕುಮಾರ ರಾಮ ರಾಜನಿಗೆ ಅವನ ಕುಲಕಥೆಯನ್ನು ತಿಳಿಸಬೇಕೆನ್ನುವಿರಾ?''

''ತಾರಾಬಾಯಿಯವರೆ, ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು?'' ಎಂದು ಬಂಕಟಸ್ವಾಮಿಗಳು ಕೇಳಲು, ತಾರಾಬಾಯಿಯು:—''ಶಿವರಾಮ ಪಂತರು ಅತ್ಯಂತ ಸ್ವಾಮಿನಿಷ್ಠೆಯಿಂದ ನನ್ನ ಮಗುವನ್ನು ರಕ್ಷಿಸಿರುವರು. ಅವರು ನನ್ನ ಕುಮಾರನ ಹಿತಚಿಂತನೆಯಲ್ಲಿ ಬಹಳೇ ದಕ್ಷರಿರುತ್ತಾರೆ. ಅವರ ಅಭಿಪ್ರಾಯವೇ ನನ್ನ ಅಭಿಪ್ರಾಯವು.'' ಎಂದು ನುಡಿದ ಕೂಡಲೆ ಪಂತನು:—

''ಅಮ್ಮನವರೆ, ಎಲ್ಲ ತಂತ್ರಗಳು ಪರಮಾತ್ಮನ ಇಚ್ಛೆಯಂತೆ ನಡೆಯು ತ್ತಿರುತ್ತವೆ. ಜಗನ್ನಿಯಾಮಕನ ಕಾರ್ಯದಲ್ಲಿ ನಮ್ಮಂತಹರು ನಿಮಿತ್ತ ಮಾತ್ರರಾಗಿ ಪರಿಣಮಿಸುವೆವು. ತಮಗೆ ಬೇಗನೆ ಭಾಗ್ಯೋದಯವಾಗುವ ಸಂಧಿಯಿರುವದರಿಂದಲೆ ಬಾಲರಾಜರ ರಕ್ಷಣೆಯಾಯಿತು. ಇದರಲ್ಲಿ ನನ್ನ ಮಹತಿಯೇನಿರುವದು? ಅವರಿಗೆ ನಿಜವಾದ ಸ್ಥಿತಿಯನ್ನು ಅರುಹಬೇಕೆಂದು ನಿಮ್ಮ ಮನಸ್ಸಿನಲ್ಲಿದ್ದರೆ, ಅದಕ್ಕೆ ನನ್ನದೇನೂ ಅಡ್ಡಿಯಿಲ್ಲ.''

''ಈ ವಿಷಯದಲ್ಲಿ ಚಂದ್ರಸೇನನು ಹೇಗೆ ಅಭಿಪ್ರಾಯವುಳ್ಳವನಿರುವನೋ ಅದರಂತೆ ವರ್ತಿಸಿರಿ.'' ಎಂದು ಬಂಕಟಸ್ವಾಮಿಗಳು ಮುಗುಳು ನಗೆ ನಗುತ್ತ ನುಡಿದ ಕೂಡಲೆ ಎಲ್ಲರೂ ಖೊಳ್ಳನೆ ನಕ್ಕರು. ಆಗ ಚಂದ್ರಿಕೆಯು ನಗುತ್ತಲೆ:

''ಮಹಾರಾಜರೆ, ಚಂದ್ರಸೇನನಾರು?''

''ಪುರುಷವೇಷಧಾರಿಯಾಗಿ ಎಲ್ಲರನ್ನು ದಂಗು ಬಡಿಸಿದ ವೀರವನಿತೆ ಯನ್ನು ಪುರುಷವಾಚಕ ಶಬ್ದದಿಂದ ಸಂಬೋಧಿಸಲು ಪ್ರತ್ಯವಾಯವೇನು?''

''ಸದ್ಗುರೊ! ನೀವೂ ಚೇಷ್ಟೆಗೆ ಪ್ರಾರಂಭಮಾಡಿದಿರಾ? ಏನೂ ಅಡ್ಡಿ ಯಿಲ್ಲ; ಅಗತ್ಯವಾಗಿ ವಿನೋದ ಮಾಡಿರಿ. ಸ್ವಾಮಿಕಾರ್ಯಕ್ಕಾಗಿ ಈ ಚಂದ್ರಿ ಕೆಯು ಎಂತಹ ಕೃತಿಯನ್ನು ಮಾಡುವದಕ್ಕೆ ಹಿಂಜರಿಯುವದಿಲ್ಲ.''

''ಚಂದ್ರಿಕೆ, ನೀನು ಆದರ್ಶ ಆರ್ಯಭಗಿನಿಯಿರುವೆ!'' ಎಂದು ಸ್ವಾಮಿ

ಗಳು ಉದ್ಗಾರ ತೆಗೆದು ತಾರಾಬಾಯಿಯನ್ನು ಕುರಿತು, "ಸದ್ಯಕ್ಕೆ ರಾಮ ರಾಜನಿಗೆ ಅವರ ನಿಜಸ್ಥಿತಿಯನ್ನು ಅರುಹಬೇಡಿರಿ. ರಾಜಸಬಾಯಿಯು ಅವರ ನಾಶಕ್ಕಾಗಿ ಹೊಂಚುಹಾಕಿರುವದರಿಂದ ಶಕ್ತಿಮೀರಿ ಸಾಹಸ ಮಾಡಿ ಅವರನ್ನು ರಕ್ಷಿಸಿರಿ."

"ಬಾಲರಾಜರನ್ನು ರಕ್ಷಿಸುವದಕ್ಕಾಗಿ ನನ್ನ ಯೋಜನೆಯಾದರೆ ನಾನು ಆ ಕಾರ್ಯವನ್ನು ಅತ್ಯಂತ ನಿಷ್ಠೆಯಿಂದ ಮಾಡುವೆನು.'

"ಚಂದ್ರಿಕೆ, ರಾಜಸಬಾಯಿಯ ದೃಷ್ಟಿಯಿಂದ ನೀನು ದೊಡ್ಡ ಅಪರಾಧಿ ಯಾಗಿರುವದರಿಂದ ನಿನ್ನ ರಕ್ಷಣೆಯು ಹೇಗಾಗುವದೋ ಎಂದು ನಾವು ಚಿಂತೆ ಮಾಡುತ್ತಿರಲು, ನೀನು ಎರಡನೆಯವರ ರಕ್ಷಣೆಯ ಕಾರ್ಯವನ್ನು ಹೇಗೆ ವಹಿಸಲು ಶಕ್ತಳಾಗುವೆ? ಇನ್ನು ಮೇಲೆ ರಾಜಸಬಾಯಿಯು ನನ್ನ ಕುವರನ ಅನಿಷ್ಟ ಚಿಂತನೆಯನ್ನು ಮಾಡಲಾರಳೆಂದು ನನಗೆ ತಿಳಿಯತೊಡಗಿದೆ. ಅವಳಿಂದ ಈ ನೀಚ ಕೃತಿಯು ಘಟಿಸಿದರೆ ಸರ್ವ ಪ್ರಜಾಜನರೂ ಮಂತ್ರಿ-ಸರದಾರರೂ ಅವಳ ಮೇಲೆ ಕ್ಷೋಭೆಗೊಳ್ಳದಿರಲಾರರು. ನನ್ನ ಪಕ್ಷವು ಹೀನಬಲವಾಗಿ ನಾನು ಅವನತ ಸ್ಥಿತಿಯಲ್ಲಿದ್ದರೂ ಸಾತ್ವಿಕ ಪ್ರಜಾಜನರು ರಾಜವಂಶದ ವಿಷಯ ವಾಗಿ ಪೂಜ್ಯಬುದ್ಧಿಯುಳ್ಳವರಿರುವರು. ಅವಳಿಂದ ಯಾವದೊಂದು ಅನಿಷ್ಟ ಚಿಂತನೆಯ ಕೃತಿಯು ಘಟಿಸಿದರೆ, ಎಲ್ಲ ಜನರು ನನ್ನ ಪಕ್ಷವನ್ನು ಹಿಡಿಯುವದು ನಿಶ್ಚಯವು. ಪ್ರಜಾಕ್ಷೋಭೆಯನ್ನು ಉತ್ಪನ್ನಮಾಡಿದ ರಾಜನು ಪದಚ್ಯುತ ನಾಗುವದರಲ್ಲಿ ಸಂದೇಹವಿಲ್ಲ."

ಹೀಗೆ ತಾರಾಬಾಯಿಯು ನುಡಿದ ಕೂಡಲೆ ಸಗುಣಾಬಾಯಿಯು— "ರಾಜಸಬಾಯಿಯು ನೀಚ ಕೃತಿಯನ್ನು ಅತ್ಯಂತ ಗುಪ್ತವಾಗಿ ಮಾಡುವಳು. ತನ್ನಿಂದ ಅನುಚಿತ ಕಾರ್ಯವು ಘಟಿಸಿದ್ದರೂ, ಘಟಿಸಿಲ್ಲವೆಂದು ಬಹಿರಂಗದಲ್ಲಿ ಜನರಿಗೆ ತೋರಿಸುವದಕ್ಕೆ ಅವಳು ಹಿಂಜರಿಯುವದಿಲ್ಲ. ನಾವು ಜಾಗ್ರತೆಯಿಂದ ನಡೆದಷ್ಟು ಉತ್ತಮವು."

"ಚಂದ್ರಿಕೆಯು ರಾಮರಾಜರನ್ನು ರಕ್ಷಿಸುವದಕ್ಕೆ ಸಮರ್ಥಳಿರುವಳು. ಅವಳ ಸಹಾಯಕ್ಕೆ ಶಿವರಾಮಪಂತರಂತೂ ಇದ್ದೇ ಇರುವರು" ಎಂದು ಬಂಕಟ ಸ್ವಾಮಿಗಳು ನುಡಿದು—"ಚಂದ್ರಿಕೆ, ನಿನ್ನ ಆತ್ಮವಿಶ್ವಾಸವು ಅತ್ಯಂತ ಪ್ರಬಲವಾ ದದ್ದಿರುವದು. ನೀನು ಬಾಲರಾಜನನ್ನು ಹೇಗೆ ರಕ್ಷಿಸುವೆ ಹೇಳು ನೋಡುವಾ."

"ನಾನು ಬೈರಾಗಿಯಾಗಿ ಬಾವಡೆಯಲ್ಲಿ ವಾಸ ಮಾಡಿ, ಶತ್ರುಗಳ ಚಲನ

ವಲನವನ್ನು ತಿಳಿದು ಪಂತರನ್ನು ಎಚ್ಚರಗೊಳಿಸುತ್ತಿರುವೆನು.''

''ಧನ್ಯ! ಚಂದ್ರಿಕೆ! ನಿನ್ನ ಕಲ್ಪಕಬುದ್ಧಿಯ ಧನ್ಯವಾದನೆಯನ್ನು ಎಷ್ಟು ಬಗೆಯಿಂದ ಮಾಡಿದರೂ ಕಡಿಮೆಯಿರುವದು'' ಎಂದು ಬಂಕಟಸ್ವಾಮಿಗಳು ನುಡಿದರು. ಆಗ ತಾರಾಬಾಯಿಯು ಸ್ವಾಮಿಮಹಾರಾಜರನ್ನು ಕುರಿತು—

''ಸದ್ಗುರುಗಳೆ, ಸಂಭಾಜಿರಾಜನಿಂದ ಕೊಲ್ಹಾಪುರದ ರಾಜ್ಯವನ್ನು ತಿರುಗಿ ತೆಗೆದು ಕೊಳ್ಳುವದಕ್ಕೆ ಸಮರ್ಥಳಾಗುವೆನೆಂದು ನನ್ನಲ್ಲಿ ವಿಶ್ವಾಸವಿಲ್ಲ, ದೈವಾನುಕೂಲ ಪರಿಸ್ಥಿತಿಯಿಂದ ವರ್ಧಮಾನ ಶಕ್ತಿಶಾಲಿಯಾದ ಅವನ ಮುಂದೆ ವಿಧಿವಿಲಾಸ ದಿಂದ ಹೀನಬಲಳಾಗ ತೊಡಗಿರುವ ನನ್ನ ಆಟವೇನು ನಡೆಯಬೇಕು? ಸಂಭಾ ಜಿಯನ್ನು ಪದಚ್ಯುತಗೊಳಿಸುವ ಸಾಹಸವನ್ನು ಬಿಡಬೇಕೆಂದು ನನ್ನ ಮನಸ್ಸಿನಲ್ಲಿ ಬಂದಿರುವದು.''

''ಅಮ್ಮಾ! ಇದೇನು ಮಾತನಾಡುವಿರಿ?'' ಎಂದು ಚಂದ್ರಿಕೆಯು ಆಶ್ಚರ್ಯಚಕಿತಳಾಗಿ ನುಡಿಯಲು, ತಾರಾಬಾಯಿಯು, ''ನನ್ನ ಮಾತಿನಿಂದ ನೀವು ಸೋಜಿಗಗೊಂಡಿದ್ದರಲ್ಲಿ ಆಶ್ಚರ್ಯವಿಲ್ಲ. ನಾನು ಬೇರೆ ವಿಧವಾಗಿ ರಾಜ ಪದವನ್ನು ಸಂಪಾದಿಸಬೇಕೆಂದು ಹೊಂಚುಹಾಕಿರುವೆನು. ಶಾಹೂರಾಜನಿಗೆ ಪುತ್ರಸಂತಾನವಿಲ್ಲ. ಈಗ ಅವರು ವೃದ್ಧಾವಸ್ಥೆಯವರಾಗಿರುವರು. ಮುಂದೆ ದತ್ತಪುತ್ರನನ್ನು ತೆಗೆದುಕೊಳ್ಳುವ ಪ್ರಸ್ತಾಪವು ಹೊರಡತಕ್ಕದ್ದಿರುವದು. ಆ ಸಂಧಿಯನ್ನು ಸಾಧಿಸಿ, ರಾಮರಾಜನನ್ನು ಮಗನನ್ನಾಗಿ ಮಾಡಿಕೊಳ್ಳುವ ವಿಷಯ ವಾಗಿ ಅವರಿಗೆ ತಿಳಿಸಬೇಕೆಂದು ನಾನು ನಿರ್ಧರಿಸಿರುವೆನು.''

''ತಾರಾಬಾಯಿಯವರೇ, ಈ ಮಾತಿಗೆ ಶಾಹೂರಾಜರು ಸಮ್ಮತಿಸಬಹು ದೇನು?'' ಎಂದು ಬಂಕಟಸ್ವಾಮಿಗಳು ನುಡಿಯಲು, ತಾರಾಬಾಯಿಯು:—

''ನಾನು ಈ ಕಾರ್ಯಸಾಧನೆಗಾಗಿ ಬೇರೆ ವಿಧವಾದ ಯೋಜನೆ ಮಾಡಿರು ವೆನು. ಶಾಹೂರಾಜರು ತಮ್ಮ ಉಪಪತ್ನಿಯಾದ ವಿರೂಬಾಯಿಯವರ ಸೂತ್ರದ ಗೊಂಬೆಯಾಗಿರುವರು, ಅವಳನ್ನು ಈ ಕೆಲಸದಲ್ಲಿ ಅನುಕೂಲ ಮಾಡಿಕೊಳ್ಳ ಬೇಕೆಂದು ನಿರ್ಧರಿಸಿರುವೆನು. ಪೇಶವೆಯನ್ನಾದರೂ ನೆರವಿಗೆ ತೆಗೆದುಕೊಳ್ಳು ವೆನು. ಈ ವಿಷಯವನ್ನು ತಿಳಿಸುವದಕ್ಕಾಗಿ ಇಂದು ಇಲ್ಲಿಗೆ ಬಂದೆನು. ಇದರ ಮೇಲೆ ಸದ್ಗುರು ಮಹಾರಾಜರ ಇಚ್ಛೆಯು.''

''ನಿಮ್ಮ ವಿಚಾರವು ಪರಿಪಕ್ವವಾದದ್ದಿರುವದು. ಸದ್ಯದ ಪ್ರತಿಕೂಲ ಪರಿಸ್ಥಿತಿಯಲ್ಲಿ ಇದಕ್ಕಿಂತಲೂ ಉತ್ತಮವಾದ ಮಾರ್ಗವು ಮತ್ತೊಂದಿಲ್ಲ.

ಶಾಹೂರಾಜರು ದುರಾಗ್ರಹಿಗಳಿರುವದಿಲ್ಲ. ಅವರು ತಮ್ಮ ವಂಶಜರಾದ ರಾಮರಾಜರನ್ನು ಸಿಂಹಾಸನದ ಭಾವೀ ಒಡೆಯರನ್ನು ಮಾಡುವರೆಂದು ನನ್ನ ನಂಬಿಗೆಯಿರುವದು. ಶಾಹೂರಾಜರೊಡನೆ ಸಂಧಾನಮಾಡಿ ಸೆರೆಮನೆಯಿಂದ ಬಿಡುಗಡೆ ಹೊಂದುವದು ಆದ್ಯಕರ್ತವ್ಯವಾಗಿರುವದು. ಆ ಸಂಧಿಯಾದರೂ ನಿಮ್ಮ ಧೂರ್ತತನದಿಂದ ಬೇಗನೆ ಒದಗಬಹುದು.''

"ಎಲ್ಲವೂ ತಮ್ಮ ಅನುಗ್ರಹ ವಿಶೇಷವು!'' ಎಂದು ತಾರಾಬಾಯಿಯು ನುಡಿದಳು. ಸದ್ಯದಲ್ಲಿ ನಡೆದ ಸಂಭಾಜಿ-ಶಾಹೂರಾಜರ ಯುದ್ಧದಲ್ಲಿ ಸಂಭಾಜಿಯು ಪರಾಜಿತನಾಗುವನೆಂದೂ, ಯುದ್ಧಾನಂತರದ ಒಪ್ಪಂದದಲ್ಲಿ ತನ್ನ ಬಂಧವಿಮೋಚನೆ ಮಾಡಬೇಕೆಂದು ಶಾಹೂರಾಜನಿಗೆ ಸಂದೇಶ ಕಳಿಸಬೇಕೆಂದು ಯತ್ನಿಸಿರುವೆನೆಂತಲೂ ಅವಳು ತನ್ನ ನಿರ್ಧಾರವನ್ನು ಎಲ್ಲರಿಗೂ ತಿಳಿಸಿದಳು. ಅನಂತರದಲ್ಲಿ ಎಲ್ಲ ಜನರು ತಮ್ಮ ತಮ್ಮ ಕಾರ್ಯಕ್ಕಾಗಿ ಸ್ವಾಮಿಗಳ ಆಶೀರ್ವಾದ ಪಡೆದು ಅಲ್ಲಿಂದ ಹೊರಟರು. ಪುರುಷವೇಷಧಾರಿಯಾದ ತಾರಾಬಾಯಿಯು ತನ್ನನ್ನೇಕೆ ಇಷ್ಟು ಪ್ರೀತಿಸುತ್ತಿರಬಹುದೆಂಬ ವಿಚಾರವು ಸಂತಾಜಿಯ-ರಾಮರಾಜನ-ಮನಸ್ಸಿನಲ್ಲಿ ಬಂದಿತ್ತು. ಆಗ ಅವನು ತನ್ನ ಸಾಕುತಾಯಿಯನ್ನು ಕುರಿತು—"ಅಮ್ಮಾ! ಇವರು ಯಾರೆ?'' ಎಂದು ಕೇಳಿದನು. ಆಗ ಅವಳು-"ತಮ್ಮಾ! ಇವರೊಬ್ಬ ಸ್ವಕೀಯರಾದ ಸರದಾರರು!'' ಎಂದು ನಗುತ್ತ ಹೇಳಿದಳು.

———

## ಭಾಗ್ಯೋದಯದ ಆಶಾಂಕುರ.

ಧನಾಜಿ ಜಾಧವನ ತರುವಾಯ, ಅವನ ಪುತ್ರನಾದ ಚಂದ್ರಸೇನ ಜಾಧವನಿಗೆ ಸೇನಾಪತಿ ವಸ್ತ್ರಗಳು ದೊರೆತಿದ್ದವು. ಶಿವಪ್ರಭುವಿನ ಕಾಲದಿಂದ ಏಕನಿಷ್ಠೆಯಿಂದ ಸ್ವರಾಜ್ಯ ಸೇವೆಮಾಡಿ ದೇಹದ ಸಾರ್ಥಕತೆ ಮಾಡಿಕೊಂಡ ಸ್ವದೇಶಭಕ್ತನಾದ ಧನಾಜಿಗೆ ಚಂದ್ರಸೇನನಂತಹ ದೇಶದ್ರೋಹಿಯಾದ ಮಗನು ಜನಿಸಿದ್ದೆಂದರೆ ಅತ್ಯಂತ ಶೋಚನೀಯವಾದ ಮಾತಾಗಿತ್ತು. ಯಾವನು ಸ್ವರಾಜ್ಯದ ಅಭ್ಯುದಯಕ್ಕಾಗಿ ತನ್ನ ನೆತ್ತರವನ್ನು ಭೂಮಿಗೆ ಸುರಿಸುತ್ತ ಆಮರಣವಾಗಿ ದೇಹವನ್ನು ಸವೆಸಿದನೋ, ಅಂತಹ ನರಶ್ರೇಷ್ಠನ ಕುಮಾರನು ಈಗ ಸ್ವರಾಜ್ಯದ ನಾಶಕ್ಕಾಗಿ ಪ್ರಯತ್ನಿಸತೊಡಗಿದ್ದನ್ನು ನೋಡಿ ಯಾರಿಗೆ ತಾನೆ ಸಖೇದಾಶ್ಚರ್ಯವಾಗಲಾರದು? ಚಂದ್ರಸೇನನು ಬಾಳಾಜಿ ವಿಶ್ವನಾಥ ಪೇಶವೆಯ ಮೇಲೆ ತನ್ನ

ವರ್ಷಾಸ್ವವನ್ನು ನಡೆಯಿಸಬೇಕೆಂದು ಹವಣಿಸತೊಡಗಿದ್ದನು. ಈ ಬಾಳಾಜಿ ವಿಶ್ವನಾಥನು ಮೊದಲು ಧನಾಜಿ ಜಾಧವನ ಕೈಯಲ್ಲಿ ಚಿಟಣೀಸನಾಗಿದ್ದನು. ಇವನು ಕೊಂಕಣದೊಳಗಿನ ಶ್ರೀವರ್ಧನ ಗ್ರಾಮದವನಿದ್ದು, ಹಬಸಿಯು ತೊಂದರೆ ಕೊಟ್ಟದ್ದರಿಂದ ಸ್ವದೇಶವನ್ನು ಬಿಟ್ಟು ಇಲ್ಲಿಗೆ ಒಂದಿದ್ದನು. ಇವನು ಕೇವಲ ಕಾಗದದ ಮೇಲೆ ಗೆರೆ ಹೊಡೆಯುತ್ತ ಕುಳಿತುಕೊಳ್ಳುವಂತಹನಿರಲಿಲ್ಲ. ತನ್ನ ಅಸಾಮಾನ್ಯವಾದ ಬುದ್ಧಿಶಕ್ತಿಯಿಂದ ಇವನು ಮುಂದೆ ಬಂದನು. ತನ್ನ ತಂದೆಯಲ್ಲಿ ಸೇವಾವೃತ್ತಿಯನ್ನು ಕೈಕೊಂಡಿದ್ದ ಬಾಳಾಜಿಪಂತನು ಮಂತ್ರಿಪದವಸ್ತ್ರವಿಭೂಷಿತನಾಗಿದ್ದದ್ದು ಚಂದ್ರಸೇನನಿಗೆ ಅಸಹ್ಯವೆನಿಸತೊಡಗಿತ್ತು. ಈ ಮಂತ್ರಿ ಸೇನಾಪತಿಗಳಲ್ಲಿ ವೈಮನಸ್ಸು ಹುಟ್ಟಿತ್ತು. ಹರಿಣೆಯ ಸಂಬಂಧದ ವ್ಯಾಜ್ಯದಲ್ಲಿ ಈ ವಿಮನಸ್ಕತೆಗೆ ಮೂರ್ತಸ್ವರೂಪವು ಪ್ರಾಪ್ತವಾಯಿತು. ಈ ಪ್ರಕರಣದಲ್ಲಿ ಶಾಹೂರಾಜನು ಬಾಳಾಜಿಪಂತನ ಪಕ್ಷಗಟ್ಟಿದ್ದರಿಂದ, ಚಂದ್ರಸೇನನು ಬಹಿರಂಗದಲ್ಲಿ ಅವನನ್ನು ದ್ವೇಷಿಸತೊಡಗಿದನು. ಆಗ ಅವನು ಕೊಲ್ಹಾಪುರದ ಸಂಭಾಜಿರಾಜನ ಕಡೆಗೆ ಹೋಗಿ ಶಾಹೂಮಹಾರಾಜನ ನಾಶಕ್ಕಾಗಿ ಯತ್ನಿಸತೊಡಗಿದನು.

ಈ ಸಂಧಿಯಲ್ಲಿ ನಿಜಾಮುಉಲ್ಮುಲ್ಕನು ಮೊಗಲರಾಜ್ಯದ ಸುಭೇದಾರನಾಗಿದ್ದನು. ಇವನು ದಕ್ಷಿಣದಲ್ಲಿ ಬಹಳ ದಿವಸಗಳ ವರೆಗೆ ವಾಸವಾಗಿದ್ದರಿಂದ ಇಲ್ಲಿಯ ಸ್ಥಿತಿ-ರೀತಿಗಳೆಲ್ಲವನ್ನು ಅರಿತುಕೊಂಡಿದ್ದನು. ಚಂದ್ರಸೇನ-ಶಾಹೂಮಹಾರಾಜರಲ್ಲಿ ಪ್ರಾದುರ್ಭವಿಸಿದ್ದ ವಿಮನಸ್ಕತೆಯ ಲಾಭಪಡೆಯಬೇಕೆಂದು ಅವನು ಹವಣಿಸಿದ್ದನು. ಅವನು ಚಂದ್ರಸೇನನನ್ನು ತನ್ನ ಕಡೆಗೆ ಒಡೆದುಕೊಳ್ಳಬೇಕೆಂದು ಅನುಸಂಧಾನ ನಡೆಯಿಸಿದನು. ಈ ವೇಳೆಯಲ್ಲಿ ಚಂದ್ರಸೇನನು ಶಾಹೂಮಹಾರಾಜನ ಪಕ್ಷವನ್ನು ಬಿಟ್ಟು ಸಂಭಾಜಿರಾಜನ ಹಸ್ತಕನಾಗಿದ್ದನು. ಸಂಭಾಜಿಯು ದುರ್ಬಲನಿದ್ದುದರಿಂದ ಬಾಳಾಜಿಪಂತ-ಶಾಹೂರಾಜರ ಮೇಲಿನ ಸೇಡು ತೀರಿಸಿಕೊಳ್ಳುವ ಆಕಾಂಕ್ಷೆಯು ತೃಪ್ತಿಯಾಗಲಾರದೆಂದು ಅವನು ಸಂಭಾಜಿಯಿಂದ ಒಡೆದು ಹೋಗಿ, ನಿಜಾಮುಉಲ್ಮುಲ್ಕನನ್ನು ಕೂಡಿದನು. ಆಗ ನಿಜಾಮನು ಚಂದ್ರಸೇನನಿಗೆ ಬೇದರದ ಬಳಿಯಲ್ಲಿ ಒಂದು ದೊಡ್ಡ ಜಹಾಗೀರನ್ನು ಸೈನ್ಯದ ವೆಚ್ಚಕ್ಕಾಗಿ ಕೊಟ್ಟನು. ಚಂದ್ರಸೇನನು ನಿಜಾಮನನ್ನು ಕೂಡಿದೊಡನೆಯೇ ಎಷ್ಟೋ ಹಿಂದೂ ಸರದಾರರು ಸಹ ಶಾಹೂರಾಜನನ್ನು ಬಿಟ್ಟು ನಿಜಾಮನನ್ನು ಸೇರಿದರು!

ನಿಜಾಮನ ಹೊರತು ಶಾಹೂರಾಜನನ್ನು ದ್ವೇಷಿಸುವ ಸರದಾರರಲ್ಲಿ ಅಥಣಿಯ ಉದಾಜಿ ಚವ್ಹಾಣನು ಪ್ರಸಿದ್ಧನಾಗಿದ್ದನು. ಇವನು ಶಾಹೂರಾಜನನ್ನು ನಾಮಶೇಷಗೊಳಿಸುವದಕ್ಕಾಗಿ ಸಾಹಸ ನಡೆಯಿಸಿದ್ದನು. ಈ ಕಾರ್ಯವು ಈಡೇರುವದಕ್ಕಾಗಿ ಅವನು ಸಂಭಾಜಿರಾಜರೊಡನೆ ಸಹಕಾರ ಬೆಳೆಯಿಸಿದ್ದನು. ಸಂಭಾಜಿಯಾದರೂ ತನ್ನ ಅಷ್ಟಪ್ರಧಾನರಿಗೂ ಸರದಾರರಿಗೂ ಪತ್ರ ಬರೆದು, ತಮ್ಮ ತಮ್ಮ ಸೈನ್ಯದೊಡನೆ ಸುಸಜ್ಜಿತರಾಗಿ ಬರಬೇಕೆಂದು ತಿಳಿಸಿದ್ದನು. ರಾಜಾಜ್ಞೆಯಮೇರೆಗೆ ಎಲ್ಲ ಸರದಾರ ಸಾಮಂತರು ತಮ್ಮ ಸೈನ್ಯವನ್ನು ತೆಗೆದುಕೊಂಡು ವಾರಣಾತೀರಕ್ಕೆ ಬಂದು ತಲ್ಪಿದರು. ವೆಂಕಟರಾವ ಘೋರಪಡೆಯೂ, ಭಗವಂತರಾವ ಅಮಾತ್ಯನೂ ತಮ್ಮ ಸೈನ್ಯದೊಂದಿಗೆ ಹೊರಟು ಬಂದು ಸಂಭಾಜಿರಾಜನನ್ನು ಕೂಡಿದರು.

ಸಂಭಾಜಿರಾಜನು ತನ್ನೊಡನೆ ಸಂಗ್ರಾಮಕ್ಕೆ ಅಣಿಯಾದದ್ದನ್ನು ನೋಡಿ ಶಾಹೂರಾಜನಾದರೂ ವೈರಿಗೆ ಎದುರಾಗುವದಕ್ಕಾಗಿ ಸೇನಾಸಿದ್ಧತೆ ಮಾಡತೊಡಗಿದನು. ಸಂಭಾಜಿಯನ್ನು ಹಣಿಯುವಷ್ಟು ಸೇನಾಸಂಗ್ರಹವಾದೊಡನೆಯೆ ಅವನು ಶ್ರೀನಿವಾಸರಾವ ಪ್ರತಿನಿಧಿಯೊಡನೆ ಹೇರಳವಾದ ಸೈನ್ಯವನ್ನು ಕೊಟ್ಟು ದಂಡಯಾತ್ರೆಗಾಗಿ ಕಳುಹಿದನು. ಶ್ರೀನಿವಾಸರಾಯನು ಸಂಭಾಜಿಯ ಸೈನ್ಯದ ಮೇಲೆ ಬಿದ್ದು ವೀರಾವೇಶದಿಂದ ಕಾದಿ ಅದನ್ನು 'ತ್ರಾಹಿ ಭಗವನ್' ಎಂದೆನ್ನಲಿಕ್ಕೆ ಹಚ್ಚಿದನು. ಆಗ ಸಂಭಾಜಿರಾಜನೂ ಉದಾಜಿ ಚವ್ಹಾಣನೂ ಪಲಾಯನಸೂಕ್ತವನ್ನು ಪಠಿಸಬೇಕಾದ ಪ್ರಸಂಗವೊದಗಿತು. ಸಂಭಾಜಿಯು ತನ್ನ ಸ್ತ್ರೀಪರಿವಾರವನ್ನು ಬಳಿಯಲ್ಲಿ ತಂದಿದ್ದನು. ತಾರಾಬಾಯಿಯನ್ನು ಪನ್ಹಾಳಗಡದಲ್ಲಿ ಬಿಟ್ಟರೆ ಅವಳಿಂದ ಏನಾದರೂ ಅನರ್ಥವುಂಟಾಗಬಹುದೆಂದು ತಿಳಿದು ಅವಳನ್ನಾದರೂ ಸಂಗಡ ತೆಗೆದುಕೊಂಡು ಬಂದಿದ್ದನು. ಪ್ರತಿನಿಧಿಯು ದಾಳಿಯಲ್ಲಿ ತಾರಾಬಾಯಿ, ರಾಜಸಬಾಯಿ, ಸಂಭಾಜಿಯ ಇಬ್ಬರು ಹೆಂಡಿರು, ಶಿವಾಜಿಯ ಹೆಂಡಿರು, ಭಗವಂತರಾವ ಅಮಾತ್ಯ, ವಂಕಟರಾವ ಘೋರಪಡೆ ಮೊದಲಾದ ಜನರು ಅವನ ಕೈವಶರಾದರು. ಇವರಲ್ಲಿ ರಾಜಸಬಾಯಿಯನ್ನೂ ಅವಳ ಸೊಸೆಯನ್ನೂ ಅವರ ಇಚ್ಛೆಯ ಮೇರೆಗೆ ಪ್ರತಿನಿಧಿಯು ಪನ್ಹಾಳಗಡಕ್ಕೆ ಕಳುಹಿದನು; ಆದರೆ ತಾರಾಬಾಯಿಯೂ ಅವಳ ಸೊಸೆಯಂದಿರಾದ ಪಾರ್ವತಿಬಾಯಿ-ಭವಾನಿಬಾಯಿಯರೂ ಪನ್ಹಾಳಗಡಕ್ಕೆ ಹೋಗಲು ಅಸಮ್ಮತಿಯನ್ನು ವ್ಯಕ್ತಪಡಿಸಿದರು. ನಿರಾಶ್ರಿತರಾದ ತಮ್ಮನ್ನು ಸಾತಾರೆಯಲ್ಲಿರಿಸಬೇಕೆಂದೂ ಪನ್ಹಾಳ

ಗಡದಲ್ಲಿ ಇನ್ನು ನಾವು ಕಾರಾಗೃಹದುಃಖವನ್ನು ಭೋಗಿಸಲಾರೆವೆಂದೂ ಅವರು ಶಾಹೂರಾಜನಿಗೆ ಹೇಳಿಕೊಂಡರು.

ಶಾಹೂರಾಜನು ತಾರಾಬಾಯಿಯನ್ನೂ ಅವಳ ಸೊಸೆಯನ್ನೂ ಸಾತಾರೆಯೊಳಗಿನ ಹಳೆಯ ಅರಮನೆಯಲ್ಲಿರಿಸಿದ್ದನು. ರಾಜಮನೆತನಕ್ಕೆ ಸರಿಯಾದ ಮಾನವು ಅವರಿಗೆ ಕೊಡಲ್ಪಡುತ್ತಿತ್ತು. ಶಾಹೂರಾಜನು ಅವರ ಸೇವೆಗಾಗಿ ಅನೇಕ ದಾಸದಾಸಿಯರನ್ನು ಕೊಟ್ಟು, ಅವರ ಮೇಲಿನ ವ್ಯವಸ್ಥೆಯನ್ನು ನೋಡುವದಕ್ಕಾಗಿ ಯಾದೋ ಗೋಪಾಳನೆಂಬವನನ್ನು ನಿಯಮಿಸಿದನು. ಸಾತಾರೆಯಲ್ಲಿ ವಾಸಮಾಡುವ ಪ್ರಸಂಗವೊದಗಿದ್ದರಿಂದ, ತಾರಾಬಾಯಿಯು ಸಂಭ್ರಮಗೊಂಡಿದ್ದಳು. ಪನ್ಹಾಳಗಡದ ಕಾರಾಗೃಹದಲ್ಲಿ ದುಃಖದಿಂದ ಕಾಲಯಾಪನೆ ಮಾಡುತ್ತಿದ್ದ ಅವಳಿಗೆ ಸದ್ಯದ ಪರಿಸ್ಥಿತಿಯು ಆನಂದದಾಯಕವಾದದ್ದರಲ್ಲಿ ಆಶ್ಚರ್ಯವಿಲ್ಲ. ಯುಕ್ತಿಪ್ರಯುಕ್ತಿಗಳಿಂದ ಶಾಹೂರಾಜನನ್ನು ಒಲಿಸಿಕೊಂಡು ಸ್ವಾತಂತ್ರ್ಯಸಂಪಾದನೆ ಮಾಡಿಕೊಳ್ಳಬೇಕೆಂದು ಅವಳ ಇಚ್ಛೆಯಿತ್ತು.

ವಿರೂಬಾಯಿಯು ಶಾಹೂರಾಜನ ಉಪಪತ್ನಿಯಾಗಿದ್ದಳು. ಮನೆತನದ ಕಾರ್ಯಗಳಲ್ಲಿ ಇವಳ ಹೊರತು ಒಂದು ಎಲೆಯಾದರೂ ಅಲ್ಲಾಡುತ್ತಿರಲಿಲ್ಲ. ಪ್ರತ್ಯಕ್ಷ ಶಾಹೂರಾಜನು ಸಹ ಅವಳಿಗೆ ಪೂರ್ಣವಾಗಿ ಅಂಕಿತನಾಗಿದ್ದನು. ಈ ಪರಿಸ್ಥಿತಿಯನ್ನು ತಿಳಿದು ತಾರಾಬಾಯಿಯು ಅವಳೊಡನೆ ಸ್ನೇಹಬೆಳೆಯಿಸಿ ಅವಳ ಮನಸ್ಸನ್ನು ತನ್ನ ಕಡೆಗೆ ಎಳೆದುಕೊಳ್ಳುವ ಸಾಹಸ ನಡೆಯಿಸಿದಳು. ತಂತ್ರಗಾರಳಾದ ತಾರಾಬಾಯಿಯ ಈ ಪ್ರಯತ್ನಕ್ಕೆ ಅಲ್ಪಸ್ವಲ್ಪ ಯಶವೂ ಪ್ರಾಪ್ತವಾಯಿತು. ವಿರೂಬಾಯಿಯು ಅವಳ ಸ್ನೇಹಾಂಕಿತಳಾದಳು.

ತಾರಾಬಾಯಿಯು ರಾಜಮಂದಿರಕ್ಕೆ ದಿನಕ್ಕೊಮ್ಮೆಯಾದರೂ ವಿರೂಬಾಯಿಯು ಹೋಗುತಲಿದ್ದಳು. ಆಗ ಅವರು ತಮ್ಮ ಸುಖ-ದುಃಖದ ಮಾತುಗಳನ್ನಾಡುತ್ತ ವೇಳೆಗಳೆಯುತ್ತಿದ್ದರು. ಶಾಹೂರಾಜನು ನಿಪುತ್ರಿಕನಿದ್ದುದರಿಂದ ಮುಂದೆ ಯಾವ ವ್ಯವಸ್ಥೆ ಮಾಡುವನೆಂಬದನ್ನು ತಿಳಿದುಕೊಳ್ಳಬೇಕೆಂದು ತಾರಾಬಾಯಿಯು ಹವಣಿಸಿಕೊಂಡಿದ್ದಳು. ವಿರೂಬಾಯಿಯ ಮುಂದೆ ತಾನಾಗಿ ಈ ಮಾತು ತೆಗೆಯುವದಕ್ಕೆ ಅವಳ ಮನಸ್ಸು ಹಿಂಜರಿಯತೊಡಗಿತ್ತು. ಒಂದು ದಿವಸ ವಿರೂಬಾಯಿಯೇ ಈ ಪ್ರಸ್ತಾಪ ತೆಗೆದಳು:

"ತಾರಾಬಾಯಿಯವರೆ, ಮಹಾರಾಜರು ವಯಾತೀತರಾಗಿರುವರು. ಅವರು ಜೀವಂತರಾಗಿರುವಾಗಲೆ ದತ್ತಕವಿಧಾನವನ್ನು ಪೂರೈಸಿಬಿಟ್ಟರೆ ಒಳಿತಾಗುವದು.

ಅವರ ಆಲಸ್ಯತನದ ಮೂಲಕ ಈ ಕೆಲಸವು ಹಾಗೇ ಮುಂದೆ ಬೀಳತೊಡಗಿರುವದು. ರಾಜಮನೆತನದೊಳಗಿನ ಸಂತತಿಯನ್ನೇ ತೆಗೆದುಕೊಳ್ಳಬೇಕೆಂದು ಅವರ ಇಚ್ಛೆಯಿತ್ತು; ಆದರೆ ಮಾಡುವದೇನು? ಸಂಭಾಜಿರಾಜರು ವೈರಿಗಳಾಗಿ ನಿಂತಿರುವರು; ನಿಮ್ಮ ಮೊಮ್ಮಕ್ಕಳಿಬ್ಬರೂ ಮೃತಿಹೊಂದಿದರು. ಇನ್ನು ಅನಿವಾರ್ಯಹಕ್ಕಾಗಿ ಎರಡನೆಯ ಮನೆತನದಲ್ಲಿಯ ಹುಡುಗನೊಬ್ಬನನ್ನು ಮಗನೆಂದು ಸ್ವೀಕರಿಸುವ ಪ್ರಸಂಗವೊದಗಿರುವದು."

"ವಿರೂಬಾಯಿಯವರೆ, ರಾಜಮನೆತನದೊಳಗಿನ ಹುಡುಗನನ್ನೇ ದತ್ತಕವಿಧಿಯಿಂದ ಸ್ವೀಕರಿಸಬೇಕೆಂದು ಶಹಾಜಿರಾಜರ ಇಚ್ಛೆಯಿರುಪದೇನು?" ಎಂದು ತಾರಾಬಾಯಿಯು ಉತ್ಕಂಠಿತಳಾಗಿ ಕೇಳಿದಳು.

"ಹೌದು; ಅವರ ಇಚ್ಛೆಯು ಹೀಗೆಯೇ ಇರುವದು; ಆದರೆ ಮಾಡುವದೇನು? ಅವರ ಮನಸ್ಸಿನಂತೆ ಕಾರ್ಯವಾಗುವಂತಿಲ್ಲ. ಶಿವಾಜಿ ಮಹಾರಾಜರ ಹಿರಿಯ ಮಗನಾಗಲಿ, ಕಿರಿಯ ಮಗನಾದ ರಾಮರಾಜನಾಗಲಿ ಜೀವಂತರಿದ್ದರೆ ಒಳಿತಾಗುತ್ತಿತ್ತು. ಭಗವದಿಚ್ಛೆಯು ಅನ್ಯಪ್ರಕಾರವಾದದ್ದಿದ್ದರೆ ಯಾರು ಮಾಡುವದೇನು?"

ವಿರೂಬಾಯಿಯ ಮಾತಿನಿಂದ ತಾರಾಬಾಯಿಯು ಸಂತೋಷಗೊಂಡಳು. ಅವಳ ಮನಸ್ಸಿನಲ್ಲಿ ಭಾಗ್ಯೋದಯದ ಆಶಾಂಕುರವು ಹುಟ್ಟಿತು. ತನ್ನ ಪುತ್ರನಾದ ಶಿವಾಜಿಯ ಕಿರಿಯಮಗನು ಜೀವಂತವಿರುವನೆಂಬ ಸಂಗತಿಯನ್ನು ತಿಳಿಸಿದರೆ ತನ್ನ ಮನಸ್ಸಿನಂತೆ ಕೆಲಸವಾಗುವದೆಂದು ಅವಳು ನಂಬಿದಳು.

"ವಿರೂಬಾಯಿಯವರೆ, ನಿಮ್ಮಂತಹ ಹಿತಚಿಂತಕರೆದುರಿನಲ್ಲಿ ನಾನು ಯಾವ ಸಂಗತಿಯನ್ನೂ ಒಚ್ಚಿಡುವದಿಲ್ಲ. ರಾಜಮನೆತನದ ಕುಮಾರನನ್ನು ತಂದು ಕೊಟ್ಟರೆ ಅವನನ್ನು ದತ್ತಪುತ್ರನನ್ನಾಗಿ ಮಾಡಿಕೊಳ್ಳುವದಕ್ಕೆ ಶಾಹೂರಾಜರು ಒಪ್ಪುವರೇನು?"

"ಓಹೋ! ಈ ಮಾತಿನಲ್ಲಿ ಸಂಶಯವಿಲ್ಲ" ಎಂದು ವಿರೂಬಾಯಿಯು ನುಡಿದು, ನಿರಾಶೆಯಿಂದ:—"ತಾರಾಬಾಯಿಯವರೆ, ರಾಜಮನೆತನದಲ್ಲಿ ಹುಡುಗರಿಲ್ಲದ್ದರಿಂದ ನಿರುಪಾಯಗೊಳ್ಳಬೇಕಾಗಿದೆ ಸಂಭಾಜಿರಾಜರು ನಮಗೆ ಕಡುತರವಾದ ಹಗೆಯಾಗಿರುವದರಿಂದ ಅವರು ತಮ್ಮ ಮಕ್ಕಳಲ್ಲೊಬ್ಬನನ್ನು ಮಹಾರಾಜರಿಗೆ ಒಪ್ಪಿಸಲಾರರು."

"ವಿರೂಬಾಯಿಯವರೆ, ಶಿವಾಜಿರಾಜನ ಕಿರಿಯ ಮಗನಾದ ರಾಮರಾ

ಜನು ಜೀವಂತವಾಗಿರುವನು.''

''ಏನು? ತಾರಾಬಾಯಿಯವರೆ, ನನ್ನೆದುರಿನಲ್ಲಿ ಇದೇನು ಹೇಳುವಿರಿ?'' ಎಂದು ವಿರೂಬಾಯಿಯು ವಿಸ್ಮಯಚಕಿತಳಾಗಿ ನುಡಿದು:—''ನೀವು ಯಾವನೊಬ್ಬನನ್ನು ತಂದು ನಿಲ್ಲಿಸಿ, ಇವನೇ ರಾಮರಾಜನೆಂದು ಹೇಳಬೇಕೆಂದು ಯತ್ನಿಸಿರುವಿರೇನು?''

''ಸತ್ಯವನ್ನು ಸ್ಮರಿಸಿ ಹೇಳುವೆನು; ನನ್ನ ಮಾತು ಅಕ್ಷರಶಃ ನಿಜವಿರುವದು. ರಾಮರಾಜನು ಜೀವಂತವಾಗಿ ಉಳಿಯುವದಕ್ಕೆ ಪರಮಾತ್ಮನ ಅನುಗ್ರಹವೂ, ಸದ್ಗುರು ಮಹಾರಾಜರಾದ ಬಂಕಟಸ್ವಾಮಿಗಳ ಆಶೀರ್ವಾದವೂ, ಸಗುಣಾಬಾಯಿ-ಚಂದ್ರಿಕೆ ಮೊದಲಾದ ಸ್ವಾಮಿನಿಷ್ಠರ ಕರ್ತವ್ಯ ಪ್ರಭಾವವೂ ಕಾರಣೀಭೂತವಾಗಿರುವವು. ನನ್ನ ಮಾತಿನ ಸತ್ಯತೆಗಾಗಿ ನಾನು ಯೋಗ್ಯವಾದ ಆಧಾರಗಳನ್ನು ತೋರಿಸುವೆನು'' ಎಂದು ತಾರಾಬಾಯಿಯು ನುಡಿದು, ರಾಮರಾಜನು ಹೇಗೆ ಪಾರಾದನೆಂಬ ಸಂಗತಿಯನ್ನು ಸವಿಸ್ತಾರವಾಗಿ ನಿವೇದಿಸಿದಳು. ತಾರಾಬಾಯಿಯ ತಂತ್ರಗಳನ್ನು ಕೇಳಿ ವಿರೂಬಾಯಿಯು ಸೋಜಿಗಗೊಂಡಳು. ಆಗ ಅವಳು ತಾರಾಬಾಯಿಯನ್ನು ಕುರಿತು:—

''ಮಹಾರಾಜರು ಈಗ ಯುದ್ಧದ ಗೊಂದಲದಲ್ಲಿ ತೊಡಗಿರುವರು. ಕೊಲ್ಹಾಪುರದ ಸಂಭಾಜಿರಾಜರು ಇನ್ನೂ ತಟಸ್ಥವಾಗಿ ಕುಳಿತಿಲ್ಲ. ಧನಾಜಿ ಜಾಧವನ ಮಗನಾದ ಚಂದ್ರಸೇನನು ನಿಜಾಮನನ್ನು ಕೂಡಿಕೊಂಡು, ಸ್ವರಾಜ್ಯದಲ್ಲಿ ಪುಂಡಗಾರಿಕೆಯನ್ನು ಪ್ರಾರಂಭಿಸಿರುವದಾಗಿ ತಿಳಿಯುತ್ತದೆ. ಇಂತಹ ವೇಳೆಯಲ್ಲಿ ದತ್ತಕಸಂಬಂಧದ ಮಾತು-ಕಥೆಗಳನ್ನಾಡಲಿಕ್ಕೆ ಅವಕಾಶವಿಲ್ಲ. ದೇಶದಲ್ಲಿ ಶಾಂತತೆಯುಂಟಾಗಲಿ. ನಿಮ್ಮ ಕುಮಾರ ರಾಮರಾಜನನ್ನು ಪುತ್ರನೆಂದು ಗ್ರಹಿಸಬೇಕಾಗಿ ನಾನು ಅವರಿಗೆ ವಿಜ್ಞಾಪನೆ ಮಾಡಿಕೊಳ್ಳುವೆನು'' ಹೀಗೆಂದು ನುಡಿದು, ವಿರೂಬಾಯಿಯು ನಿಶ್ಚಿತವಾಣಿಯಿಂದ:—''ತಾರಾಬಾಯಿಯವರೆ, ನಿಮ್ಮ ಮೊಮ್ಮಗನಾದ ರಾಮರಾಜನು ಸ್ವರಾಜ್ಯದ ಭಾವೀಛತ್ರಪತಿಯಾಗುವನೆಂದು ನಾನು ನಿಮಗೆ ಆಶ್ವಾಸನೆ ಕೊಡುವೆನು; ಆದರೆ ನೀವು ಹೇಳಿದ ಮೇರೆಗೆ ಅವನು ಜೀವಂತವಿರುವಬಗ್ಗೆ ಯೋಗ್ಯಆಧಾರಗಳನ್ನು ತೋರಿಸಿರೆಂದರಾಯಿತ್ತು.''

''ನಿಮಗೆ ಅದರ ಚಿಂತೆಯೇ ಬೇಡ. ನಾನು ಎಲ್ಲ ಬಗೆಯ ಪ್ರಮಾಣಗಳನ್ನು ಸಿದ್ಧಮಾಡಿಕೊಂಡಿಟ್ಟಿರುವೆನು.''

ದೈವದುರ್ವಿಲಾಸದಿಂದ ಹತಾಶವಾದ ತಾರಾಬಾಯಿಯ ಹೃದಯದ ಮರು

ಭೂಮಿಯಲ್ಲಿ ವಿರೂಬಾಯಿಯು ಅಮೃತವೃಷ್ಟಿಗರೆದದ್ದರಿಂದ, ಅದರಲ್ಲಿ ಭಾಗ್ಯೋದಯದ ಆಶಾಂಕುರವು ಅಂಕುರಿಸಿತು!

---

## ನೀವು ನಿಜವಾಗಿಯೆ ರಾಮರಾಜರು!

ಬಾವಡೆ ಗ್ರಾಮದ ಮಾರುತಿಯ ದೇವಾಲಯದಲ್ಲಿ ಒಬ್ಬ ಸಾಧುವು ಇರುತ್ತಿದ್ದನು. ಇವನು ಬದರಿ-ಕೇದಾರ ಮೊದಲಾದ ಯಾತ್ರೆಗಳನ್ನು ಮುಗಿಸಿಕೊಂಡು ರಾಮೇಶ್ವರಕ್ಕೆ ಹೊರಟಿರಲು, ವರ್ಷಾಕಾಲವು ಪ್ರಾಪ್ತವಾದದ್ದರಿಂದ ಚಾತುರ್ಮಾಸ್ಯವನ್ನು ಬಾವಡೆಯಲ್ಲಿಯೇ ಕಳೆಯಬೇಕೆಂದು ಅಲ್ಲಿ ವಾಸವಾಗಿದ್ದನು. ಈ ಸಾಧುವು ಭಗವೀವಸ್ತ್ರಪರಿಧಾನ ಮಾಡಿದ್ದು, ಕೊರಳಲ್ಲಿಯೂ ಕೈಯಲ್ಲಿಯೂ ರುದ್ರಾಕ್ಷಿ ಮಾಲೆಗಳನ್ನು ಧರಿಸಿದ್ದನು. ಸುಂದರವಾದ ಜಟಾಜೂಟಗಳುಳ್ಳವನೂ ಭಸ್ಮಲೇಪಿತ ಅವಯವದವನೂ ಆದ ಇವನು ಭಾವಿಕ ಜನರ ಮನಸ್ಸನ್ನು ಆಕರ್ಷಿಸುತ್ತಿದ್ದನು. ಇವನು ಜನರೊಡನೆ ಮಾತನಾಡುತ್ತಿರಲಿಲ್ಲ; ಯಾವಾಗಲೂ ಭಗವನ್ನಾಮಸಂಕೀರ್ತನೆ ಗೈಯುತ್ತ ಮೌನದಿಂದಿರುತ್ತಿದ್ದನು. ಸಾಧುಮಹಾರಾಜನ ಅಲೌಕಿಕವಾದ ತೇಜವನ್ನೂ, ತಪಸ್ಸಾಮರ್ಥ್ಯವನ್ನೂ, ವೈರಾಗ್ಯ ವೃತ್ತಿಯನ್ನೂ ನೋಡಿ, ಎಲ್ಲ ಜನರು ಅವನಲ್ಲಿ ಅತ್ಯಂತ ನಿಷ್ಠೆಯುಳ್ಳವರಾಗಿದ್ದರು. ಅವರು ಸಾಧುವಿಗೆ ಫಲಗಳನ್ನು ತಂದು ಕೊಡುತ್ತಿದ್ದರು. ಸಾಧುವು ಅವುಗಳನ್ನು ತೆಗೆದುಕೊಂಡು ಎಲ್ಲ ಜನರಿಗೆ ಹಂಚಿಬಿಡುತ್ತಿದ್ದನು. ಈ ಸಾಧುವು ಜನರು ಕೊಟ್ಟ ಆಹಾರಾದಿಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ; ಹಾಗು ತಾನಾದರೂ ಊರಲ್ಲಿ ಭಿಕ್ಷಾಟನೆ ಮಾಡುತ್ತಿರಲಿಲ್ಲ. ಇದನ್ನು ನೋಡಿ ಜನರು ಸೋಜಿಗಗೊಂಡಿದ್ದರು. ಸಾಧುವು ನಿತ್ಯೋಪವಾಸಿಯಿರುವನೆಂದು ಅವರು ತಮ್ಮ ತಮ್ಮೊಳಗೆ ಮಾತನಾಡಿಕೊಳ್ಳುತ್ತಿದ್ದರು. ಇವನು ಚಂದ್ರಶೇಖರನ ಅವತಾರವೆಂದು ಜನರು ತಿಳಿದುಕೊಂಡಿದ್ದರು. ಅವನು ಎರಡೆರಡು ದಿನಗಳ ವರೆಗೆ ಮೌನವ್ರತದಿಂದಲೇ ಇರುತ್ತಿದ್ದನು; ಒಮ್ಮೊಮ್ಮೆ ಅವಶ್ಯವಿದ್ದಾಗ ಏಕನಿಷ್ಠಭಕ್ತರೊಡನೆ ಒಂದೆರಡು ಮಾತುಗಳನ್ನಾಡುತ್ತಿದ್ದನು. ವಾಯುಭಕ್ಷಣೆ ಮಾಡುತ್ತ ತಪಶ್ಚರ್ಯೆ ಮಾಡುವ ಸಾಧುವಿನೊಡನೆ ಮಾತು-ಕಥೆಗಳನ್ನಾಡುತ್ತ ಅವನ ತಪಸ್ಸಿಗೆ ಆತಂಕವನ್ನುಂಟು ಮಾಡಬಾರದೆಂದು ಜನರಾದರೂ ಹೆಚ್ಚುವೇಳೆಯ ವರೆಗೆ ಅಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ. ಆ ಸಾಧುವಿನ ಏಕನಿಷ್ಠ

ಭಕ್ತರಲ್ಲಿ ಸಗುಣಾ ಗವಳಗಿತ್ತಿಯೂ, ಶಿವರಾಮಪಂತನೂ ಅಗ್ರೇಸರರಾಗಿದ್ದರು; ಕೂಡಿದಾಗೊಮ್ಮೆ ಜನಾಬಾಯಿಯೂ ಅಲ್ಲಿಗೆ ಬರುತ್ತಿದ್ದಳು. ಬಂಕಟಸ್ವಾಮಿಗಳು ಮೂರು-ನಾಲ್ಕು ಬಾರಿ ಈ ಸಾಧುವಿನ ದರ್ಶನಕ್ಕೆ ಬಂದಿದ್ದರು. ಇದರಿಂದಂತೂ ಆ ಸಾಧುವು ಜನರ ಮನಸ್ಸನ್ನು ಚನ್ನಾಗಿ ಆಕರ್ಷಿಸಿದ್ದನು. ನಾಮಾಂಕಿತ ತಪಸ್ಸಿದ್ಧಿಯುವರಾದ ಬಂಕಟಸ್ವಾಮಿಗಳಂಥವರು ಅವನ ದರ್ಶನಕ್ಕಾಗಿ ಬರುತ್ತಿರುವದನ್ನೂ, ಅವನು ಅವರ ಪ್ರೇಮಾದರಕ್ಕೆ ಪಾತ್ರನಾಗಿರುವದನ್ನೂ ನೋಡಿ, ಈ ಸಾಧುವು ಸಾಮಾನ್ಯಕೋಟಿಯೊಳಗಿನವನಲ್ಲವೆಂದು ಜನರು ಅನ್ನತೊಡಗಿದರು. ಮಹಾಶಯ, ಇವನು ಯಾರಿರಬಹುದೆಂಬದನ್ನು ತಾವು ಅರಿತಿರಬಹುದಲ್ಲವೆ? ಪೂರ್ವಸಂಕೇತದಂತೆ ಚಂದ್ರಿಕೆಯು ರಾಮರಾಜನ ರಕ್ಷಣೆಗಾಗಿ ಸಾಧುವೇಷದಿಂದ ಬಾವಡೆಯ ಮಾರುತಿಯ ದೇವಾಲಯದಲ್ಲಿರ ತೊಡಗಿದ್ದಳು; ಅವಳೇ ಈ ಸಾಧುವು!

ಚಂದ್ರಿಕೆಯು ಸಾಧುವೇಷವನ್ನು ತಾಳಿ ಬಾವಡೆಯಲ್ಲಿ ವಾಸವಾದಾಗಿನಿಂದ ತಾರಾಬಾಯಿಯ ವರ್ತಮಾನವೇನೂ ತಿಳಿದಿದ್ದಿಲ್ಲ. ಆದ್ದರಿಂದ ಅವಳ ಲಕ್ಷ್ಯವು ಒಂದೇಸವನೆ ಸಾತಾರೆಯ ಕಡೆಗೆ ವೇಧಿಸಿತ್ತು. ಅಲ್ಲಿಯ ವರ್ತಮಾನವನ್ನು ತಿಳಿದುಕೊಳ್ಳಲಿಕ್ಕೆ ಅವಳಿಗೆ ಸಾಧ್ಯವಿರಲಿಲ್ಲ. ಆದ್ದರಿಂದ ಅವಳು ಬಂಕಟಸ್ವಾಮಿಗಳಿಗೆ ಭೆಟ್ಟಿಯಾಗಿ ಎಲ್ಲ ಸಂಗತಿಯನ್ನು ತಿಳಿದುಕೊಳ್ಳಬೇಕೆಂದು ನಿಶ್ಚಯಿಸಿಕೊಂಡಳು. ಸಾಧುವೇಷಧಾರಿಯಾದ ಅವಳು ಬಂಕಟಸ್ವಾಮಿಗಳನ್ನು ಕಾಣುವದಕ್ಕಾಗಿ ಹೋಗುವೆನೆಂದು ತನ್ನ ಶಿಷ್ಯರಿಗೆ ತಿಳಿಸಿದಳು.

ಸೂರ್ಯಾಸ್ತವಾಗಿ ಒಂದೆರಡು ಗಳಿಗೆಯಾಗಿತ್ತು. ಬಾವಡೆ ಗ್ರಾಮವು ಜ್ಯೋತಿಃಪ್ರಕಾಶದಿಂದ ಬೆಳಗತೊಡಗಿತ್ತು. ಆಗಸದಲ್ಲಿ ತಾರೆಗಳು ಮಿನುಗತೊಡಗಿದ್ದವು. ಕೃಷ್ಣಪಕ್ಷವಿದ್ದುದರಿಂದ ಅವುಗಳ ಕಾಂತಿಯು ಮತ್ತಿಷ್ಟು ಹೆಚ್ಚಾಗಿತ್ತು. ಇಂತಹ ವೇಳೆಯಲ್ಲಿ ಬಾವಡೆಯ ಸಾಧುವು ಬಂಕಟಸ್ವಾಮಿಗಳನ್ನು ಕಾಣುವದಕ್ಕಾಗಿ ಮಾರುತಿಯ ದೇವಾಲಯದಿಂದ ಹೊರಬಿದ್ದನು. ರಾತ್ರಿಯ ವೇಳೆಯಾದ್ದರಿಂದಲೂ, ಬಂಕಟಸ್ವಾಮಿಗಳ ಮಠಕ್ಕೆ ಹೋಗುವ ಮಾರ್ಗವು ಕಠಿಣವಾದದ್ದಿದ್ದುದರಿಂದಲೂ ಮಾರನೆಯ ದಿನ ಪ್ರಯಾಣ ಮಾಡಬೇಕೆಂದು ಶಿಷ್ಯವೃಂದವು ಸಾಧುವಿಗೆ ವಿನಂತಿಮಾಡಿಕೊಂಡಿತು; ಆದರೆ ಅವನು ಜನರ ಮಾತಿನ ಕಡೆಗೆ ಲಕ್ಷ್ಯಗೊಡದೆ ಹೊರಟನು. ಅವನು ಸಂಗಡ ಯಾರನ್ನೂ ತೆಗೆದುಕೊಳ್ಳಲಿಲ್ಲ. ಭಯಪ್ರದವಾದ ಸಮಯದಲ್ಲಿ ಅರಣ್ಯಮಾರ್ಗ

ದಿಂದ ಅವನು ಒಬ್ಬನೇ ಹೊರಟದ್ದನ್ನು ನೋಡಿ ಜನರು ಬೆರಗಾದರು. ಅವನು ಸರ್ವಶಕ್ತಿಮಾನ್ ಪರಮೇಶ್ವರನ ಅವತಾರವೆಂದು ಅವರು ಭಾವಿಸಿದರು.

ಸಾಧುವು ಎರಡು-ಮೂರು ಗಳಿಗೆ ಮಾರ್ಗಕ್ರಮಣ ಮಾಡಿದ ಮೇಲೆ ದಾರಿಯಲ್ಲಿದ್ದ ಒಂದು ದೊಡ್ಡ ಆಮ್ರವೃಕ್ಷದ ಕೆಳಗೆ ಕುಳಿತುಕೊಂಡನು. ಆಗ ಅವನು ಸ್ವಲ್ಪ ನೆಲವನ್ನು ಕೆದರಿ ಅಲ್ಲಿದ್ದ ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡನು. ಬಾವಡೆಗೆ ಬರುವಾಗ ಅವನು ತನ್ನ ಶಸ್ತ್ರಗಳನ್ನು ಅಲ್ಲಿ ಹುಗಿದಿಟ್ಟಿದ್ದನು; ರಾತ್ರಿಯ ವೇಳೆಯಲ್ಲಿ ಆತ್ಮರಕ್ಷಣೆಗಾಗಿ ಅವಶ್ಯವೆನಿಸಿದ್ದರಿಂದ ಅವುಗಳನ್ನು ತೆಗೆದುಕೊಂಡನು. ಅವನು ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಮತ್ತೆ ಕೆಲವು ಹೊತ್ತು ದಾರೀ ನಡೆದನು. ಅಷ್ಟರಲ್ಲಿ ಮಳೆಯು ಪ್ರಾರಂಭವಾದ್ದರಿಂದ ಅವನು ಅದೇ ಅರಣ್ಯದಲ್ಲಿದ್ದ ಒಂದು ಮುರುಕ ದೇಗುಲದಲ್ಲಿ ಹೊಕ್ಕನು.

ಸಾಧುವು ದೇವಾಲಯದಲ್ಲಿ ಬಂದ ಸ್ವಲ್ಪ ವೇಳೆಯಲ್ಲಿ ಒಂದು ಮೇಣೆಯು ಅಲ್ಲಿಗೆ ಬಂದಿತು. ಆಗ ಆ ಮೇಣೆಯನ್ನು ಹೊತ್ತ ಬೋಯಿಗಳಲ್ಲೊಬ್ಬನು - "ಮಳೆಯು ಕಡಿಮೆಯಾಗುವವರೆಗೆ ಇಲ್ಲಿ ವಿಶ್ರಾಂತಿ ಪಡೆಯೋಣ" ಎಂದು ನುಡಿದನು. ಬೋಯಿಗಳು ಮೇಣೆಯನ್ನು ದೇವಾಲಯದ ಒಂದು ಭಾಗದಲ್ಲಿ ಇಳಿಸಿದರು. ಅನಂತರದಲ್ಲಿ ಮತ್ತೊಬ್ಬನು—"ಬೆಳಗಾಗುವದರೊಳಗೆ ಪನ್ಹಾಳಗಡವನ್ನು ಮುಟ್ಟಿದ್ದರೆ ನೆಟ್ಟಗಾಗುತ್ತಿತ್ತು. ಮಳೆಯು ನಿಲ್ಲುವವರೆಗೆ ಮಾರ್ಗಕ್ರಮಣ ಮಾಡಲು ಶಕ್ಯವಿಲ್ಲ. ರಾಣಿಯವರು ಒಂದೇಸವನೆ ನಮ್ಮ ಮಾರ್ಗಪ್ರತೀಕ್ಷೆ ಮಾಡುತ್ತಿರುವರಾಗಿದ್ದೀತು" ಎಂದು ನುಡಿಯುತ್ತ, ದೇವಾಲಯದ ಕಟ್ಟೆಯ ಮೇಲೆ ಹತ್ತಿದನು. ಅಷ್ಟರಲ್ಲಿ ಅವನ ಕಾಲಿಗೆ ಹಾವು ಕಡಿಯಿತು! ಕೂಡಲೆ ಅವನು ಚಿಟ್ಟನೆ ಚೀರಿದನು. ಆಗ ಅವರೊಳಗಿನ ಇಬ್ಬರು ಔಷಧ ತರಬೇಕೆಂದು ಬಳಿಯಲ್ಲಿದ್ದ ಗ್ರಾಮಕ್ಕೆ ಹೋದರು. ಅನಂತರದಲ್ಲಿ ಹಾವು ಕಡಿಸಿಕೊಂಡ ಮನುಷ್ಯನು ನರಳುತ್ತ—"ಪೀರ್ಯಾ, ಪರಮಾತ್ಮನು ಕರ್ಮಕ್ಕೆ ತಕ್ಕ ಫಲವನ್ನು ಕೊಟ್ಟನು. ರಾಜಸಬಾಯಿಯವರು ರಾಮರಾಜರ ಕೊಲೆಮಾಡಬೇಕೆಂದು ಯೋಚಿಸಿ, ನಮ್ಮನ್ನು ಈ ಕಾರ್ಯಕ್ಕಾಗಿ ಯೋಜಿಸಿದರು. ಗೇಣು ಹೊಟ್ಟೆಯ ಸಲುವಾಗಿ ನಾವು ಇಂತಹ ಕಾರ್ಯ ಮಾಡುವದಕ್ಕೆ ಸಿದ್ಧರಾದದ್ದು ಅನುಚಿತವಲ್ಲವೆ? ಸೇವಾವೃತ್ತಿಯನ್ನು ಕೈಕೊಂಡ ಮಾತ್ರದಿಂದ ಬೇಕಾದಂಥ ನೀಚ ಕಾರ್ಯಪ್ರವೃತ್ತರಾಗುವದು ಅಧರ್ಮವಲ್ಲವೆ? ನಿಷ್ಕಾರಣವಾಗಿ ಎರಡನೆಯವರನ್ನು ಘಾತಗೊಳಿಸಲಿಕ್ಕೆ ಮನಸ್ಸು ಮಾಡಿದರೆ ಹೇಗೆ

ಹೊಡತ ಬೀಳುವದೇ ನಿಶ್ಚಯವು.''

''ಸಟವ್ಯಾ, ನಿನ್ನ ಮಾತು ನಿಜವು. ನಾನು ರಾಜಕುಮಾರನನ್ನು ಬಂಧ ಮುಕ್ತಗೊಳಿಸಲೇನು?''

''ಹೀರ್ಯಾ, ನೀನು ಅವನ ಕೈಕಾಲು ಬಿಚ್ಚಿದೆಯೆಂದರೆ, ಅವನು ನಿನ್ನ ಜೀವಕ್ಕೆ ಮೃತ್ಯುವಾಗುವನು. ನಾನಂತೂ ಹೊರಟೆನು; ಊರಲ್ಲಿ ಹೋದವರು ಬಂದ ಮೇಲೆ ರಾಜಕುಮಾರನ ವ್ಯವಸ್ಥೆಯನ್ನು ನಿಮ್ಮ ಮನಸ್ಸಿಗೆ ಬಂದಂತೆ ಮಾಡಿರಿ. ಅಯ್ಯೋ! ನಾಲಿಗೆಯು ಸೆಳೆಯುತ್ತದೆ ನೀರು! ನೀರು!''

ಸಟವ್ಯಾನು ಹೀಗೆ ನುಡಿಯುತ್ತಿರಲು, ಅವನ ಜೀವವು ಜಡಶರೀರವನ್ನು ತ್ಯಜಿಸಿ ಹೊರಟುಹೋಯಿತು! ಅವನ ಸಂಗಡಿಗನಾದ ಹೀರ್ಯಾನು ಅವನ ಬಳಿಯಲ್ಲಿಯೇ ಕುಳಿತುಕೊಂಡಿದ್ದನು. ತನ್ನ ಸಂಗಡಿಗನ ದುರ್ಮರಣದಿಂದ ಅವನು ಬಹಳವಾಗಿ ನೊಂದುಕೊಂಡಿದ್ದನು. ಸಾಧುವು ಈ ಎಲ್ಲ ದೃಶ್ಯವನ್ನು ನೋಡುತ್ತ ಒಂದು ಮೂಲೆಯಲ್ಲಿ ಅವಿತುಕೊಂಡು ಕುಳಿತಿದ್ದನು. ಮೋಣೆಯಲ್ಲಿ ತಾರಾಬಾಯಿಯ ಮೊಮ್ಮಗನಾದ ರಾಮರಾಜನನ್ನು ತಂದಿರುವರೆಂಬದು ಅವನಿಗೆ ತಿಳಿಯಿತು. ರಾಜಸಬಾಯಿಯ ಈ ದೀರ್ಘಸಾಹಸವನ್ನು ನೋಡಿ ಸಾಧುವು ಪರಮಾಶ್ಚರ್ಯಗೊಂಡನು. ಊರೊಳಗೆ ಔಷಧವನ್ನು ತರಲಿಕ್ಕೆ ಹೋದ ಜೋಡಿಗಳು ಬರುವದರೊಳಗೆ ಬಾಲರಾಜನ ಬಂಧವಿಮೋಚನೆ ಮಾಡಬೇಕೆಂದು ಅವನು ನಿರ್ಧರಿಸಿ, ಹೀರ್ಯಾನ ಮೇಲೆ ಬಾಣಸಂಧಾನ ಮಾಡಿದನು. ಆ ಬಾಣವು ಎದೆಯಲ್ಲಿ ನಟ್ಟಿದ್ದರಿಂದ ಅವನು ಭೂಮಿಗೆ ಬಿದ್ದು ಗತಾಸುವಾದನು! ಹೀರ್ಯಾನ ಅವಸ್ಥೆಯು ಏನಾಯಿತೆಂಬದರ ಕಡೆಗೆ ಲಕ್ಷ್ಯಗೊಡದೆ, ಸಾಧುವು ಆ ಮೋಣೆಯ ಒಳಗೆ ಹೋದನು. ಅವನು ಮೋಣೆಯ ಬಾಗಿಲವನ್ನು ತೆರೆದು, ಬಾಲರಾಜನ ಬಾಯಿಯಲ್ಲಿಟ್ಟಿದ್ದ ಅರಿವೆಯ ಚಂಡನ್ನು ತೆಗೆದನು. ಅನಂತರದಲ್ಲಿ ಅವನ ಕೈಕಾಲುಗಳ ಕಟ್ಟುಗಳನ್ನು ಬಿಚ್ಚಿ, ಅವನ ಬಾಯೊಳಗೆ ತನ್ನ ಕಮಂಡಲುವಿನಲ್ಲಿದ್ದ ನೀರು ಹಾಕಿದನು. ಸ್ವಲ್ಪ ವೇಳೆಯ ಮೇಲೆ ಬಾಲರಾಜನು ಎಚ್ಚತ್ತು ಎದ್ದು ಕುಳಿತನು. ಮಿಂಚಿನ ಪ್ರಕಾಶದಲ್ಲಿ ಸಾಧುವು ಅವನ ಗುರತು ಹಿಡಿದನು. ಅವನು ತನ್ನನ್ನು ಮುಕ್ತಗೊಳಿಸಿದ ಸಾಧುವನ್ನು ಕೃತಜ್ಞತೆಯಿಂದಲೂ ಭಕ್ತಿಯಿಂದಲೂ ನೋಡತೊಡಗಿದನು. ಆಗ ಅವನು ನಮ್ರಭಾವದಿಂದ:

''ಸಾಧುಗಳೇ, ನೀವು ಇಲ್ಲಿಗೆ ಬಾರದಿದ್ದರೆ ನನ್ನ ಅವಸ್ಥೆಯು ಬಳಿತಾಗುತ್ತಿದ್ದಿಲ್ಲ. ಈ ನೀಚರು ನನ್ನನ್ನು ಪನ್ಹಾಳಗಡಕ್ಕೆ ಒಯ್ಯುತ್ತಿದ್ದರಂತೆ.

ಒಬ್ಬ ಸಾಮಾನ್ಯ ತರಹದ ದಾಸಿಯ ಮಗನಾದ ನನ್ನನ್ನು ಇಷ್ಟು ಸಾಹಸದಿಂದ ಕರೆಯಿಸುವದರಲ್ಲಿ ರಾಜಸಬಾಯಿಯ ಇಂಗಿತವೇನಿರುವದೋ ಏನೋ!''

“ಬೇಟಾ, ಯಾವದೊಂದು ದುಷ್ಟ ಮನೀಷೆಯಿಂದಲೇ ಅವಳು ಇಂತಹ ನೀಚ ಕೃತಿಗೆ ಪ್ರವೃತ್ತಳಾಗಿರುವಳು. ರಾಜಸಬಾಯಿಯೇ ನಿನ್ನನ್ನು ಕರೆಸಿರುವಳೆಂಬದು ನಿನಗೆ ಹೇಗೆ ಗೊತ್ತಾಯಿತು?''

“ಬೋವಿಗಳು ಇದೇ ವಿಷಯವಾಗಿ ಮಾತನಾಡತೊಡಗಿದಾಗ ನಾನು ಸಾವಧಗೊಂಡಿದ್ದೆನು. ಅವಳು ನನ್ನ ಕೊಲೆಮಾಡಲಿಕ್ಕೆ ಹವಣಿಸಿರುವಳೆಂಬದು ನನಗೆ ಅವರ ಮಾತಿನಿಂದ ಗೊತ್ತಾಯಿತು. ನನ್ನನ್ನು ಅವರು ರಾಮರಾಜನೆಂದು ಸಂಬೋಧಿಸುತ್ತಿದ್ದರು. ನನಗೆ ಅವರ ಮಾತಿನ ಮರ್ಮವು ಚನ್ನಾಗಿ ತಿಳಿಯಲಿಲ್ಲ. ಬಾಯಿಯಲ್ಲಿ ಅರಿವೆಯನ್ನಿಟ್ಟಿದ್ದರಿಂದ ನನಗೆ ಬಹಳೇ ತೃಷೆಯಾಗತೊಡಗಿತು. ನೀರಿನ ದಾಹದಿಂದ ನಾನು ಚೈತನ್ಯರಹಿತನಾದೆನು. ಮುಂದಿನ ಸಂಗತಿಗಳೇನು ಘಟಿಸಿದವೆಂಬದನ್ನು ನಾನರಿಯೆನು. ಸಾಧುಮಹಾರಾಜರೇ, ರಾಜಸಬಾಯಿಯ ಈ ನೀಚ ಕಾರಸ್ಥಾನದ ಇಂಗಿತವೇನಿರಬಹುದು?'' ಎಂದು ನುಡಿಯುತ್ತಿರಲು, ಒಂದು ಮಿಂಚು ಹೊಡೆಯಿತು. ಆ ಪ್ರಕಾಶದಿಂದ ಅವನಿಗೆ ಸಾಧುವಿನ ಮುಖವು ಸ್ಪಷ್ಟವಾಗಿ ಕಂಡಿತು. ಆಗ ಅವನು ಆ ಸಾಧುವಿನ ಗುರತು ಹಿಡಿದು, ನಮಸ್ಕರಿಸಿ: —

“ಸ್ವಾಮಿ! ತಾವು ಬಾವಡೆಯ ಸಾಧುಮಹಾರಾಜರಲ್ಲವೆ?''

“ಹೌದು.'

'ಸಾಧುವರ್ಯರೇ, ಸದಾ ಸರ್ವದಾ ಪರೋಪಕಾರಕ್ಕಾಗಿ ನಿಂತಿರುವವರಾದ ನೀವು ನಿಶ್ಚಯವಾಗಿ ಅವತಾರಿಕ ಪುರುಷರು!'' ಎಂದು ನುಡಿದು, ಸಂತಾಜಿಯು: “ಮಹಾತ್ಮರೆ, ಆ ಬೋವಿಗಳು ನನ್ನನ್ನು ರಾಮರಾಜನೆಂದು ಸಂಬೋಧಿಸಿದ್ದನ್ನು ನೋಡಿ, ನನ್ನ ಮನಸ್ಸು ಗೊಂದಲದಲ್ಲಿ ತೊಳಕಿದೆ. ಮಹಾಶಯರೆ, ನಿಜಸ್ಥಿತಿಯನ್ನು ಅರುಹಿ, ನನ್ನ ಮನಸ್ಸಿನ ಸಂಶಯವನ್ನು ದೂರ ಮಾಡಬೇಕು.''

“ಬೋವಿಗಳ ಮಾತು ನಿಜವಿರುವದು; ನೀವು ನಿಜವಾಗಿಯೇ ರಾಮರಾಜರು!''

ಸಾಧುವು ಹೀಗೆ ನುಡಿದ ಕೂಡಲೆ ಸಂತಾಜಿಯು ಬೆರಳು ಕಚ್ಚಿದನು.

*

# ದೈವದ ಅಗಾಧಲೀಲೆ!

ಆಕಾಶವು ನಿರಭ್ರವಾಗಿತ್ತು. ಚಂದ್ರೋದಯವಾದದ್ದರಿಂದ ಪೂರ್ವಕ್ಷಿತಿಜವು ಶ್ವೇತವರ್ಣದಿಂದ ಶೋಭಾಯಮಾನವಾಗಿ ಕಾಣುತ್ತಿತ್ತು. ಚಂದ್ರಿಕೆಯ ಪ್ರಕಾಶದಿಂದ ಅರಣ್ಯಮಾರ್ಗವು ನಿಚ್ಚಳವಾಗಿ ಕಾಣತೊಡಗಿದ್ದರಿಂದ ಸಾಧುವೂ ಸಂತಾಜಿಯೂ ದೇವಾಲಯದಿಂದ ಹೊರಟರು. ಊರಲ್ಲಿ ಹೋದ ಬೋವಿಗಳು ಬರುವದರೊಳಗೆ ಅಲ್ಲಿಂದ ದಾಟಬೇಕಾದುದರಿಂದ ಅವರು ವೇಗದಿಂದ ಸಾಗಿದ್ದರು. ಅವರೀರ್ವರೂ ಮೌನದಿಂದ ಸಾಗಿದ್ದರು. ಆಗ ಸಂತಾಜಿಯ ಮನಸ್ಸು ಬಹಳವಾಗಿ ಚಂಚಲವಾಗಿತ್ತು. ಸಾಧುವಿನ ಮಾತಿನಿಂದ ಅವನು ಗೊಂದಲದಲ್ಲಿ ಬಿದ್ದಿದ್ದನು. 'ನೀನೇ ಆ ರಾಮರಾಜನೆಂದು ಸಾಧುವು ನನ್ನನ್ನು ಮೋಸಗೊಳಿಸುವದಕ್ಕಾಗಿ ಹೇಳಿರಬಹುದೇನು? ನಾನು ರಾಮರಾಜನೇ ಆಗಿದ್ದರೆ, ಜನಾಬಾಯಿಯ ಮನೆಯಲ್ಲಿ ಹೇಗೆ ಬಂದೆನು? ಒಬ್ಬ ದಾಸಿಯ ಪುತ್ರನಾಗಿ ಬಾವಡೆಯಲ್ಲಿ ವಾಸವಾಗುವ ಪ್ರಸಂಗವು ರಾಜಪುತ್ರನಾದ ನನಗೆ ಹೇಗೆ ಒದಗಿತು? ನಾನು ರಾಜಕುಮಾರನಿದ್ದದ್ದು ನಿಜವಿದ್ದರೆ, ಇಷ್ಟು ದಿನಗಳವರೆಗೆ ನನ್ನ ನಿಜಸ್ಥಿತಿಯು ಈ ಬಗೆಯಾಗಿ ಅಜ್ಞಾತಸ್ಥಿತಿಯಲ್ಲಿ ಉಳಿಯುತ್ತಿತ್ತೆ? ಜನಾಬಾಯಿಯು ನನ್ನ ಹಡೆದ ತಾಯಿಯಾಗಿರದಿದ್ದರೆ, ಅವಳಲ್ಲಿ ಅನುಪಮವಾದ ಪುತ್ರವಾತ್ಸಲ್ಯವು ತಲೆದೋರುತ್ತಿತ್ತೆ? ಛೆ! ಸಾಧುವಿನ ವಾಣಿಯಲ್ಲಿ ತಥ್ಯಾಂಶವೇನೂ ಇಲ್ಲ. ಇವನ ಬುದ್ಧಿ ಭ್ರಮಣವಾದಂತೆ ತೋರುವದು. ಅಂತೆಯೇ ಇವನ ಮುಖದಿಂದ ಅನೃತಭಾಷಣವು ಹೊರಟಿರುವದು' ಎಂದು ಅವನು ಗಳಿಗೆ-ಎರಡು ಗಳಿಗೆಯವರೆಗೆ ವಿಚಾರದಲ್ಲಿ ಮುಳುಗಿದ್ದನು. ತಾನು ರಾಜಕುಮಾರನಲ್ಲವೆಂಬ ಬಗ್ಗೆ ಅವನು ಸಾಕಷ್ಟು ಪ್ರಮಾಣಗಳನ್ನು ಶೋಧಿಸತೊಡಗಿದ್ದನು. ಹೀಗೆ ಅವನು ಕೆಲವು ವೇಳೆಯವರೆಗೆ ವಿಚಾರತಂದ್ರಿಯಲ್ಲಿ ಮುಳುಗಿರಲು, ಅವನ ಮನಸ್ಸಿನಲ್ಲಿ ಮತ್ತೊಂದು ವಿಚಾರವು ಉದಯಿಸಿತು. 'ನಾನು ನಿಜವಾಗಿ ಜನಾಬಾಯಿಯ ಮಗನಾಗಿದ್ದರೆ, ರಾಜಸಬಾಯಿಯು ಈ ಬಗೆಯ ದೀರ್ಘಸಾಹಸ ಮಾಡಲಿಕ್ಕೆ ಕಾರಣವೇನಿರಬಹುದು? ಒಬ್ಬ ಯಃಕಶ್ಚಿತ ದಾಸಿಯ ಕುಮಾರನಾದ ನನ್ನನ್ನು ಅವಳು ಹಿಡಿತರಿಸಲಿಕ್ಕೆ ಯತ್ನಿಸಿದ ಉದ್ದೇಶವೇನು? ಬೋವಿಗಳು ನನ್ನನ್ನು ರಾಮರಾಜನೆಂದು ಸಂಬೋಧಿಸಿದ್ದರಲ್ಲಿ ಗೂಢವೇನಿರಬಹುದು?' ಮೊದಲಾದ ಆಲೋಚನೆಯಲ್ಲಿ ಅವನು ತೊಡಗಿದ್ದನು. ಯಾವ ಬಗೆಯ ತರ್ಕವಿತರ್ಕಗಳಿಂದಲೂ ಅವನ ಶಂಕಾಸಮಾಧಾನವಾಗಲಿಲ್ಲ. ಈ ವಿಷಯದಲ್ಲಿ ಸಾಧುವನ್ನೇ

ವಿಚಾರಿಸಬೇಕೆಂದು ಅವನು ನಿಶ್ಚಯಿಸಿಕೊಂಡನು. ಅಷ್ಟರಲ್ಲಿ ಆ ಸಾಧುವು ಸಂತಾಜಿಯನ್ನು ಕುರಿತು —

"ಮಗೂ, ನೀನು ಆ ಚಾಂಡಾಲರ ಕೈಯಲ್ಲಿ ಹೇಗೆ ಸಿಲುಕಿದೆ?"

"ಸಾಧುಮಹಾರಾಜರೆ, ನಾನು ನಿತ್ಯದಂತೆ ಚಂದ್ರಶೇಖರನ ದೇವಾಲಯಕ್ಕೆ ಬಂದಿದ್ದೆನು. ನಾನು ದೇವರಿಗೆ ಪ್ರದಕ್ಷಿಣೆ ಹಾಕುತ್ತಿರುವಾಗ ಆ ದುಷ್ಟರು ನನ್ನನ್ನು ಹಿಡಿದು ಚನ್ನಾಗಿ ಬಂಧಿಸಿ, ಮೋಣೆಯಲ್ಲಿ ಹಾಕಿಕೊಂಡು ನಡೆದರು. ತಾವು ಚಂದ್ರಶೇಖರನಂತೆ ಬಂದು ನನ್ನ ಬಂಧವಿಮೋಚನೆ ಮಾಡಿದಿರಿ. ತಮ್ಮ ಉಪಕಾರವು ಬಹಳವಾಯಿತು."

"ಇದರಲ್ಲಿ ಉಪಕಾರವೇನು? ದುಃಖಿತರ ದುಃಖಪರಿಹಾರಕ್ಕಾಗಿ ಯತ್ನಿಸುವದೇ ಮಾನವೀ ಕರ್ತವ್ಯವಾಗಿರುವದು."

"ನಿರಪೇಕ್ಷಬುದ್ಧಿಯಿಂದ ನೀವು ನನ್ನ ಬಂಧವಿಮೋಚನೆಯ ಸಾಹಸ ಮಾಡಿದ್ದನ್ನು ನೋಡಿದರೆ, ನಿಮ್ಮ ಸಾಧುಭಾವದ ಮಹತಿಯು ಚನ್ನಾಗಿ ವ್ಯಕ್ತವಾಗುತ್ತದೆ" ಎಂದು ಸಂತಾಜಿಯು ನುಡಿದು, ಅಂಜುತ್ತಂಜುತ್ತ: —"ನೀವು ನನ್ನ ಮನಸ್ಸಿನಲ್ಲಿ ಹುಟ್ಟಿದ ಸಂಶಯವನ್ನು ನಿವಾರಿಸುವಿರೆಂದು ನಂಬಿರುವೆನು."

"ಬೇಟಾ, ನಿನ್ನಲ್ಲಿ ಹುಟ್ಟಿದ ಸಂಶಯವೇನೆಂಬದು ನನಗೆ ತಿಳಿಯಿತು. ನೀನು ನನ್ನ ಮಾತಿನಲ್ಲಿ ಅವಿಶ್ವಾಸಗೊಳ್ಳಬೇಡ. ನೀನು ಸಂತಾಜಿಯಲ್ಲ; ಜನಾಬಾಯಿಯ ಮಗನಲ್ಲ. ನಿನ್ನ ನಿಜವಾದ ಹೆಸರು ರಾಮರಾಜನೆಂದಿರುವದು. ಶಿವಛತ್ರಪತಿಯ ಪವಿತ್ರ ರಾಜವಂಶದಲ್ಲಿ ನೀನು ಜನ್ಮತಾಳಿರುವೆ! ನೀನು ಎರಡನೆಯ ಶಿವಾಜಿಯ ಪುತ್ರನು; ಪಾರ್ವತೀಬಾಯಿಯು ನಿನ್ನ ತಾಯಿಯು. ದೈವದುರ್ವಿಲಾಸದಿಂದ ನಿನಗೆ ಅಜ್ಞಾತವಾಸವನ್ನನುಭವಿಸುವ ಪ್ರಸಂಗವು ಒದಗಿತು. ನಿನ್ನ ಜೀವನ ಚರಿತ್ರೆಯು ಅತ್ಯಂತ ದುಃಖಕಾರಿಯೂ, ಆಶ್ಚರ್ಯವುಳ್ಳದ್ದೂ, ಆಗಿರುವದು. ರಾಮರಾಜಾ, ಪರಮಾತ್ಮನ ಅನುಗ್ರಹದಿಂದ ನಿನ್ನ ಭಾಗ್ಯೋದಯವಾಗುವದೆಂದು ನನ್ನ ಆತ್ಮವಿಶ್ವಾಸವಿರುವದು."

"ಸಾಧುಮಹಾರಾಜರೆ, ರಾಜಪುತ್ರನಾದ ನಾನು ಇಂತಹ ದೈನ್ಯಾವಸ್ಥೆಗೀಡಾದ ಕಾರಣವೇನು?"

"ರಾಮರಾಜಾ, ನಿನ್ನ ಅಜ್ಜಂದಿರಾದ ರಾಜಾರಾಮ ಮಹಾರಾಜರು ಅಲ್ಪವಯಸ್ಕರಾಗಿ ಮೃತಿ ಹೊಂದಲು, ಸಿಂಹಾಸನದ ಸಲುವಾಗಿ ಅವರ ಪತ್ನಿಯರಲ್ಲಿ ಕಲಹವು ಪ್ರಾದುರ್ಭವಿಸಿತು. ನಿಜವಾದ ಪಟ್ಟಬಾಧ್ಯರು ತಾರಾಬಾಯಿಯು

ಮಕ್ಕಳಾದ ಶಿವಾಜಿರಾಜರು-ನಿನ್ನ ಜನ್ಮದಾತರೇ. ಹೀಗಿದ್ದರೂ ರಾಜಸಬಾಯಿಯವರು ತಮ್ಮ ಕುಮಾರರಾದ ಸಂಭಾಜಿರಾಜರಿಗೆ ಸಿಂಹಾಸನವು ದೊರೆಯುವದಕ್ಕಾಗಿ ದೀರ್ಘಸಾಹಸ ನಡೆಯಿಸಿ ಕಾರ್ಯಸಾಧನೆ ಮಾಡಿಕೊಂಡರು. ಅವರು ತಾರಾಬಾಯಿಯವರನ್ನೂ, ಶಿವಾಜಿರಾಜರನ್ನೂ ಪಾರ್ವತೀಬಾಯಿ-ಭವಾನಿಬಾಯಿಯರನ್ನೂ, ನಿನ್ನನ್ನೂ ಸೆರೆಯಲ್ಲಿರಿಸಿದರು. ಮುಂದೆ ಸ್ವಲ್ಪ ದಿವಸಗಳಲ್ಲಿ ಶಿವಾಜಿರಾಜರು ಮರಣಹೊಂದಿದರು. ತಾರಾಬಾಯಿಯವರು ತಮ್ಮ ಭಾಗ್ಯೋದಯದ ಆಶೆಯ ಅಂಕುರವಾದ ನಿನ್ನನ್ನು ಒಳ್ಳೆಯ ಜಾಗ್ರತೆಯಿಂದ ರಕ್ಷಿಸುತ್ತ ಬಂದರು. ರಾಜಸಬಾಯಿಯವರ ರಾಕ್ಷಸೀಮಹತ್ವಾಕಾಂಕ್ಷೆಗೆ ನೀನಾದರೂ ಬಲಿಯಾಗುವ ಲಕ್ಷಣವು ತೋರಿದ್ದರಿಂದ, ತಾರಾಬಾಯಿಯವರು ಚಂದ್ರಿಕೆ-ಸಗುಣಾಬಾಯಿ ಮೊದಲಾದ ಏಕನಿಷ್ಠ ಸೇವಕರ ನೆರವಿನಿಂದ ನಿನ್ನನ್ನು ಶಿವರಾಮಪಂತರ ಕಡೆಗೆ ಕಳುಹಿದರು ಜನಾಬಾಯಿಯು ತನ್ನ ಮೃತಬಾಲಕನನ್ನು ವಿನಿಮಯವಾಗಿ ಕೊಟ್ಟು, ನಿನ್ನ ತಾಯಿಯ ಸ್ಥಾನವನ್ನು ಪಡೆದಿರುವಳು. ಅವಳೇ ನಿನ್ನನ್ನು ಸಾಕಿ ಸಲುಹಿದವಳು. ಇತ್ತ ಪನ್ಹಾಳಗಡದಲ್ಲಿ ತಾರಾಬಾಯಿಯವರು ರಾಮರಾಜನು ಮರಣಹೊಂದಿದನೆಂಬ ವಾರ್ತೆಯನ್ನು ಬೀರಿದರು. ಈ ಸಂಗತಿಯಿಂದ ರಾಜಸಬಾಯಿಯವರು ಆನಂದಸಾಗರದಲ್ಲಿ ಮುಳುಗಿದರೆಂಬದರಲ್ಲಿ ಸಂದೇಹವಿಲ್ಲ ಮೊನ್ನೆ ನಡೆದ ಸಂಭಾಜಿ-ಶಾಹೂರಾಜರ ಯುದ್ಧಪ್ರಸಂಗದಲ್ಲಿ ತಾರಾಬಾಯಿಯವರು ಬಂಧವಿಮೋಚನರಾಗಿ ಸಾತಾರೆಗೆ ಬಂದಿರುವರು. ಇಷ್ಟು ದಿನಗಳ ವರೆಗೆ ನಿನ್ನ ಈ ಹೃದಯಸ್ಪರ್ಶಿಯಾದ ಸಂಗತಿಯನ್ನು ಗುಪ್ತವಾಗಿರಿಸುವ ಪ್ರಸಂಗವಿತ್ತು. ಸುಭಾನರಾಯನೆಂಬ ನರಾಧಮನು ನಿನ್ನ ಅಸ್ತಿತ್ವವನ್ನು ರಾಜಸಬಾಯಿಯವರಿಗೆ ತಿಳಿಸಿದ್ದರಿಂದ ಅವರು ನಿನ್ನನ್ನು ಶೋಧಿಸತೊಡಗಿದರು. ಕಡೆಗೆ ಅವರು ತಮ್ಮ ಕಾರಸ್ಥಾನವನ್ನು ಹೇಗೆ ನಡೆಯಿಸಿದರೆಂಬದು ಇಂದಿನ ಘಟನೆಯಿಂದ ನಿನಗೆ ಗೊತ್ತಾಗಿರುವದು. ಈಗ ತಾರಾಬಾಯಿಯವರು ನಿಮಗೆ ರಾಜಪದವು ದೊರೆಯಬೇಕೆಂದು ಪ್ರಯತ್ನ ನಡೆಯಿಸಿರುವರು. ಜಗನ್ನಿಯಾಮಕನ ಅನುಗ್ರಹದಿಂದ ಅವರ ಇಚ್ಛೆಯಂತೆ ಕಾರ್ಯವಾಗುವ ಲಕ್ಷಣವೂ ತೋರತೊಡಗಿರುವದು.''

ಸಾಧುವು ಹೀಗೆ ತನ್ನ ಆತ್ಮವೃತ್ತವನ್ನು ಹೇಳಿದ್ದರಿಂದ, ಸಂತಾಜಿಗೆ ಅತ್ಯಾಶ್ಚರ್ಯವಾಗಿತ್ತು. ತಾರಾಬಾಯಿಯು ಯಾವ ವಿಧವಾಗಿ ಕಾರಸ್ಥಾನವನ್ನು ನಡೆಯಿಸಿ ರಾಜ್ಯಸಂಪಾದನೆಗೆ ಪ್ರವೃತ್ತಳಾಗಿರುವಳೆಂಬದನ್ನು ತಿಳಿದು

ಕೊಳ್ಳುವದಕ್ಕಾಗಿ ಅವನು ಆತುರಗೊಂಡಿದ್ದನು. ಆಗ ಅವನು ಉತ್ಕಂಠಿತನಾಗಿ:

"ಸಾಧುವರ್ಯ, ತಾರಾಬಾಯಿಯವರು ಈಗ ರಾಜ್ಯಪ್ರಾಪ್ತಿಗಾಗಿ ಯಾವ ಕಾರಸ್ಥಾನ ನಡೆಯಿಸಿರುವರು?"

"ಶಾಹೂರಾಜರು ನಿಪುತ್ರಕರಿರುವರು. ನಿನ್ನನ್ನು ದತ್ತಪುತ್ರನೆಂದು ಗ್ರಹಿಸಬೇಕೆಂದು ಅವರು ವಿರೂಬಾಯಿಯವರ-ಶಾಹೂರಾಜರ ಉಪಪತ್ನಿಯ-ಮುಖಾಂತರವಾಗಿ ಪ್ರಯತ್ನ ನಡೆಯಿಸಿರುವರು. ಅವರ ಪ್ರಯತ್ನಕ್ಕೆ ಯಶಪ್ರಾಪ್ತಿಯಾಗುವ ಚಿಹ್ನವೂ ತೋರಲಾರಂಭಿಸಿದೆ. ಬಂಕಟಸ್ವಾಮಿಯವರ ಆಶ್ರಮಕ್ಕೆ ಹೋದರೆ ಎಲ್ಲ ಸಂಗತಿಗಳೂ ತಿಳಿಯುವವು. ರಾಮರಾಜಾ, ಬಂಕಟಸ್ವಾಮಿಗಳೆಂದರೆ ಸಾಮಾನ್ಯರಲ್ಲ; ಅವರು ತಾರಾಬಾಯಿಯವರ ಕಾರಸ್ಥಾನದ ಸೂತ್ರಚಾಲಕರಿರುವರು. ಪ್ರತ್ಯಕ್ಷ ದರ್ಶನದಿಂದ ಆ ಮಹಾತ್ಮರ ಯೋಗ್ಯತೆಯು ನಿನಗೆ ತಿಳಿಯುವದು."

"ಸಾಧುಮಹಾರಾಜರೆ, ದೈವದ ಅಗಾಧ ಲೀಲೆಯಿಂದ ಈ ಒಗೆಯ ಘಟನೆಗಳು ಒದಗಿದವೆಂದು ಹೇಳಲು ಬಾಧಕವಿಲ್ಲ. ರಾಜನು ತಿರುಕನಾಗುವದೂ, ತಿರುಕನಿಗೆ ಭಾಗ್ಯೋದಯವಾಗಿ ರಾಜನಾಗುವದೂ ದೈವದ ಅಗಾಧಲೀಲೆಯಿಂದಲ್ಲವೆ?"

"ರಾಮರಾಜಾ, ಎಲ್ಲ ಘಟನೆಗಳಿಗೆ ದೈವದ ಅಗಾಧ ಲೀಲೆಯೇ ಕಾರಣವು. ಆ ಲೀಲೆಯಿಂದಲೇ ನಿನ್ನ ಭಾಗ್ಯೋದಯವಾದರೂ ಆಗುವದೆಂಬದರಲ್ಲಿ ಸಂದೇಹವಿಲ್ಲ!"

ಸಾಧುಮಹಾರಾಜರ ಈ ಉದ್ಗಾರದಿಂದ ಸಂತಾಜಿಯು ಆನಂದೋದಧಿಯಲ್ಲಿ ಮುಳುಗಿದನು!

---

## ಅಪ್ಪಯ್ಯಾ! ಇದೇನೆ?

ಸಾತಾರೆಗೆ ಬಂದಾಗಿನಿಂದ ತಾರಾಬಾಯಿಗೆ ಬಾವಡೆಯ ವರ್ತಮಾನವು ತಿಳಿದಿದ್ದಿಲ್ಲ. ಸುಭಾನರಾಯನಿಂದ ರಾಮರಾಜನು ಜೀವಂತವಿರುವ ಸಂಗತಿಯು ರಾಜಸಬಾಯಿಗೆ ತಿಳಿದಿರಬಹುದೆಂದೂ, ಅವಳು ರಾಮರಾಜನ ಶೋಧಕ್ಕಾಗಿ ಪ್ರಯತ್ನ ನಡೆಯಿಸಿರಬಹುದೆಂದೂ ತಾರಾಬಾಯಿಯು ಭಾವಿಸಿದ್ದಳು. ಆದ್ದರಿಂದ ಬಾವಡೆಯ ಸಂಗತಿಯನ್ನು ತಿಳಿದುಕೊಳ್ಳುವದು ಅವಳಿಗೆ ಆದ್ಯಕರ್ತವ್ಯ

ವಾಗಿತ್ತು. ಈ ಕಾರ್ಯವನ್ನು ಅವಳು ರಂಭಾಜಿರಾವ ನಿಂಬಾಳಕರನ ಕಡೆಗೆ ಒಪ್ಪಿಸಿದ್ದಳು.

ರಂಭಾಜಿರಾಯನು ಚಾಣಾಕ್ಷನಿದ್ದನು. ಇವನು ತರುಣವಯಸ್ಕನಿದ್ದು ಶೂರನೂ, ಸಾಹಸಿಯೂ ಆಗಿದ್ದನು ಹೊತ್ತು ಬಂದಂತೆ ಕೊಡೆ ಹಿಡಿದು ಕಾರ್ಯಸಾಧನೆ ಮಾಡಿಕೊಳ್ಳುವದರಲ್ಲಿ ಇವನು ಅತ್ಯಂತ ಪ್ರವೀಣನಾಗಿದ್ದನು. ಚಿಕ್ಕವಯಸ್ಸಿನಲ್ಲಿ ತಾಯಿ-ತಂದೆಗಳನ್ನು ಕಳೆದುಕೊಂಡವನಾದ ಇವನು ತನ್ನ ಮಾವನ ಮನೆಯಲ್ಲಿಯೇ ಬೆಳೆದಿದ್ದನು. ರಂಭಾಜಿರಾಯನು ಎಂಟು ವರ್ಷದವದವನಿರುವಾಗಲೆ ಇವನ ಮಾವನು ತನ್ನ ಐದು ವರ್ಷದ ಕುಮಾರಿಯನ್ನು ಇವನಿಗೆ ಧಾರೆಯೆರೆದಿದ್ದನು. ಈ ಪುಟ್ಟ ದಂಪತಿಗಳನ್ನು ನೋಡಿ ಆನಂದಪಡುತ್ತ ಕಾಲಹರಣ ಮಾಡುವದು ಇವನ ಅತ್ತೆ-ಮಾವಂದಿರ ದೈವದಲ್ಲಿದ್ದಿಲ್ಲ. ರಂಭಾಜಿರಾಯನ ವಿವಾಹವಾದ ಸ್ವಲ್ಪ ದಿನಗಳಲ್ಲೇ ಇವನ ಮಾವನು ಶಾಹೂರಾಜನ ಅವಕೃಪೆಗೀಡಾಗಿ ಕಾರಾಗೃಹವನ್ನು ಸೇರಿದನು. ಇವನ ಅತ್ತೆಯೂ, ಹೆಂಡತಿಯೂ ಎಲ್ಲಿಗೆ ಹೋದರೆಂಬದು ಯಾರಿಗೂ ತಿಳಿದಿರಲಿಲ್ಲ. ಇವನ ಮಾವನು ಚಂದ್ರಸೇನ ಜಾಧವನ ಕಡೆಗೆ ಇವನನ್ನು ಒಪ್ಪಿಸಿದ್ದನು. ಆಗ ಚಂದ್ರಸೇನನು ನಿಜಾಮನನ್ನು ಕೂಡಿದ್ದರಿಂದ ಇವನು ಇಲ್ಲಿಯ ವರೆಗೆ ಹೈದರಾಬಾದದಲ್ಲಿ ಕಾಲ ಕಳೆದಿದ್ದನು.

ಸ್ವದೇಶದ್ರೋಹಿಯಾಗಿ ನಿಂತ ಚಂದ್ರಸೇನನ ಬಳಿಯಲ್ಲಿರುವದು ರಂಭಾಜಿರಾಯನಿಗೆ ಅತ್ಯಂತ ತಿರಸ್ಕರಣೀಯವಾಗಿ ತೋರಲಾರಂಭಿಸಿತು. ಅವನ ಬಳಿಯಲ್ಲಿ ನಿಂತುಕೊಂಡರೆ, ಸ್ವರಾಜ್ಯ ಸ್ವಧರ್ಮಗಳ ದ್ರೋಹಮಾಡುವ ಪ್ರಸಂಗವು ತನಗಾದರೂ ಬರುವದೆಂದು ತಿಳಿದು, ಅವನು ಹೈದರಾಬಾದವನ್ನು ಬಿಟ್ಟು ಸಾತಾರೆಗೆ ಹೊರಟು ಬಂದನು. ಇವನು ಚಂದ್ರಸೇನನನ್ನು ಬಿಟ್ಟು ಬಂದ ಕೂಡಲೆ ಶಾಹೂರಾಜನಲ್ಲಿ ಸೇವಾವೃತ್ತಿಯನ್ನು ಕೈಕೊಂಡು ಅವನ ಪ್ರೇಮಸಂಪಾದನೆ ಮಾಡಿದನು. ಇವನನ್ನು ಶಾಹೂರಾಜನು ತಾರಾಬಾಯಿಯ ಪರಿವಾರದ ವ್ಯವಸ್ಥೆಗಾಗಿ ನಿಯಮಿಸಿದ್ದನು.

ರಂಭಾಜಿರಾಯನಿಗೆ ತನ್ನ ವಿಷಯದ ಯಾವ ಸಂಗತಿಯೂ ಗೊತ್ತಿದ್ದಿಲ್ಲ. ಚಂದ್ರಸೇನನು ಇತ್ತೀಚೆಗೆ ಅವನ ಸಂಬಂಧದ ಗೌಪ್ಯ ಸಂಗತಿಗಳನ್ನು ಅಲ್ಪಸ್ವಲ್ಪ ತಿಳಿಸಿದ್ದನು. ಆದ್ದರಿಂದ ಅವನು ತನ್ನ ಅತ್ತೆಯೂ, ಹೆಂಡತಿಯೂ ಎಲ್ಲಿರುವರೆಂಬದನ್ನು ಶೋಧಿಸತೊಡಗಿದ್ದನು. ಇದುವರೆಗೂ ಅವನ ಪ್ರಯತ್ನಕ್ಕೆ

ಯಶಃಪ್ರಾಪ್ತಿಯಾಗಿರಲಿಲ್ಲ. ಅವನು ತಾರಾಬಾಯಿಗೆ ತನ್ನ ಆತ್ಮಕಥೆಯನ್ನು ತಿಳಿಸಿದ್ದನು; ಅವಳಾದರೂ ರಂಭಾಜಿರಾಯನಲ್ಲಿ ಸ್ವಕೀಯಭಾವನೆಯುಳ್ಳವಳಾದ್ದರಿಂದ ಗೂಢವೂ, ಮಹತ್ವವುಳ್ಳದ್ದೂ ಆದ ತನ್ನ ಕರ್ಮಕಥೆಯನ್ನು ಹೇಳಿದ್ದಳು. ಬಾವಡೆಗೆ ಹೋಗಿ ರಾಮರಾಜನ ವಾರ್ತೆಯನ್ನು ತಿಳಿದುಕೊಂಡು ಬರುವದಕ್ಕಾಗಿ ಅವಳು ರಂಭಾಜಿರಾಯನಿಗೆ ತಿಳಿಸಿದಳು. ಅವನಾದರೂ ತನ್ನ ಸ್ವಾಮಿಯ ಸ್ಥಾನದಲ್ಲಿ ತಾರಾಬಾಯಿಯನ್ನು ಕಲ್ಪಿಸಿದ್ದರಿಂದ ಏಕನಿಷ್ಠೆಯಿಂದ ಅವಳ ಕಾರ್ಯ ಮಾಡುವದಕ್ಕಾಗಿ ಸಿದ್ಧನಾದನು.

ಬಾವಡೆಗೆ ಹೋಗುವಾಗ ಮೊದಲು ಬಂಕಟಸ್ವಾಮಿಗಳಿಗೆ ಭೆಟ್ಟಿಯಾಗಬೇಕೆಂದು ತಾರಾಬಾಯಿಯು ರಂಭಾಜಿರಾಯನಿಗೆ ಹೇಳಿದ್ದಳು. ಯಾಕಂದರೆ, ಸ್ವಾಮಿಗಳಿಗೆ ರಾಮರಾಜನ ಕಡೆಯ ವಾರ್ತೆಯು ಗೊತ್ತಿರುತ್ತದೆಂದು ಅವಳ ಗೃಹಿಕೆಯಾಗಿತ್ತು. ರಂಭಾಜಿರಾಯನು ಅವಳ ಆಜ್ಞೆಯನ್ನು ಶಿರಸಾವಹಿಸಿ ಸಾತಾರೆಯಿಂದ ಹೊರಟು, ಸೂರ್ಯಾಸ್ತವಾದ ಎರಡು ಮೂರು ಗಳಿಗೆಯ ಮೇಲೆ ಬಂಕಟಸ್ವಾಮಿಗಳ ಮಠವನ್ನು ತಲುಪಿದನು. ಅವನು ಮಠವನ್ನು ಪ್ರವೇಶಿಸಿ ಸ್ವಾಮಿಗಳಿಗೆ ನಮಸ್ಕರಿಸಿದನು. ಅವನು ತಾರಾಬಾಯಿಯ ನಿರೋಪವನ್ನು ತಿಳಿಸಿ, ಅವಳು ಕೊಟ್ಟ ಪತ್ರಿಕೆಯನ್ನು ಸ್ವಾಮಿಗಳ ಕೈಯಲ್ಲಿ ಕೊಟ್ಟನು. ಬಂಕಟಸ್ವಾಮಿಗಳು ತಾರಾಬಾಯಿಯ ಮುದ್ರೆಯ ಪತ್ರವನ್ನು ಒಡೆದು ಸಂಪೂರ್ಣವಾಗಿ ಓದಿದರು. ಅದರಲ್ಲಿ ಅತ್ಯಂತ ಮಹತ್ವದ ಸಂಗತಿಗಳ ಉಲ್ಲೇಖವಿದ್ದುದರಿಂದ ರಂಭಾಜಿರಾಯನು ತಾರಾಬಾಯಿಯ ಏಕನಿಷ್ಠ ಸೇವಕನೆಂದು ಅವರ ಗೃಹಿಕೆಯಾಯಿತು. ಅವರು ರಂಭಾಜಿರಾಯನೊಡನೆ ಸಾತಾರೆಯ ರಾಜಕಾರಣದ ವಿಷಯವಾಗಿ ಮನಬಿಚ್ಚಿ ಮಾತನಾಡತೊಡಗಿದರು. ರಂಭಾಜಿರಾಯನಾದರೂ ತಾರಾಬಾಯಿಯ ಕಾರಸ್ಥಾನಕ್ಕೆ ಎಷ್ಟರಮಟ್ಟಿಗೆ ಯಶವು ದೊರೆತಿರುವದೆಂಬದನ್ನು ಸ್ವಲ್ಪವಾದರೂ ಮುಚ್ಚಿಡದೆ ಹೇಳತೊಡಗಿದ್ದನು. ಅವರು ಮಧ್ಯರಾತ್ರಿಯವರೆಗೆ ಮಾತು-ಕಥೆಗಳನ್ನು ನಡೆಯಿಸಿದರು. ಅನಂತರದಲ್ಲಿ ರಂಭಾಜಿರಾಯನು ಬಾವಡೆಗೆ ಹೋಗುವದಕ್ಕಾಗಿ ಅನುಜ್ಞೆಯನ್ನು ಬೇಡಿದನು. ಆಗ ಸ್ವಾಮಿಗಳು—"ರಂಭಾಜಿರಾವ, ಸಂತಾಜಿಯು ನಿಮ್ಮ ಕಣ್ಣಿಗೆ ಬೀಳುವದು ಸಾಧ್ಯವಿಲ್ಲ" ಎಂದು ನುಡಿಯಲು, ರಂಭಾಜಿಯು ಉತ್ಕಂಠೆಯಿಂದ:—

"ಶಿವರಾಮಪಂತರ ಬಳಿಗೆ ಹೋದರೆ ನನಗೆ ಸಂತಾಜಿಯ ದರ್ಶನವಾಗುವದಿಲ್ಲವೆ?" ಎಂದು ನುಡಿಯುವಷ್ಟರಲ್ಲಿ ಯಾರೋ ಬಾಗಿಲ ಬಡೆದದ್ದರಿಂದ

ಸ್ವಾಮಿಗಳಿಂದ ಅವನ ಮಾತಿಗೆ ಉತ್ತರ ದೊರೆಯಲಿಲ್ಲ. ಬಾಗಿಲ ತೆಗೆಯ ಬೇಕೆಂದು ಸ್ವಾಮಿಗಳು ಅವನಿಗೆ ತಿಳಿಸಿದರು. ರಂಭಾಜಿರಾಯನು ಅಲ್ಲಿಂದ ಎದ್ದು ಬಾಗಿಲ ತೆರೆದ ಕೂಡಲೆ ಇಬ್ಬರು ಒಳಗೆ ಪ್ರವೇಶಿಸಿದರು. 'ಸ್ವಾಮಿ ಮಹಾರಾಜರ ಬಳಿಯಲ್ಲಿ ಹೊಸಬನೊಬ್ಬನು ಬಂದದ್ದು ನೋಡಿ ಆ ಆಗಂತುಕರೀರ್ವರು ಚಕಿತರಾದರು. ಅವರ ಮನಃಸ್ಥಿತಿಯನ್ನು ಮುಖಚರ್ಯೆಯ ಮೇಲಿಂದ ಬಂಕಟಸ್ವಾಮಿಗಳು ಕಂಡು ಹಿಡಿದರು. ಆಗ ಅವರು ಆ ಮನುಷ್ಯರನ್ನು ಕುರಿತು—

"ಇವರು ತಾರಾಬಾಯಿಯವರ ವಿಶ್ವಾಸಪಾತ್ರರು. ಇವರ ವಿಷಯದಲ್ಲಿ ನೀವು ಯಾವ ಬಗೆಯ ಸಂಶಯವನ್ನೂ ಹಿಡಿಯಬಾರದು."

ಆ ಆಗಂತುಕರು ಮತ್ತಾರೂ ಆಗಿರದೆ, ಅರಣ್ಯದೊಳಗಿನ ದೇಗುಲದಿಂದ ಹೊರಟು ಬಂದ ಸಾಧುವೂ, ಸಂತಾಜಿಯೂ ಆಗಿದ್ದರು. ಅವರ ಆಕಸ್ಮಿಕವಾದ ಆಗಮನದಿಂದ ಸ್ವಾಮಿಗಳಿಗೆ ಆನಂದವಾಯಿತು. ಆಗ ಸಾಧುವು ಸಂತಾಜಿಯನ್ನು ಕುರಿತು—"ಸಂತಾಜಿ, ಮಹಾರಾಜರಿಗೆ ನಮಸ್ಕಾರ ಮಾಡು. ಇವರೇ ಬಂಕಟಸ್ವಾಮಿಗಳು. ಇವರು ಪುಣ್ಯಾಚರಿತರು; ಇವರ ನಾಮವು ಪ್ರಾತಃಸ್ಮರಣೀಯವಿರುವದು" ಎಂದು ಹೇಳಿದೊಡನೆಯೇ ಸಂತಾಜಿಯು ಅವರಿಗೆ ದೀರ್ಘದಂಡಪ್ರಣಾಮಗಳನ್ನರ್ಪಿಸಿದನು. ಸ್ವಾಮಿಗಳು "ದೀರ್ಘಾಯುರಸ್ತು" ಎಂದು ಆಶೀರ್ವದಿಸಿ—"ರಂಭಾಜಿರಾವ, ನೀವು ಯಾರನ್ನು ಕಾಣುವದಕ್ಕಾಗಿ ಬಾವಡೆಗೆ ಹೊರಡಬೇಕೆಂಬ ವಿಚಾರದಲ್ಲಿದ್ದಿರೋ, ಅದೇ ಸಂತಾಜಿಯು ಕರೆಯಿಸಿದಂತೆ ಬಂದಿರುವನು. ನೀವಿನ್ನು ಬಾವಡೆಗೆ ಹೋಗುವ ಕಾರಣವು ಉಳಿಯಲಿಲ್ಲ."

"ಸ್ವಾಮಿ ಮಹಾರಾಜರೆ, ಸಂತಾಜಿಯು ಇಂದು ಪುನರ್ಜನ್ಮ ಹೊಂದಿದಂತಾಗಿರುವನು. ಪರಮೇಶ್ವರನ ಅನುಗ್ರಹದಿಂದಲೂ, ತಮ್ಮ ಆಶೀರ್ವಾದ ಬಲದಿಂದಲೂ ಇವನು ದೊಡ್ಡ ಗಂಡಾಂತರದಿಂದ ಪಾರಾದನು."

ಸಾಧುವು ಹೀಗೆ ಹೇಳಿದ ಕೂಡಲೆ, ಸ್ವಾಮಿಗಳೂ, ರಂಭಾಜಿರಾಯನೂ ವಿಸ್ಮಿತರಾದರು. ಆಗ ಅವರು ಸಂತಾಜಿಗೊದಗಿದ ಸಂಕಟದ ಇತ್ಥಂಭೂತ ಸಂಗತಿಯನ್ನು ತಿಳಿದುಕೊಳ್ಳಲಿಕ್ಕೆ ಆತುರಗೊಂಡರು. ಸಾಧುವು ಅಂದಿನ ಎಲ್ಲ ಘಟನೆಗಳನ್ನು ಸವಿಸ್ತರವಾಗಿ ಹೇಳಿದನು. ಸಂತಾಜಿಯು ವಿಪತ್ತಿನಿಂದ ಪಾರಾದ ಬಗ್ಗೆ ಎಲ್ಲರಿಗೂ ಸಂತೋಷವಾಯಿತು. ರಾಜಸಬಾಯಿಗೆ ರಾಜಕುಮಾರನ ಅಸ್ತಿತ್ವವು ತಿಳಿದದ್ದರಿಂದ ಅವನ ನಾಶಕ್ಕಾಗಿ ವ್ಯಾಹತಿಯಿಲ್ಲದೆ

ಪ್ರಯತ್ನ ನಡೆಯಿಸುವಳೆಂದು ಅವರು ತಿಳಿದರು. ಮುಂದೆ ಅವನ ರಕ್ಷಣೆಯನ್ನು ಹೇಗೆ ಮಾಡಬೇಕೆಂದು ಅವರು ಬಹಳ ವೇಳೆಯವರೆಗೆ ಮಾತನಾಡುತ್ತ ಕುಳಿತರು. ಆಗ ರಂಭಾಜಿರಾಯನ ಮನಸ್ಸಿನಲ್ಲಿ ಒಂದು ವಿಧವಾದ ಯೋಜನೆಯು ಹುಟ್ಟಿತು. ಆಗ ಅವನು ಬಂಕಟಸ್ವಾಮಿಗಳನ್ನು ಕುರಿತು---

"ಮಹಾರಾಜರೆ, ಸಂತಾಜಿಯವರು ವೇಷಾಂತರ ಹೊಂದಿ ದೇಶಸಂಚಾರ ಮಾಡತೊಡಗಿದರೆ ಅವರು ಸುರಕ್ಷಿತವಾಗಿ ಉಳಿಯುವರೆಂಬದರಲ್ಲಿ ಸಂದೇಹವಿಲ್ಲ. ನಾನಾದರೂ ವೇಷಾಂತರದಿಂದ ಅವರ ಬೆಂಬಲವಾಗಿರುವೆನು. ನಾವೀರ್ವರೂ ಗೊಂದಲಿಗರ ವೇಷವನ್ನು ಧರಿಸುವೆವು. ಗೊಂದಲಿಗರ ವೇಷದಿಂದ ನಮ್ಮ ಸರ್ವಾಂಗವೂ ಮುಚ್ಚಲ್ಪಡುವದರಿಂದ ಯಾರೂ ನಮ್ಮನ್ನು ಗುರುತಿಸಲಾರರು. ಅನುಕೂಲಕಾಲವು ಒದಗುವವರೆಗೆ ನಾವು ಹೀಗೆಯೇ ವೇಷಾಂತರದಿಂದ ಸಂಚರಿಸುವದು ಹಿತಕರವು. ಸಂತಾಜಿರಾಯರು ರಾಜಪುತ್ರರಾಗಿದ್ದರೂ ಪ್ರಸಂಗವನ್ನು ಲಕ್ಷ್ಯದಲ್ಲಿ ತಂದು, ಈ ಕೀಳುವೇಷವನ್ನು ಧರಿಸುವದಕ್ಕೆ ಅನುಮಾನ ಮಾಡಬಾರದೆಂದು ನನ್ನ ವಿನಂತಿಯು. ಗೊಂದಲಿಗರ ವೇಷದಿಂದ ರಾಜಕುಮಾರರ ರಕ್ಷಣೆಯಾಗುವದೆಂದು ನನ್ನ ಅಭಿಪ್ರಾಯವಿರುವದು. ಇದರ ಮೇಲೆ ತಮ್ಮ ಇಚ್ಛೆಯು ಹೇಗಿರುವದೋ ಅದರಂತೆ ಆಜ್ಞೆಯಾಗಬೇಕು."

"ರಂಭಾಜಿರಾವ, ನಿಮ್ಮ ಯೋಜನೆಯು ಅತ್ಯಂತ ಯೋಗ್ಯವಾಗಿರುವದು. ಈ ಮಾತಿನಲ್ಲಿ ಸಂತಾಜಿಯು ಯಾವ ಬಗೆಯಿಂದಲಾದರೂ ಖೇದಗೊಳ್ಳುವ ಕಾರಣವಿಲ್ಲ. ಭಾವೀಛತ್ರಪತಿಯಾದ ಇವನಿಗೆ ದೇಶಸಂಚಾರ ಮಾಡಿ ಪ್ರಜೆಗಳ ಸುಖ-ದುಃಖಗಳನ್ನು ಕಣ್ಣಾರೆ ನೋಡುವ ಪ್ರಸಂಗವು ಅನಾಯಾಸವಾಗಿ ಬಂದಿರಲು, ಇಂತಹ ಸಂಧಿಯನ್ನು ವ್ಯರ್ಥವಾಗಗೊಡುವದು ಉಚಿತವಲ್ಲ. ಸಾಧುಗಳೆ, ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನುಂಟು?"

"ಯೋಜನೆಯು ಸರಿಯಾಗಿರುವದು. ರಂಭಾಜಿರಾಯರು ಮಾತ್ರ ಸಂತಾಜಿಯನ್ನು ಅಗಲದೆ, ಅವನ ರಕ್ಷಣೆಯ ಭಾರವನ್ನು ವಹಿಸಬೇಕಾಗುವದು."

"ಒಪ್ಪಿಗೆ. ನಾನು ಅವರ ಮೈ ನೆಳಲಿನಂತೆ ವಾಸವಾಗಿರುವೆನು. ನನ್ನ ದೇಹದಲ್ಲಿ ಪ್ರಾಣವಿರುವವರೆಗೆ ಇವರ ಕೂದಲಿಗೆ ಸಹ ಪೆಟ್ಟು ಹತ್ತದಂತೆ ರಕ್ಷಿಸುವೆನೆಂದು ನಿಮ್ಮ ಹಾಗು ಸ್ವಾಮಿ ಮಹಾರಾಜರ ಚರಣವನ್ನು ಮುಟ್ಟಿ ಹೇಳುವೆನು."

"ಸಂತಾಜಿರಾವ, ರಂಭಾಜಿರಾಯರ ಅಭಿಪ್ರಾಯದ ಮೇರೆಗೆ ನೀವು

ವೇಷಾಂತರ ಹೊಂದಲಿಕ್ಕೆ ಸಮ್ಮತಿಸುವಿರಾ?'' ಎಂದು ಸಾಧುವು ಕೇಳಿದ ಕೂಡಲೆ, ಸಂತಾಜಿಯು ಅವನ ಮಾತಿಗೆ ಒಪ್ಪಿಗೆಯಿತ್ತನು. ಆಗ ರಂಭಾಜಿ ರಾಯನು ಬಂಕಟಸ್ವಾಮಿಗಳನ್ನು ಕುರಿತು:—

"ಸ್ವಾಮಿಮಹಾರಾಜರೆ, ಈ ಸಂಗತಿಯನ್ನು ತಾರಾಬಾಯಿಯವರಿಗೆ ತಿಳಿಸುವದು ಅವಶ್ಯವಾಗಿರುವದು. ನಾನು ಈಗಲೆ ಸಾತಾರೆಗೆ ಹೋಗುವೆನು. ನಾನು ಬರುವವರೆಗೆ ಸಂತಾಜಿರಾಯರನ್ನು ಇಲ್ಲಿಯೇ ಇಟ್ಟುಕೊಳ್ಳಿರಿ. ನಾಳೆ ಮಧ್ಯರಾತ್ರಿಯೊಳಗಾಗಿ ನಾನು ಇಲ್ಲಿಗೆ ಬರುವೆನು. ಬರುವಾಗ ವೇಷಾಂತರದ ವಸ್ತ್ರಪ್ರಾವರಣಗಳನ್ನಾದರೂ ತರುವೆನು. ನಮ್ಮ ವೇಷಾಂತರದ ದೃಶ್ಯವನ್ನು ತಮ್ಮ ಕಣ್ಣೆದುರಿಗೆ ತೋರಿಸಿ ನಾವು ತುಳಜಾಪುರಕ್ಕೆ ಹೋಗುವೆವು. ಸಾಧುಮಹಾರಾಜರು ಬೇಗನೆ ಬಾವಡೆಗೆ ಹೊರಡುವದು ಯೋಗ್ಯವು. ಯಾಕಂದರೆ, ಸಂತಾಜಿರಾಯರು ಇಲ್ಲದಂತಾದುದಕ್ಕೆ ಶಿವರಾಮಪಂತರೂ, ಜನಾಬಾಯಿಯೂ ಚಿಂತೆಯಲ್ಲಿರುವರಾಗಿದ್ದೀತು. ಅವರಿಗೆ ಸಂತಾಜಿರಾಯರ ಕ್ಷೇಮವಾರ್ತೆಯು ಆದಷ್ಟು ಬೇಗನೆ ತಿಳಿಯುವದು ಯುಕ್ತವು'' ಎಂದು ರಂಭಾಜಿರಾಯನು ನುಡಿದು, ಸ್ವಾಮಿಗಳಿಗೂ ಸಾಧುವಿಗೂ ನಮಸ್ಕರಿಸಿ, ತನ್ನ ಕುದುರೆಯನ್ನು ಸಿದ್ಧಪಡಿಸತೊಡಗಿದನು. ಅವನ ಕರ್ತವ್ಯದಕ್ಷತೆಯನ್ನು ನೋಡಿ ಬಂಕಟಸ್ವಾಮಿಗಳು ಸಮಾಧಾನಗೊಂಡರು. ಸಾಧುವಿನ ಮನಸ್ಸಿನ ಮೇಲಾದರೂ ಅವನ ವರ್ತನವು ಒಳ್ಳೆಯ ಪರಿಣಾಮಕಾರಕವಾಯಿತು.

ವಾಚಕಮಹಾಶಯರೆ, ಚಂದ್ರಿಕೆಯು ಸಾಧುವೇಷದಿಂದ ಸ್ವಾಮಿಕಾರ್ಯತತ್ಪರಳಾದದ್ದು ಸ್ಮರಣೆಯಲ್ಲಿರುವದಷ್ಟೆ? ರಂಭಾಜಿರಾಯನ ಭವ್ಯವೂ ಪ್ರಶಾಂತವೂ ಆದ ಮುಖಮುದ್ರೆಯನ್ನೂ, ಗಟ್ಟಿಮುಟ್ಟಾದ ಮೈಕಟ್ಟನ್ನೂ, ಸ್ವಾಮಿಕಾರ್ಯತತ್ಪರತೆಯನ್ನೂ ನೋಡಿ ಅವಳು ಬೆರಗಾದಳು. ರಂಭಾಜಿರಾಯನನ್ನು ನೋಡಿದಾಗಿನಿಂದ ಅವಳ ಮನಸ್ಸಿನಲ್ಲಿ ಅಭೂತಪೂರ್ವವಾದ ವಿಕಾರವು ತಲೆದೋರಿತು. ಅವಳ ರುಕ್ಷ ಮನೋವೃತ್ತಿಯು ಹಠಾತ್ತಾಗಿ ಸ್ನೇಹಮಯವಾಯಿತು; ಹೃದಯಸ್ಪಂದನವು ಜತ್ತರದಿಂದ ನಡೆಯಿತು. ಪುರುಷವರ್ಗವನ್ನು ತುಚ್ಛವೆಂದು ಗೃಹಿಸಿದ ಅವಳ ಮನೋವೃತ್ತಿಯು ಮಾಯವಾಯಿತು. ಮಾಡಿದರೆ ರಂಭಾಜಿರಾಯನಂತಹ ಪುರುಷಶ್ರೇಷ್ಠನ ಸಹವಾಸ ಮಾಡಬೇಕು; ಒಪ್ಪಿಸಿದರೆ ಅಂತಹ ನರವೀರನಿಗೆ ಹೃದಯವನ್ನು ಒಪ್ಪಿಸಬೇಕು; ಇದ್ದರೆ ಅಂತಹ ದಿವ್ಯ ಪುರುಷನ ಸಾನ್ನಿಧ್ಯದಲ್ಲಿರಬೇಕು! ಎಂದು ಅವಳು ಮನದಲ್ಲಿ ಅನ್ನತೊಡಗಿ

ದ್ದಳು. ಸಾಧುವೇಷವು ಅವಳಿಗೆ ಅತ್ಯಂತ ತಿರಸ್ಕರಣೀಯವಾಗಿ ತೋರಲಾರಂಭಿಸಿತು. 'ರಂಭಾಜಿರಾವ! ನಿಮ್ಮ ನಡವಳಿಕೆಯು ಚನ್ನಾಗಿಲ್ಲ. ಇಂದಿನ ವರೆಗೆ ಒಪ್ಪಿಸಿದ ನನ್ನ ಹೃದಯವನ್ನು ಪ್ರಥಮದರ್ಶನದಲ್ಲಿಯೇ ಸೆಳೆದೊಯ್ಯ ತೊಡಗಿದ ನಿಮ್ಮನ್ನು ಸಂಭಾವಿತರೆಂದು ಅದಾರು ಕರೆಯುವರು? ಅಬಲೆಯರ ಗುಪ್ತಧನವನ್ನು ಸುಲಿಗೆ ಮಾಡುವವರಿಗೆ ಶೂರರೂ ಪ್ರಮಾಣಿಕರೂ ಎಂದು ಯಾರು ಅನ್ನುವರು?' ಎಂದು ಅವಳು ಅಸ್ಫುಟವಾಣಿಯಿಂದ ಮಾತನಾಡುತ್ತ, ಕುದುರೆಗೆ ಜೀನುಹಾಕತೊಡಗಿದ ರಂಭಾಜಿರಾಯನನ್ನು ಎವೆಯಿಕ್ಕದೆ ನೋಡುತ್ತ ನಿಂತಳು. ತನ್ನ ಈ ವರ್ತನವನ್ನು ನೋಡಿ ಬಂಕಟಸ್ವಾಮಿಗಳು ಹೆಸರಿಡಬಹು ದೆಂಬದರ ಪರಿವೆಯು ಸಹ ಅವಳಿಗಿರಲಿಲ್ಲ; ರಂಭಾಜಿರಾಯನಾದರೂ ತನ್ನ ಅಸಭ್ಯ ತನಕ್ಕೆ ಹೇಸಿಕೊಂಡಾನೆಂಬ ವಿಚಾರವು ಅವಳ ಮನಸ್ಸಿನಲ್ಲಿ ಬರಲಿಲ್ಲ. ಸ್ವಾಮಿ ಗಳಿಂದ ನಿರೋಪಪಡೆದಿದ್ದರೂ ಅವಳ ಹೆಜ್ಜೆಯು ನಿಂತಸ್ಥಳದಿಂದ ಕದಲಲಿಲ್ಲ; ಬಾವಡೆಗೆ ಹೊರಡುವ ಅವಸರ ಪ್ರಸಂಗವು ಅವಳ ಸ್ಮರಣೆಯಲ್ಲಿ ಉಳಿದಿರಲಿಲ್ಲ. ಮನಸ್ಸೇ ಪರಾಧೀನವಾದ ಮೇಲೆ ಯಾವ ಪರಿವೆಯು ಉಳಿಯುವದು?

ಏರಿಕೆಯ ತಾರುಣ್ಯದ ಚಂದ್ರಿಕೆಯ ಮನಸ್ಸು ಇಂದಿನಂತೆ ಎಂದೂ ಉತ್ಕಂಠಿತವಾಗಿರಲಿಲ್ಲ; ಅವಳ ಮನಸ್ಸಿನಲ್ಲಿ ಇಂದಿನಂತಹ ನೂತನ ವಿಕಾರವು ಎಂದೂ ಹುಟ್ಟಿರಲಿಲ್ಲ. ಪವಿತ್ರಭಾವನಾಪ್ರೇರಿತಳಾದ ಅವಳು ತನ್ನ ಪತಿಯು ಎಲ್ಲಿರಬಹುದೆಂದು ಆಲೋಚನೆ ಮಾಡುತ್ತಿದ್ದಳು; ಕೇವಲ ಪ್ರಣಯಕ್ಕಾಗಿ ಅವಳು ಎಂದೂ ಪತಿಯನ್ನು ನೆನಿಸುತ್ತಿರಲಿಲ್ಲ. ಇಂತಹ ಕಠೋರ ಹೃದಯದ ಸಾಧ್ವಿಯು ರಂಭಾಜಿರಾಯನ ಸಕೃದ್ದರ್ಶನದಲ್ಲಿಯೇ ಅಧೀರಳೂ ಪ್ರೇಮಾ ಕುಲಳೂ ಆದದ್ದು ಅತ್ಯಂತ ವಿಸ್ಮಯಕಾರಿಯಲ್ಲದೆ ಮತ್ತೇನು?

ಬಂಕಟಸ್ವಾಮಿಗಳು ಅವಳ ಮನಃಸ್ಥಿತಿಯನ್ನು ತಿಳಿಯದಿರಲಿಲ್ಲ. ತ್ರಿಕಾಲ ಜ್ಞಾನಿಗಳೂ ಅತೀಂದ್ರಿಯ ಶಕ್ತಿಯುವರೂ ಆದ ಸ್ವಾಮಿಗಳಿಗೆ ಚಂದ್ರಿಕೆಯ ವರ್ತ ನವು ಅಸಮಂಜಸವಾಗಿ ಕಾಣಲಿಲ್ಲ. ಅವಳ ವರ್ತನದಿಂದ ರಂಭಾಜಿಗೆ ಸಂಶ ಯವು ತಟ್ಟೀತೆಂದು ಬಗೆದು, ಅವಳನ್ನು ಜಾಗ್ರತೆಗೊಳಿಸುವದಕ್ಕಾಗಿಯೂ ಜಾಗ್ರತೆ ಗೊಂಡನಂತರ ಅವಳ ಮನಸ್ಸು ಸಮಾಧಾನ ಹೊಂದುವದಕ್ಕಾಗಿಯೂ:-

"ವ್ಯತಿಷಜತಿ ಪದಾರ್ಥಾನಾಂತರಃ ಕೋಪಿ ಹೇತುಃ
ನಖಲು ಬಹಿರುಪಾಧೀನ್ ಪ್ರೀತಯಃ ಸಂಶ್ರಯಂತೇ"

ಸ್ವಾಮಿಮಹಾರಾಜರು ಹೀಗೆಂದು ನುಡಿದ ಕೂಡಲೆ ಚಂದ್ರಿಕೆಯು

ಮೆಟ್ಟಿಬಿದ್ದಳು. ತನ್ನ ಮನೋವೃತ್ತಿಯನ್ನು ಅರಿತು, ಭವಭೂತಿಯ ವಾಕ್ಯ ದಿಂದ ತನ್ನನ್ನು ಜಾಗ್ರತೆಗೊಳಿಸಿದರೆಂದು ಅವಳು ಅಂಜಿದಳು. ಸ್ವಾಮಿಗಳು ಹೇಳಿದಂತೆ 'ಆಂತರಃ ಕೋಪಿಹೇತುಃ' ಎಂಬಂತೆ ವಸ್ತುಸ್ಥಿತಿಯು ಇರಬಹುದೇ ಸೆಂದು ಅವಳು ವಿಚಾರಮಗ್ನಳಾದಳು. ಶಂಕಾನಿವಾರಣೆಗೆ ಸಾಧನಗಳಾವವೂ ದೊರೆಯದ್ದರಿಂದ ಅವಳು ಹತಾಶಳಾದಳು. ಸ್ವಾಮಿಗಳು ಹೀಗೆ ಜಾಗ್ರತೆ ಗೊಳಿಸಿದರೂ ಅವಳು ಬುದ್ಧಿಸ್ವಾತಂತ್ರ್ಯವನ್ನು ಪಡೆಯಲಿಲ್ಲ.

ಕುದುರೆಗೆ ಜೇನು ಹಾಕುವದು ಮುಗಿದೊಡನೆಯೇ ರಂಭಾಜಿರಾಯನು ಸಾಧುವೇಷದ ಚಂದ್ರಿಕೆಗೂ, ಸ್ವಾಮಿಮಹಾರಾಜರಿಗೂ ಮತ್ತೊಮ್ಮೆ ವಂದಿ ಸಿದನು. ಈ ಸಾರೆ ಮಾತ್ರ ಅವನ ವಂದನೆಯನ್ನು ಸ್ವೀಕರಿಸಲಿಕ್ಕೆ ಚಂದ್ರಿಕೆಯು ಹಿಂಜರಿದದ್ದರಲ್ಲಿ ಆಶ್ಚರ್ಯವಿಲ್ಲ. ರಂಭಾಜಿರಾಯನು ಕುದುರೆಗೆ ಜೇನು ಹಾಕುವದರಲ್ಲಿ ಮಗ್ನನಾದದ್ದರಿಂದ ಸಾಧುವೇಷದ ಚಂದ್ರಿಕೆಯ ವರ್ತನವು ಅವನ ದೃಷ್ಟಿಗೆ ಬೀಳಲಿಲ್ಲ. ಬಂಕಟಸ್ವಾಮಿಗಳಾಡಿದ ಭವಭೂತಿ ವಾಕ್ಯವು ಅವನ ಕಿವಿಗೆ ಬಿದ್ದಿದ್ದರೂ, ಕರ್ತವ್ಯದ ಕಡೆಗೆ ಲಕ್ಷ್ಯಗೊಟ್ಟಿದ್ದ ಅವನು ಅವರ ಮಾತಿನ ಯಥಾರ್ಥವಾದ ಅಭಿಪ್ರಾಯವನ್ನು ತಿಳಿದುಕೊಳ್ಳಲಿಕ್ಕೆ ಸಮರ್ಥ ನಾಗಿದ್ದಿಲ್ಲ. ಸ್ವಾಭಾವಿಕವಾಗಿ ಯಾವದೋ ಒಂದು ಶ್ಲೋಕವನ್ನು ಸ್ವಾಮಿ ಗಳು ಅಂದರೆಂದು ಅವನು ತಿಳಿದನು.

ರಂಭಾಜಿರಾಯನು ಸ್ವಾಮಿಗಳ ಹಾಗು ಸಾಧುವೇಷಧಾರಿಯಾದ ಚಂದ್ರಿ ಕೆಯ ನಿರೋಪವನ್ನು ಹೊಂದಿ, ಸಾತಾರೆಯ ಕಡೆಗೆ ಕುದುರೆಯನ್ನು ಸಾಗಿಸಿ ದನು. ಚಂದ್ರಿಕೆಯಾದರೂ ಅವನ ಬೆನ್ನಹಿಂದೆ ನಡೆದಳು. ಅವಳ ಅವಸ್ಥೆ ಯನ್ನು ನೋಡಿ, ಬಂಕಟಸ್ವಾಮಿಗಳು ಮನದಲ್ಲಿ ನಕ್ಕರು. ಹಿಂದೆ ಒರತೊಡ ಗಿದ ಸಾಧುವನ್ನು ನೋಡಿ ರಂಭಾಜಿರಾಯನು "ಸಾಧುಮಹಾರಾಜರೆ, ಬಾವ ಡೆಯ ದಾರಿಯು ಅತ್ತಕಡೆಗಿರುವದು" ಎಂದು ಸ್ವಾಭಾವಿಕವಾಗಿ ಹೇಳಿದನು. ಚಂದ್ರಿಕೆಯ ಎದೆಯು 'ಧಸ್' ಎಂದಿತು. ತನ್ನ ಮನಸ್ಸನ್ನೂ ತನುವನ್ನೂ ಎಳೆಯತೊಡಗಿದ ವಿಕ್ರಮಶಾಲಿಯು ಇವನಾರೆಂದು ಅವಳು ಗಕ್ಕನೆ ಅಲ್ಲಿ ನಿಂತಳು. ಅವಳ ಈ ದೃಶ್ಯವು ಬಂಕಟಸ್ವಾಮಿಗಳ ದೃಷ್ಟಿಗೆ ಬಿದ್ದಿದ್ದರೆ ಅವರು ಚಂದ್ರಿಕೆಯನ್ನು ಗೋಳಾಡಿಸಿ ಬಿಡುತ್ತಿದ್ದರು. ಇಷ್ಟು ಹೊತ್ತಿಗೆ ಅವಳು ಮಠ ದಿಂದ ಹೊರಬಿದ್ದದರಿಂದ ಪರಿಣಾಮವು ಒಳಿತಾಯಿತು. ರಂಭಾಜಿರಾಯನು ತನ್ನನ್ನು ಎಚ್ಚರಗೊಳಿಸಿದ್ದರೂ, ಅವನ ಕುದುರೆಯು ವೇಗದಿಂದ ಸಾಗಿದ್ದರೂ

ಅವಳ ಹೆಜ್ಜೆಗಳು ಬಾವಡೆಯ ದಾರಿಯನ್ನು ಹಿಡಿಯಲಿಲ್ಲ. ಆಗ ಅವಳು ವಿಸ್ಮಯದಿಂದ "ಅವ್ವಯ್ಯಾ! ಇದೇನೆ?" ಎಂದು ಉದ್ಗಾರ ತೆಗೆದಳು.

---

## ಆಯಿೂ ಅಂಬಾ, ಜಗದಂಬಾ! ಜಿ-ಜಿ, ಜಿ-ಜಿ!

ರಂಭಾಜಿರಾಯನು ಗೊಂದಲಿಗರ ವೇಷದ ಸರ್ವ ವೈಭವದೊಡನೆ ಬಂಕಟ ಸ್ವಾಮಿಗಳ ಆಶ್ರಮಕ್ಕೆ ಬಂದು ತಲುಪಿದನು. ಅವನು ತನ್ನ ಶಿಷ್ಯನಾದ ಸಂತಾಜಿಗೆ ನೂತನ ಆಶ್ರಮದ ದೀಕ್ಷೆಯನ್ನು ಕೊಟ್ಟು ವೇಷಕ್ಕೆ ಸರಿಯಾದ ಕಲೆಯಲ್ಲಿ ನಿಷ್ಣಾತನನ್ನು ಮಾಡಿದನು. ಈವರ್ಗೂ ತಮ್ಮ ಉದ್ಯೋಗದಲ್ಲಿ ಪ್ರಾವೀಣ್ಯತೆಯನ್ನು ಪಡೆದ ಮೇಲೆ ತುಳಜಾಪುರಕ್ಕೆ ಹೊರಡುವ ಬಗ್ಗೆ ಬಂಕಟಸ್ವಾಮಿಗಳ ಅನುಜ್ಞೆಯನ್ನು ಕೇಳಿದರು. ಕಲಿತ ವಿದ್ಯೆಯ ಪರೀಕ್ಷೆ ಕೊಟ್ಟು ಪ್ರಯಾಣ ಮಾಡಬೇಕೆಂದು ಅವರು ರಂಭಾಜಿ-ಸಂತಾಜಿರಾಯರಿಗೆ ಹೇಳಿದ್ದರಿಂದ ಅವರು ತಮ್ಮ ವೇಷಕ್ಕೆ ಸರಿಯಾದ ಕಲೆಯನ್ನು ತೋರಿಸುವದಕ್ಕೆ ಒಪ್ಪಿಕೊಂಡರು.

ಗೊಂದಲಿಗರ ವೇಷವನ್ನು ನೋಡುವದಕ್ಕಾಗಿ ಬಂಕಟಸ್ವಾಮಿಗಳು ಆನಂದವನದಲ್ಲಿ ಕುಳಿತಿದ್ದರು. ಚಂದ್ರಿಕೆಯೂ ಶಿವರಾಮಪಂತನೂ ಜನಾಬಾಯಿಯೂ ಆ ಉದ್ಯಾನದಲ್ಲಿ ಸ್ವಾಮಿಗಳ ಹತ್ತರವೇ ಕುಳಿತಿದ್ದರು. ಅವರೆಲ್ಲರೂ ಗೊಂದಲಿಗರ ಚೌಡಿಕೆಯ ಹೊಡತವನ್ನೂ, ಕುಣಿತವನ್ನೂ, ಪದಗಳನ್ನೂ ಕೇಳಿ ದಂಗು ಬಡೆದು ಕುಳಿತಿದ್ದರು. ಚಂದ್ರಿಕೆಯಂತೂ ರಂಭಾಜಿರಾಯನ ಅಭಿನಯವನ್ನು ನೋಡಿ ಬೆರಳುಕಚ್ಚಿದಳು. ಅವಳು ಎವೆಯಿಕ್ಕದೆ ರಂಭಾಜಿಯ-ತನ್ನ ಹೃದಯಚೋರನ-ಅಭಿನಯವನ್ನು ನೋಡತೊಡಗಿದ್ದಳು. ತಾನು ವಿವಾಹಿತಳಿರುವನೆಂಬದೂ ಪರಪುರುಷನನ್ನು ಪ್ರೇಮದೃಷ್ಟಿಯಿಂದ ನೋಡುವದು ಪಾತಕವೆಂಬದೂ ಅವಳ ಸ್ಮೃತಿಪಟಲದಿಂದ ಪೂರಾ ಮಾಯವಾಗಿ ಹೋಗಿತ್ತು. ದೊಡ್ಡ ಗೊಂದಲಿಗನು ತನ್ನನ್ನು ಗೊಂದಲದಲ್ಲಿ ಕೆಡಹಿ ಹೊರಟು ಹೋಗುವನೆಂದು ಅವಳು ಬಹಳೇ ವಿಷಾದಗೊಳ್ಳತೊಡಗಿದ್ದಳು.

ಚಂದ್ರಿಕೆಯು ಈಗ ಸಾಧುವೇಷವನ್ನು ತ್ಯಜಿಸಿದ್ದಳು. ಸಂತಾಜಿಯು ಬಾವಡೆಯನ್ನು ತ್ಯಜಿಸಿ ದೇಶಸಂಚಾರಕ್ಕಾಗಿ ಹೊರಡಲುದ್ಯುಕ್ತನಾದ್ದರಿಂದ ಅವಳಿಗೆ ವೇಷಾಂತರದ ಅವಶ್ಯಕತೆಯಿದ್ದಿಲ್ಲ. ಈಗ ಅವಳು ಬಂಕಟಸ್ವಾಮಿಗಳ ಆಶ್ರಮದಲ್ಲಿಯೇ ವಾಸವಾಗಿದ್ದಳು. ರಂಭಾಜಿರಾಯನು ಚಂದ್ರಿಕೆಯ ಗುಣ-

ಯೌವನ-ರೂಪ ಲಾವಣ್ಯಾದಿಗಳಿಗೆ ಅತ್ಯಂತ ಮುಗ್ಧನಾಗಿದ್ದನು. ಅವಳು ವಿವಾಹಿತಳಿರುವಳೆಂಬದು ಕರ್ಣೋಪಕರ್ಣವಾಗಿ ಅವನಿಗೆ ತಿಳಿದದ್ದರಿಂದ ಉದಾಸೀನನಾಗಿದ್ದರೂ, ತನ್ನ ಹರಿದಾಡುವ ಮನಸ್ಸನ್ನು ಬಿಗಿಹಿಡಿಯಲಿಕ್ಕೆ ಅಸಮರ್ಥನಾಗಿದ್ದನು. ಅವರೀರ್ವರ ಪ್ರೇಮಪೂರಿತ ಭಾಷಣಗಳು ಕೆಲವು ಸಾರೆ ಜರುಗಿದ್ದವು; ಆದರೆ, ಈರ್ವರೂ ನೀತಿಕ್ಷೇತ್ರವನ್ನು ಉಲ್ಲಂಘನ ಮಾಡಿರಲಿಲ್ಲ.

ಚಂದ್ರಿಕೆಯೇ ಸಾಧುವೇಷದಿಂದ ಬಾವಡೆಯಲ್ಲಿ ವಾಸವಾಗಿದ್ದಾಳೆಂಬದು ಇನ್ನೂ ರಂಭಾಜಿಗೆ ಗೊತ್ತಿರಲಿಲ್ಲ. ಸಂತಾಜಿಯಾಗಲಿ, ಬಂಕಟಸ್ವಾಮಿಗಳಾಗಳಾಗಲಿ ಈ ಸಂಗತಿಯನ್ನು ಅವನಿಗೆ ತಿಳಿಸಿರಲಿಲ್ಲ. ಸ್ವರಾಜ್ಯನಿಷ್ಠನಾದ ಸಾಧುವು ಇನ್ನೂ ಕೆಲವು ದಿವಸ ಆಶ್ರಮದಲ್ಲಿರಬೇಕಾಗಿತ್ತೆಂದು ರಂಭಾಜಿರಾಯನು ಆಗಾಗ ಅನ್ನುತ್ತಿದ್ದನು. ವರ್ಷಾಕಾಲವು ತೀರಿದ್ದರಿಂದ ಅವನು ರಾಮೇಶ್ವರ ಯಾತ್ರೆಗಾಗಿ ತೆರಳಿದನೆಂದು ಚಂದ್ರಿಕೆಯೂ ಸಂತಾಜಿಯೂ ಅವನಿಗೆ ಹೇಳಿದ್ದರು

ಗೊಂದಲಿಗರ ವೇಷವನ್ನು ಅಭಿನಯಿಸುವದರಲ್ಲಿ ರಂಭಾಜಿರಾಯನೂ ಸಂತಾಜಿಯೂ ಬಹಳೇ ನಿಪುಣರಾಗಿರುವರೆಂಬದು ಬಂಕಟಸ್ವಾಮಿಗಳ ಮನವರಿಕೆಯಾಯಿತು. ಅನಂತರದಲ್ಲಿ ಅವರು ಆ ವೇಷಧಾರಿಗಳಿಗೆ ತುಳಜಾಪುರಕ್ಕೆ ಹೋಗುವದಕ್ಕಾಗಿ ಆಜ್ಞೆಯಿತ್ತರು. ನೂತನ ಪರಿಚಿತಳಾದ ಚಂದ್ರಿಕೆಯನ್ನಗಲಿ ಹೋಗಬೇಕಾದರೆ ರಂಭಾಜಿರಾಜನಿಗೆ ಜೀವದ ಸುತ್ತು ಬಂದಂತಾಗಿತ್ತು. ಕರ್ತವ್ಯಪಾಲನೆಗಾಗಿ ಅವನು ಹೊರಡಬೇಕಾದ್ದರಿಂದ ಅನಿವಾರ್ಯಹಕ್ಕಾಗಿ ಸಂತಾಜಿಯನ್ನೊಡಗೂಡಿ ಆಶ್ರಮದಿಂದ ತೆರಳಿದನು. ರಂಭಾಜಿರಾಯನ ವಿಯೋಗದಿಂದ ಚಂದ್ರಿಕೆಯ ಮನಃಸ್ಥಿತಿಯು ಹೇಗಾಗಿತ್ತೆಂಬದನ್ನು ವರ್ಣಿಸುವದು ಸಾಧ್ಯವಾದ ಮಾತಲ್ಲ.

ಸಂತಾಜಿಯು ಆತ್ಮರಕ್ಷಣೆಗಾಗಿ ಗೊಂದಲಿಗನ ವೇಷದಿಂದ ತುಳಜಾಪುರಕ್ಕೆ ಹೊರಟು ಹೋದ ಸಂಗತಿಯು ತಾರಾಬಾಯಿಗೆ ಗೊತ್ತಾಯಿತು. ರಾಜಕುಮಾರನು ದೈವದುರ್ವಿಲಾಸದಿಂದ ಇಂಥ ವಿಪತ್ತನ್ನು ಅನುಭವಿಸಬೇಕಾಯಿತೆಂಬದನ್ನು ನೆನೆದು, ಅವಳು ಬಹಳೇ ಕ್ಲೇಶಪಡತೊಡಗಿದಳು. ಅವನಿಗೆ ಹೇಗೆ ಭಾಗ್ಯೋದಯವಾಗುವದೋ, ಎಂದು ಅವಳು ಹಗಲಿರುಳು ಚಿಂತಿಸತೊಡಗಿದ್ದಳು. ಪ್ರತಿನಿಧಿಯಾದ ಕೇಶವಶಾಸ್ತ್ರಿ ಹಾಗು ವಿರೂಬಾಯಿಯ ಮುಖಾಂತರವಾಗಿ ಅವಳು ದತ್ತಕದ ವಿಷಯವನ್ನು ಶಾಹೂರಾಜನ ಕಿವಿಯ ಮೇಲೆ ಹಾಕಿದ್ದಳು.

ಶಾಹೂರಾಜನ ಪ್ರಕೃತಿಯು ವೃದ್ಧಾಪ್ಯದ ಮೂಲಕವಾಗಿ ದಿನದಿನಕ್ಕೆ ಕ್ಷೀಣವಾಗತೊಡಗಿತ್ತು. ಐಹಿಕ ವಿಷಯಾಸಕ್ತಿಯು ಅವನಲ್ಲಿ ಸಂಪೂರ್ಣ ವಾಗಿ ನಾಶವಾಗಿತ್ತು. ವಾರಣಾದ ಒಪ್ಪಂದವಾಗಿ ಸಂಭಾಜಿರಾಜನು ಇವನೊಡನೆ ಸ್ನೇಹದಿಂದ ನಡೆಯುತೊಡಗಿದ್ದನು. ಅವನಿಗೆ ಶಾಹೂರಾಜನು ಕೊಲ್ಹಾಪುರದ ರಾಜ್ಯವನ್ನು ವಿಭಾಗಿಸಿ ಬಿಟ್ಟುಕೊಟ್ಟದ್ದರಿಂದ ಸಾತಾರೆಯ ರಾಜ್ಯದ ಮೇಲೆ ಅವನು ಯಾವ ವಿಧವಾದ ಅಧಿಕಾರವುಳ್ಳವನಾಗಿರಲಿಲ್ಲ. ತನ್ನ ವೃದ್ಧಾಪ್ಯದ ಕಡೆಗೆ ಲಕ್ಷ್ಯಗೊಟ್ಟು ಶಾಹೂರಾಜನು ದತ್ತಪುತ್ರನನ್ನು ತೆಗೆದುಕೊಳ್ಳುವ ಯೋಚನೆಯಲ್ಲಿದ್ದನು. ರಾಜಮನೆತನದೊಳಗಿನ ಒಬ್ಬ ಹುಡುಗನನ್ನು ಆರಿಸುವದಕ್ಕಾಗಿ ಅವನು ಮಂತ್ರಿಮಂಡಳಕ್ಕೆ ಆಜ್ಞಾಪಿಸಿದನು.

ತಾರಾಬಾಯಿಯು ಶಾಹೂರಾಜನ ಮೇಲೆ ತನ್ನ ವರ್ಚಸ್ಸು ಪ್ರಸ್ಥಾಪಿಸಿದ್ದಳು. ಅವನಾದರೂ ಅವಳನ್ನು ತಾಯಿಯ ಸ್ಥಳದಲ್ಲಿ ಭಾವಿಸಿ ಮರ್ಯಾದೆ ಕೊಡುತ್ತಿದ್ದನು. ತನ್ನ ಮನೆತನದ ವಿಷಯದಲ್ಲಿ ಅವನು ತಾರಾಬಾಯಿಯ ಅಭಿಪ್ರಾಯವನ್ನು ಕೇಳುತ್ತಿದ್ದನು. ವಿರೂಬಾಯಿಯು ಹಾಗು ಕೇಶವಶಾಸ್ತ್ರಿಯ ಮುಖಾಂತರವಾಗಿ ಅವನಿಗೆ ರಾಮರಾಜನು ಜೀವಂತವಾಗಿದ್ದ ಸಂಗತಿಯು ತಿಳಿಯಿತು. ರಾಮರಾಜನು ರಾಜಮನೆತನದವನೂ, ರಾಜ್ಯಕ್ಕೆ ಬಾಧ್ಯಸ್ಥನೂ ಇರುವದರಿಂದ ಅವನನ್ನೇ ದತ್ತಪುತ್ರನನ್ನಾಗಿ ತೆಗೆದುಕೊಳ್ಳಬೇಕೆಂದು ಅವರು ಶಾಹೂರಾಜನಿಗೆ ಆಗ್ರಹದಿಂದ ಹೇಳತೊಡಗಿದರು. ಅವರ ಮಾತಿನಲ್ಲಿ ಶಾಹೂರಾಜನಿಗೆ ನಂಬಿಗೆಯು ಹುಟ್ಟಲಿಲ್ಲ. ಆಗ ಅವನು ಈ ಮಾತಿನ ಪರಿಷ್ಕಾರ ಮಾಡಬೇಕೆಂದು ತಾರಾಬಾಯಿಯನ್ನು ತನ್ನ ಆಗಮನೆಗೆ ಕರೆಯಿಸಿದನು.

ಶಾಹೂರಾಜನು ಕೇಶವಶಾಸ್ತ್ರಿ-ವಿರೂಬಾಯಿಯರೊಡನೆ ಮಾತನಾಡುತ್ತ ಅರಮನೆಯಲ್ಲಿ ಕುಳಿತಿದ್ದನು. ರಾಮರಾಜನು ಜೀವಂತವಿದ್ದ ಬಗ್ಗೆ ತಾರಾಬಾಯಿಯು ತಕ್ಕ ಪ್ರಮಾಣಗಳನ್ನು ತೋರಿಸಿದರೆ, ಅವನನ್ನು ಪುತ್ರನೆಂದು ಪರಿಗ್ರಹಿಸಬೇಕೆಂದು ವಿರೂಬಾಯಿಯೂ, ಕೇಶವಶಾಸ್ತ್ರಿಯೂ ಶಾಹೂರಾಜನಿಗೆ ಹೇಳತೊಡಗಿದ್ದರು. ರಾಮರಾಜನ ವಿಷಯವಾಗಿ ನಿಜಸ್ಥಿತಿಯನ್ನು ತಿಳಿದುಕೊಳ್ಳಬೇಕೆಂದು ಶಾಹೂರಾಜನು ತಾರಾಬಾಯಿಯನ್ನು ಕರೆಯಿಸಿಕೊಂಡನು.

"ಮಾಸಾಹೇಬ, ರಾಮರಾಜನು ಪನ್ಹಾಳಗಡದಲ್ಲಿ ಮರಣಹೊಂದಿದನೆಂದು ದಟ್ಟವಾದ ವಾರ್ತೆಯಿರುವದು; ನೀವು ಮಾತ್ರ ಅವನು ಜೀವಂತವಾಗಿ ಉಳಿದಿರುವನೆಂದು ಹೇಳತೊಡಗಿರುವಿರಿ. ರಾಜ್ಯಲೋಭಕ್ಕೊಳಗಾಗಿ ಯಾವ

ನೊಬ್ಬನನ್ನು ತಂದು, ಇವನೇ ರಾಮರಾಜನೆಂದು ಹೇಳಿ ಮೋಸಗೊಳಿಸುವ ಕೃತಿಯನ್ನು ನೀವು ಮಾಡಬಾರದು ರಾಜಮನೆತನದ ಹುಡುಗನು ಸ್ವರಾಜ್ಯದ ಒಡೆಯನಾಗಬೇಕೆಂದು ನನ್ನ ಇಚ್ಛೆಯಿರುವದು. ನೀವು ಸತ್ಯವನ್ನು ಸ್ಮರಿಸಿ ನಿಜ ಸ್ಥಿತಿಯನ್ನು ತಿಳಿಸಿದರೆ ಒಳಿತಾಗುವದು.''

''ರಾಮರಾಜನು ಒದುಕಿರುವನೆಂದು ನಾನು ಸತ್ಯವಾಗಿ ಹೇಳುವೆನು. ಅವನು ಹೇಗೆ ಒದುಕಿದನೆಂಬದನ್ನೂ, ಇಂದಿನವರೆಗೆ ಎಲ್ಲಿ ಎಲ್ಲಿ ಯಾವ ಯಾವ ರೀತಿಯಿಂದ ಕಾಲಹರಣ ಮಾಡಿದನೆಂಬದನ್ನೂ ಆಧಾರಸಹಿತವಾಗಿ ನಿಮ್ಮ ನಿದರ್ಶನಕ್ಕೆತಂದುಕೊಟ್ಟಮೇಲೆ ನೀವು ನನ್ನ ಮಾತನ್ನು ನಂಬಿರಿ.''

''ರಾಮರಾಜನು ಮರಣಹೊಂದಿದನೆಂದು ವಾರ್ತೆಯಾದ ಕಾರಣವೇನು? ಅವನು ಹೇಗೆ ಬದುಕಿದನು? ಇಷ್ಟು ದಿನಗಳ ವರೆಗೆ ಅವನು ಎಲ್ಲಿದ್ದನು? ಸದ್ಯದಲ್ಲಿ ಅವನು ಎಲ್ಲಿ ಕಾಲಹರಣ ಮಾಡುತ್ತಿರುವನು?'

ಶಾಹೂರಾಜನು ಹೀಗೆ ಕೇಳಿದ ಕೂಡಲೆ ತಾರಾಬಾಯಿಯು ರಾಮರಾಜನ ವಿಷಯದ ಎಲ್ಲ ಸಂಗತಿಯನ್ನು ತಿಳಿಸಿದಳು. ಅವಳು ಹೇಳಿದ ವಿಸ್ಮಯಜನಕವಾದ ಸಂಗತಿಯಿಂದ ಎಲ್ಲರೂ ತಲೆದೂಗಿದರು. ಅವರು ತಾರಾಬಾಯಿಯ ಕಾರಸ್ಥಾನದ ವಾರ್ತೆಯನ್ನು ಕೇಳಿ ಅವಳನ್ನು ಕೊಂಡಾಡಿದರು. ಅವಳ ಪರಿವಾರದೊಳಗಿನ ಬಂಕಟಸ್ವಾಮಿ, ಚಂದ್ರಿಕೆ, ಸಗುಣಾ ಗವಳತಿ, ಶಿವರಾಮಪಂತ, ಜನಾಬಾಯಿ ಮೊದಲಾದ ಸ್ವಾಮಿನಿಷ್ಠರ ಕರ್ತವ್ಯಪ್ರಭಾವವನ್ನು ಅವರು ಬಹು ಪರಿಯಾಗಿ ಹೊಗಳಿದರು. ಆಗ ಶಾಹೂರಾಜನು ತಾರಾಬಾಯಿಯನ್ನು ಕುರಿತು:

''ನಿಮ್ಮ ಮಾತಿನಲ್ಲಿ ನನಗೆ ನಂಬಿಗೆಯಾಗಿರುವದು; ಆದರೂ ಪ್ರಜಾಜನರ ಶಂಕಾನಿವಾರಣೆ ಮಾಡುವದು ಶ್ರೇಯಸ್ಕರವು. ನೀವು ನಿಮ್ಮ ಎಲ್ಲ ಸಾಕ್ಷಿಗಳನ್ನು ತೆಗೆದುಕೊಂಡು ಬಂದು, ರಾಮರಾಜನ ಅಸ್ತಿತ್ವವನ್ನು ಸಿದ್ಧಮಾಡಿಕೊಟ್ಟರೆ, ಮುಂದಿನ ಕಾರ್ಯವನ್ನು ನಿಮ್ಮ ಮನಸ್ಸಿನಂತೆ ಆನಂದದಿಂದ ನೆರವೇರಿಸುವೆನು. ನನ್ನ ಮಾತಿನಿಂದ ನೀವು ಅಸಮಾಧಾನಗೊಳ್ಳದೆ ಬೇಗನೆ ಸಾಕ್ಷಿಗಳನ್ನು ತೆಗೆದುಕೊಂಡು ಬನ್ನಿರಿ.''

''ನಾನು ಇಂದಿನಿಂದ ಎಂಟನೆಯ ದಿವಸದಲ್ಲಿ ನನ್ನ ಎಲ್ಲ ಸಾಕ್ಷಿಗಳನ್ನು ತೆಗೆದುಕೊಂಡು ಬರುವೆನು. ರಾಮರಾಜನು ಜೀವಂತವಾಗಿರುವ ಬಗ್ಗೆ ನಾನು ಸಪ್ರಮಾಣವಾಗಿ ಸಿದ್ಧ ಮಾಡಿ ತೋರಿಸಿದ ಮೇಲೆ, ನೀವು ಅವನನ್ನೇ ದತ್ತಪುತ್ರನನ್ನಾಗಿ ತೆಗೆದುಕೊಳ್ಳುವೆವೆಂದು ಆಶ್ವಾಸನೆಯನ್ನೀಯಬೇಕು.''

"ಈ ಮಾತಿಗೆ ನನ್ನ ಸಿದ್ಧತೆಯಿರುವದು. ನೀವು ನನಗೆ ರಾಮರಾಜನು ಬದುಕಿದ ಬಗ್ಗೆ ನಂಬಿಗೆ ಮಾಡಿಕೊಟ್ಟು ನಿಮ್ಮ ಮೊಮ್ಮಗನೊಡನೆ ಒಂದೇ ಎಲೆಯಲ್ಲಿ ಊಟ ಮಾಡಿದರೆ, ನಾನು ಅವನನ್ನು ನನ್ನ ಸಿಂಹಾಸನದ ಔರಸಪುತ್ರನನ್ನಾಗಿ ಮಾಡಿಕೊಳ್ಳುವೆನು"

ಹೀಗೆ ಶಾಹೂರಾಜನು ನುಡಿಯಲು, ಕೇಶವಶಾಸ್ತ್ರಿಯೂ, ವಿರೂಬಾಯಿಯೂ-"ಮಹಾರಾಜರ ಮಾತು ಯೋಗ್ಯವಾದದ್ದಿರುವದು" ಎಂದು ನುಡಿದರು.

ರಾಮರಾಜನು ಜೀವಂತವಿರುವದರ ಸಿದ್ಧತೆಗಾಗಿ ಯಾವ ಯಾವ ಜನರು ಬೇಕಾಗಿದ್ದರೋ, ಆ ಜನರಿಗೆಲ್ಲ ತಾರಾಬಾಯಿಯು ನಿಮಂತ್ರಣವನ್ನು ಕಳುಹಿಸಿದಳು. ಸಂತಾಜಿಯು ಗೊಂದಲಿಗನ ವೇಷದಿಂದ ರಂಭಾಜಿರಾಯನೊಡನೆ ತುಳಜಾಪುರದಲ್ಲಿರುವನೆಂಬ ಸಂಗತಿಯು ಒಂಕಟಸ್ವಾಮಿಗಳ ಮುಖಾಂತರವಾಗಿ ತಿಳಿದದ್ದರಿಂದ, ಅವನನ್ನು ಕರೆದುಕೊಂಡು ಬರುವದಕ್ಕಾಗಿ ಅವಳು ಸೇವಕರನ್ನು ಕಳುಹಿಸಿದಳು. ಒಂಕಟಸ್ವಾಮಿ, ಚಂದ್ರಿಕೆ, ಸಗುಣಾ ಗವಳತಿ, ಶಿವರಾಮಪಂತ, ಜನಾಬಾಯಿ ಮೊದಲಾದ ಜನರು ನಿರ್ಣಯದ ದಿವಸಕ್ಕಿಂತ ಎರಡು ದಿನ ಮುಂಚಿತವಾಗಿಯೇ ಸಾತಾರೆಗೆ ಬಂದರು. ನಾಳಿನ ದಿವಸದಲ್ಲಿ ಶಾಹೂರಾಜನೆದುರಿಗೆ ಸಾಕ್ಷಿಗಳನ್ನು ಒಯ್ಯಬೇಕಾಗಿತ್ತು. ಇನ್ನೂ ಸಂತಾಜಿರಾಯನೂ ರಂಭಾಜಿರಾಯನೂ ಬಾರದ್ದರಿಂದ ಎಲ್ಲರೂ ಚಿಂತೆಗೊಳಗಾಗಿದ್ದರು. ಅವರು ತುಳಜಾಪುರವನ್ನು ಬಿಟ್ಟು ಮತ್ತೆಲ್ಲಿಗಾದರೂ ಸಂಚಾರಕ್ಕೆ ಹೊರಟಿರಬಹುದೆಂದು ಎಲ್ಲರೂ ತರ್ಕಿಸಿದರು. ತಾರಾಬಾಯಿಯು ಅವರನ್ನು ಶೋಧಿಸುವದಕ್ಕಾಗಿ ಅಲ್ಲಲ್ಲಿ ಸೇವಕರನ್ನು ಕಳುಹಿಸಿದಳು.

ಸಂಧ್ಯಾಕಾಲದ ಸಮಯವಾಗಿತ್ತು. ಭಗವಾನ್ ದಿನಮಣಿಯು ಅಸ್ತಾಚಲವನ್ನು ಸೇರತೊಡಗಿದ್ದನು. ಪಥಶ್ರಮದಿಂದ ಅವನು ಆರಕ್ತ ವರ್ಣವನ್ನು ಹೊಂದಿದ್ದನು. ತಾರಾಬಾಯಿಯು ಸಂತಾಜಿಯು ಆಗಮನವಾಗದ್ದರಿಂದ ಕಾಂತಿಹೀನ ಮುಖವುಳ್ಳವಳಾಗಿ, ತೇಜೋಹೀನನಾದ ಅಸ್ತಮಾನ ರವಿಯನ್ನು ನೋಡುತ್ತ ಕುಳಿತಿದ್ದಳು. ಅವಳ ಮನಸ್ಸು ಬಹಳ ಉದ್ವಿಗ್ನತೆಯನ್ನು ಹೊಂದಿತ್ತು. ಅವನು ಹೊತ್ತಿಗೆ ಸರಿಯಾಗಿ ಬಾರದಿದ್ದರೆ ಕಾರ್ಯವು ಕೆಡುವದೆಂದು ಅವಳು ತಿಳಿದಿದ್ದಳು. ಅವಳ ಬಳಿಯಲ್ಲಿ ಒಂಕಟಸ್ವಾಮಿಗಳೂ, ಚಂದ್ರಿಕೆಯೂ ಕುಳಿತುಕೊಂಡಿದ್ದರು. ಅವರು ಚಿಂತಾಕ್ರಾಂತಳಾದ ತಾರಾಬಾಯಿಯನ್ನು ಸಾಂತ್ವನಗೊಳಿಸತೊಡಗಿದ್ದರು. ಒಂದು ವೇಳೆ ಸಂತಾಜಿರಾಯನು ಬಾರದಿದ್ದರೆ ಇದ್ದ

ಸಾಕ್ಷಿಗಳ ಮೇಲೆ ಕೆಲಸವಾಗುವದೆಂದೂ, ಅವನು ಬಂದ ಮೇಲೆ ದತ್ತಕವಿಧಾನವನ್ನು ಪೂರೈಸಲು ಬರುವದೆಂದೂ, ಬಂಕಟಸ್ವಾಮಿಗಳು ತಾರಾಬಾಯಿಗೆ ತಿಳಿಸಿದರು. ಅವರು ಎರಡು-ಮೂರು ಗಳಿಗೆಯ ವರೆಗೆ ಅಲ್ಲಿ ಮಾತನಾಡುತ್ತ ಕುಳಿತುಕೊಂಡರು. ಆಗ ಸೂರ್ಯಾಸ್ತವಾಗಿ ಸಂಧಿಪ್ರಕಾಶವು ಸಹ ಅಡಗಿದ್ದರಿಂದ, ಅವರು ತಾವು ಕುಳಿತ ಪ್ರಾಕಾರದಿಂದೆದ್ದು ಅರಮನೆಯಲ್ಲಿ ಹೋಗಲುದ್ಯುಕ್ತರಾದರು. ಅಷ್ಟರಲ್ಲಿ —

“ಆಯೀ ಅಂಬಾ, ಜಗದಂಬಾ! ಜಿ-ಜೀ, ಜಿ-ಜೀ!” ಎಂದು ಹಾಡುತ್ತ ಇಬ್ಬರು ಗೊಂದಲಿಗರು ಅಲ್ಲಿಗೆ ಬಂದರು. ಅರಮನೆಯಲ್ಲಿ ಗೊಂದಲಿಗರೇಕೆ ಬಂದರೆಂದು ತಾರಾಬಾಯಿಯು ಬೆರಗಾದಳು. ಅವರನ್ನು ಒಳಗೆ ಬಿಟ್ಟ ಬಗ್ಗೆ ಅವಳು ತನ್ನ ಸೇವಕರ ಮೇಲೆ ಕ್ರೋಧಗೊಂಡಳು. ಆಗ ಬಂಕಟಸ್ವಾಮಿಗಳೂ ಚಂದ್ರಿಕೆಯೂ ಖೊಳ್ಳನೆ ನಕ್ಕರು.

“ರಾಣೀಸಾಹೇಬರೆ, ಇವರು ಸಂತಾಜಿರಾಯ-ರಂಭಾಜಿರಾಯರು!” ಎಂದು ಚಂದ್ರಿಕೆಯು ನಗುತ್ತಲೆ ತಾರಾಬಾಯಿಗೆ ಹೇಳಿದಳು. ಕೂಡಲೆ ಅವಳು ಮೊಮ್ಮಗನನ್ನು ಆನಂದದ ಭರದಲ್ಲಿ ಬಿಗಿದಪ್ಪಿದಳು.

“ರಾಮರಾಜಾ! ಇನ್ನು ಈ ವೇಷವು ಸಾಕು! ನಾಳಿನ ಸೂರ್ಯೋದಯದೊಡನೆ ನಿನ್ನ ಭಾಗ್ಯೋದಯವೂ ಆಗುವದು!” ಎಂದು ತಾರಾಬಾಯಿಯು ಆನಂದೋದ್ಗಾರ ತೆಗೆದಳು.

---

## ಭಾಗ್ಯೋದಯ!

ಶಾಹೂರಾಜನು ತನ್ನ ಅರಮನೆಯಲ್ಲಿ ರತ್ನಖಚಿತವಾದ ಸುವರ್ಣಾಸನದ ಮೇಲೆ ಕುಳಿತಿದ್ದನು. ಅಂದು ನಿರ್ಣಯದ ದಿವಸವಿದ್ದುದರಿಂದ ತನ್ನ ಮಂತ್ರಿಮಂಡಲವನ್ನು ಕರೆಯಿಸಿದ್ದನು. ಅವನ ರಾಣಿಯರೂ ವಿರೂಬಾಯಿಯೂ ತೆರೆಯಲ್ಲಿ ಕುಳಿತುಕೊಂಡಿದ್ದರು. ತಾರಾಬಾಯಿಯು ತನ್ನ ಎಲ್ಲ ಸಾಕ್ಷಿಗಳನ್ನು ತೆಗೆದುಕೊಂಡು ಅಲ್ಲಿಗೆ ಬಂದಿದ್ದಳು. ದುರ್ದೈವರೂಪ ರಾಹುವಿನಿಂದ ಗ್ರಸ್ತವಾದ ತನ್ನ ಭಾಗ್ಯಚಂದ್ರನ ಮೋಕ್ಷಕಾಲವು ಸಮೀಪದಲ್ಲಿ ಒಂದಿರುವದೆಂದು ಅವಳಿಗೆ ಅತಿರೇಕವಾದ ಆನಂದವಾಗಿತ್ತು. ಅನೇಕ ಪಥವಾದ ಸಂಕಟವನ್ನನುಭವಿಸಿದ

ತನ್ನ ಭಾಗ್ಯೋದಯವಾಗುವದೆಂಬ ಸುಖಮಯ ಕಲ್ಪನೆಯಿಂದ ಅವಳಿಗೆ ನವ ಜೀವನವು ಪ್ರಾಪ್ತವಾದಂತಾಗಿತ್ತು. ಅಂದಿನ ಸಭೆಯಲ್ಲಿ ಜನಸಮುದಾಯವು ಬಹಳವಾಗಿ ಕೂಡಿತ್ತು. ಎಲ್ಲ ಜನರು ಭಾವೀ ಛತ್ರಪತಿಯನ್ನು ಕಾಣುವದಕ್ಕಾಗಿ ಉತ್ಕಂಠಿತರಾಗಿದ್ದರು. ಆಗ ಶಾಹೂರಾಜನು ತಾರಾಬಾಯಿಯನ್ನು ಕುರಿತು— "ನಿಮ್ಮ ಸಾಕ್ಷಿಗಳನ್ನು ಕರೆಯಿಸಿರಿ" ಎಂದು ಹೇಳಲು, ತಾರಾಬಾಯಿಯು ಎಲ್ಲಕ್ಕೂ ಮೊದಲು ಸಗುಣಾ ಗವಳತಿಯನ್ನು ಕರೆದಳು.

"ಸಗುಣಾಬಾಯಿ, ರಾಮರಾಜನ ವಿಷಯವಾಗಿ ನಿನಗೆ ಗೊತ್ತಿದ್ದ ಸಂಗತಿಯನ್ನು ಪರಮೇಶ್ವರನನ್ನು ಸ್ಮರಿಸಿ ನಿರ್ಭಯದಿಂದ ಸತ್ಯವಾಗಿ ಹೇಳು."

ತಾರಾಬಾಯಿಯು ಹೀಗೆ ನುಡಿದ ಕೂಡಲೆ ಸಗುಣಾಬಾಯಿಯು ಶಾಂತ ರೀತಿಯಿಂದಲೂ ನಿರ್ಭಯವಾಣಿಯಿಂದಲೂ ಶಾಹೂರಾಜನನ್ನು ಕುರಿತು ಆತ್ಮ ಕಥನ ಮಾಡತೊಡಗಿದಳು:

"ಮಹಾರಾಜರೆ, ನನಗೆ ಎಲ್ಲ ಜನರು ಸಗುಣಾ ಗವಳತಿಯೆಂದೆನ್ನುವರು. ನನ್ನ ನಿಜವಾದ ಹೆಸರು ಸಗುಣೆಯೆಂದಿರುವದಿಲ್ಲ. ಎಲ್ಲ ಸಂಗತಿಯನ್ನು ಹೇಳುವದಕ್ಕಿಂತ ಮೊದಲು ಮಹಾರಾಜರಲ್ಲಿ ನಾನು ಅಭಯ ಬೇಡುವೆನು. ನನ್ನ ಪತಿಯು ಸರಕಾರದ ದ್ರೋಹಚಿಂತನೆ ಮಾಡಿದ್ದರಿಂದ ನಾವೀರ್ವರೂ ಅಪರಾಧಿಗಳಾಗಿರುವೆವು. ಆದ್ದರಿಂದ ನಾನು ವೇಷಾಂತರದಿಂದ ಕಾಲಹರಣ ಮಾಡತೊಡಗಿರುವೆನು. ನನ್ನ ಪತಿಯು ಇನ್ನೂ ಜೀವದಿಂದಿರುವನು. ಅವನು ಬಹಳ ವರ್ಷಗಳ ಹಿಂದೆ ಸೆರೆಮನೆಯಲ್ಲಿ ಸಿಲುಕಿದ್ದು, ಇದುವರೆಗೂ ಭೀಷಣವಾದ ಯಾತನೆಯನ್ನು ಅನುಭವಿಸುತ್ತಲಿರುವನು."

ಸಗುಣಾಬಾಯಿಯ ಮಾತುಗಳನ್ನು ಕೇಳಿ ಎಲ್ಲ ಜನರೂ ಆಶ್ಚರ್ಯಚಕಿತರಾದರು. ತಾರಾಬಾಯಿಯಾದರೂ ಅವಳ ಅಜ್ಞಾತವಾದ ಪೂರ್ವಪೀಠಿಕೆಯನ್ನು ಕೇಳಿ ಬೆರಗಾದಳು. ಆಗ ಶಾಹೂರಾಜನು:-"ಸಗುಣಾಬಾಯಿ, ನನಗೆ ನಿನ್ನ ನಿಜವಾದ ಹೆಸರು ಗೊತ್ತಾಯಿತು. ನಿನ್ನ ಪತಿಯು ಎಂಥ ಅಪರಾಧವನ್ನು ಮಾಡಿದ್ದರೂ, ನಾನು ಅವನನ್ನು ಕ್ಷಮಿಸುವೆನು. ನೀನು ನಿರ್ಭಯದಿಂದ ಎಲ್ಲ ಸಂಗತಿಯನ್ನು ಹೇಳು. ನನ್ನ ವೃದ್ಧಾಪ್ಯದ ಕೊನೆಯ ಆಯುಷ್ಯದಲ್ಲಿ ಯಾರನ್ನೂ ಅಸಂತುಷ್ಟಸ್ಥಿತಿಯಲ್ಲಿರಿಸಬಾರದೆಂದು ನನ್ನ ಮನೀಷೆಯಿರುವದು. ನಿನ್ನ ಪತಿಯ ಬಂಧವಿಮೋಚನೆ ಮಾಡುವದಕ್ಕಾಗಿ ಕಾರಾಗೃಹಾಧಿಕಾರಿಗೆ ಆಜ್ಞಾ ಮಾಡುವೆನು. ಹೇಳು; ನಿನ್ನ ಆತ್ಮಕಥನವನ್ನು ವಿಶದವಾಗಿ ಹೇಳು"

“ಮಹಾರಾಜರೆ, ನಾನು ದಮಾಜಿ ಥೋರಾತನ ಪತ್ನಿಯು. ನನ್ನ ಹೆಸರು ದಯಾಬಾಯಿಯೆಂದಿರುವದು. ನನ್ನ ಪತಿಯು ತಮ್ಮ ದ್ರೋಹ ಚಿಂತನೆಮಾಡಿದ್ದರಿಂದ ತಾವು ನಮ್ಮ ಜಹಾಗೀರಿಯ ಗ್ರಾಮವಾದ ಹಿಂಗಣ ಗಾಂವದ ಮೇಲೆ ದಾಳಿಮಾಡಿದಿರಿ. ಆಗ ನಮ್ಮ ಸರ್ವಸ್ವವೂ ನಾಶವಾಗುವ ದೆಂದು ನಮಗೆ ಮನವರಿಕೆಯಾಯಿಯಿತು. ನಾವು ನಮ್ಮ ಪರಿವಾರದೊಡನೆ ಓಡಿಹೋಗಲು ಸಿದ್ಧರಾದೆವು. ನಮ್ಮ ಪರಿವಾರವೆಂದರೆ ಅದೇನೂ ಅಷ್ಟು ದೊಡ್ಡದಿದ್ದಿಲ್ಲ. ಅನೇಕ ಹಾರೈಕೆಗಳನ್ನು ಹೊತ್ತು ಪಡೆದ ಒಬ್ಬ ಮಗಳು ಮಾತ್ರ ಇದ್ದಳು. ಅವಳ ಹೆಸರು ಪುತ್ಥಳಿಯೆಂದಿತ್ತು. ಪ್ರೀತಿಯ ಮಗಳ ವಿವಾಹ ಸಮಾರಂಭವನ್ನು ನೋಡಿ ಆನಂದ ಪಡಯಬೇಕೆಂದು ಅವಳ ಐದನೆಯ ವರ್ಷದ ವಯಸ್ಸಿನಲ್ಲಿಯೇ ನನ್ನ ಅಣ್ಣನ ಮಗನಾದ ಮೋಹನರಾಯನೆಂಬವನಿಗೆ ಅವಳನ್ನು ಧಾರೆಯೆರೆದು ಕೊಟ್ಟೆವು. ಅಳಿಯನಾದರೂ ಮಾತಾಪಿತೃವಿಹೀನನಿದ್ದುದರಿಂದ ನಮ್ಮ ಒಳಿಯಲ್ಲಿಯೇ ಇರುತ್ತಿದ್ದನು. ಅವನು ಆಗ ಎಂಟು ವರ್ಷದ ವಯಸ್ಸಿನವನಾಗಿದ್ದನು. ನಮ್ಮ ಮೇಲೆ ಅಕಸ್ಮಾತ್ತಾಗಿ ದುರ್ಧರ ಪ್ರಸಂಗವೊದಗಿದ್ದರಿಂದ ಪಲಾಯನದ ಹೊರತು ಬೇರೆ ಮಾರ್ಗವು ಉಳಿಯದಾಯಿತು. ನನ್ನ ಪತಿಯು ಹಿಂದೆಯೊಮ್ಮೆ ಬಾಳಾಜಿಪಂತ ಪೇಶವೆಯವರನ್ನು ಅವರ ಪರಿವಾರ ಸಹಿತವಾಗಿ ಹಿಡಿದು ಸೆರೆಯಿಟ್ಟದ್ದರಿಂದ, ಪೇಶವೆಯವರು ಅವರ ಸೇಡು ತೀರಿಸಿಕೊಳ್ಳದಿರಲಾರರೆಂದು ನಮಗೆ ಮನವರಿಕೆಯಾಗಿತ್ತು. ಯುದ್ಧಾರಂಭವಾಗುವ ಮೊದಲನೆಯ ದಿನ ನನ್ನ ಪತಿಯು ಅಳಿಯನಾದ ಮೋಹನರಾಯನನ್ನು ಚಂದ್ರಸೇನ ಜಾಧವನ ಕಡೆಗೆ ಒಪ್ಪಿಸಿದನು. ಚಾಂದ್ರಸೇನನಾದರೂ ಅವನನ್ನು ಹೊಟ್ಟೆಯ ಮಗನಂತೆ ರಕ್ಷಿಸುವೆನೆಂದು ಅಭಿವಚನವಿತ್ತುದ್ದರಿಂದ ನಾವು ನಿಶ್ಚಿಂತರಾದೆವು. ನಾನಂತೂ ಕಡೆತನಕ ಪತಿಸಾನ್ನಿಧ್ಯಿಯಲ್ಲಿರಬೇಕೆಂದು ನಿಶ್ಚಯಮಾಡಿಕೊಂಡದ್ದರಿಂದ, ವಾತ್ಸಲ್ಯದ ಪುತ್ರಿಯಾದ ಪುತ್ಥಳಿಯನ್ನು ಎಲ್ಲಿಯಾದರೂ ಸುರಕ್ಷಿತವಾದ ಸ್ಥಳಕ್ಕೆ ಬೇಗನೆ ಕಳಿಸಬೇಕಾಗಿತ್ತು. ತಾರಾಬಾಯಿಯವರ ಕಡೆಗೆ ಅವಳನ್ನು ಒಪ್ಪಿಸಬೇಕೆಂದು ನಮ್ಮ ವಿಚಾರವಿತ್ತು; ಆದರೆ ಅಷ್ಟು ಅವಕಾಶವು ದೊರೆಯದ್ದರಿಂದ, ನಾವು ಅವಳನ್ನು ಬಂಕಟಸ್ವಾಮಿಗಳ ಆನಂದವನದಲ್ಲಿ ಬಿಟ್ಟಿಟ್ಟೆವು ಆಗ ನಾವು ಅವಳ ಕೊರಳಲ್ಲಿ ಒಂದು ಪತ್ರವನ್ನು ಕಟ್ಟಿದ್ದೆವು. ನಿರಾಧಾರಿಯಾದ ಬಾಲಿಕೆಯ ರಕ್ಷಣೆಮಾಡಬೇಕೆಂದು ನಾವು ಆ ಪತ್ರಿಕೆಯಲ್ಲಿ ವಿನಂತಿ ಮಾಡಿಕೊಂಡಿದ್ದೆವು.”

ಸಗುಣಾಬಾಯಿಯ ಕಥೆಯನ್ನು ಕೇಳಿ ಎಲ್ಲರೂ ವಿಸ್ಮಿತರಾಗಿ ಬಂಕಟ ಸ್ವಾಮಿಗಳ ಮುಖನಿರೀಕ್ಷಣೆ ಮಾಡತೊಡಗಿದರು. ಆಗ ಸ್ವಾಮಿಗಳು: "ಸಗುಣಾ ಬಾಯಿಯ ಮಾತುಗಳು ಸತ್ಯವಾದವುಗಳಿರುವವು" ಎಂದು ಹೇಳಿದ ಮೇಲೆ, ಅವಳು ಮತ್ತೆ ಮಾತಾಡತೊಡಗಿದಳು.

"ಮಹಾರಾಜರೇ, ಹಿಂಗಣಗಾಂವದ ಯುದ್ಧದಲ್ಲಿ ನಮಗೆ ಪಲಾಯನಕ್ಕೆ ಸಹ ಅವಕಾಶ ದೊರೆಯಲಿಲ್ಲ. ನನ್ನ ಪತಿಯು ಸೆರೆಯಾಳಾದನು. ನಾನು ಹಾಗೂ ಹೀಗೂ ಮಾಡಿ ಪಾರಾದೆನು. ನನ್ನ ಪುತ್ಥಳಿಯನ್ನು ಬಿಟ್ಟು ದೂರ ವಾಗಿರಲಾರದೆ, ನಾನು ಮಠದ ಸಮೀಪದಲ್ಲಿ ಪನ್ಹಾಳಗಡದ ಕೆಳಗೆ ಇದ್ದ ಗವಳಿ ಗರ ಗುಡಿಸಲಿನಲ್ಲಿರತೊಡಗಿದೆನು. ಅಲ್ಲಿ ಯಮುನೆಯೆಂಬ ಗವಳತಿಯು ನನಗೆ ಚನ್ನಾಗಿ ಆಶ್ರಯವಿತ್ತಳು. ನಾನು ಅವಳ ಭಗಿನಿಯೆಂದು ಜನರಿಗೆ ಹೇಳುತ್ತ, ದಯಾರ್ಬಾಯಿಯೆಂಬ ಹೆಸರಿಗೆ ಪ್ರತಿಯಾಗಿ ಸಗುಣಾಬಾಯಿಯೆಂದು ನಾಮಕರಣ ಮಾಡಿಕೊಂಡೆನು. ನನ್ನ ಹಾಗು ಯಮುನೆಯ ತವರೂರು ಒಂದೇ ಇದ್ದದರಿಂದ, ನಮ್ಮಿಬ್ಬರಲ್ಲಿ ಸ್ವಾಭಾವಿಕವಾಗಿ ಪ್ರೇಮವೃದ್ಧಿಯಾಗ ತೊಡಗಿತು. ಯಮುನೆಯು ನಿತ್ಯದಲ್ಲಿ ಪನ್ಹಾಳಗಡದ ಮೇಲೆ ಹಾಲು-ಮೊಸರು ಗಳನ್ನು ಒಯ್ಯುತ್ತಿದ್ದಳು. ಬುದ್ಧಿಪೂರ್ವಕವಾಗಿ ಅವಳ ಕೆಲಸವನ್ನು ನಾನು ವಹಿಸಿದೆನು. ನನ್ನ ಪತಿಯು ತಾರಾಬಾಯಿಯವರ ಪಕ್ಷದವನಿದ್ದುದರಿಂದ, ನಾನು ಅವರ ಪ್ರೀತಿಸಂಪಾದನೆಗಾಗಿ ಯತ್ನನಡೆಯಿಸಿದೆನು. ಕಡೆಗೆ ನನ್ನ ಮನೋ ದಯವು ಸಾಫಲ್ಯವಾಯಿತು. ನಾನು ಅವರ ವಿಶ್ವಾಸಕ್ಕೆ ಪಾತ್ರಳಾದೆನು. ಪುತ್ಥಳಿ ಯನ್ನು ತಮ್ಮ ಒಳಿಯಲ್ಲಿಟ್ಟುಕೊಳ್ಳಬೇಕೆಂದು ನಾನು ಅವರಿಗೆ ಹೇಳಿದೆನು. ನನ್ನ ಮಾತಿನಂತೆ ತಾರಾಬಾಯಿಯವರು ಅವಳನ್ನು ತಮ್ಮ ಬಳಿಗೆ ಕರೆಯಿಸಿ ಕೊಂಡರು. ಸ್ವಾಮಿಮಹಾರಾಜರು ಅವಳಿಗೆ ಚಂದ್ರಿಕೆಯೆಂದು ಹೆಸರಿಟ್ಟಿ ದ್ದರು. ಅವಳು ಸದ್ಬೋಧಪರವಾದ ಮಾತಿನವಳೂ, ಸದ್ವರ್ತನಿಯೂ ಇದ್ದುದ ರಿಂದ ಪನ್ಹಾಳಗಡದಲ್ಲಿಯ ಎಷ್ಟೋ ಜನರು ಅವಳನ್ನು ವಾತ್ಸಲ್ಯದಿಂದ ಸದ್ಬೋಧ ಚಂದ್ರಿಕೆಯೆಂದು ಕರೆಯುತ್ತಿದ್ದರು.

"ತಾರಾಬಾಯಿಯವರಿಗೆ ರಾಮರಾಜನೆಂಬ ಮೊಮ್ಮಗನು ಜನಿಸಿದ್ದನು. ಅವನಿಗಿಂತ ಹಿರಿಯನೊಬ್ಬನನ್ನು ರಾಜಸಬಾಯಿಯವರು ಮೋಸದಿಂದ ಕೊಂದ ರೆಂದು ತಾರಾಬಾಯಿಯವರು ಅನ್ನುತ್ತಿದ್ದರು. ಈ ಹುಡುಗನನ್ನಾದರೂ ಅವರು ಹತಿಸಬಹುದೆಂದು ತಿಳಿದು, ತಾರಾಬಾಯಿಯವರು ಅವನನ್ನು ಎಲ್ಲಿಯಾ

ವರೂ ಸುರಕ್ಷಿತವಾದ ಸ್ಥಳಕ್ಕೆ ಕಳಿಸಬೇಕೆಂದು ನಿರ್ಧರಿಸಿದ್ದರು. ಬಾವಡೆಯ ಶಿವರಾಮಪಂತರು ಅವರ ವಿಶ್ವಾಸಪಾತ್ರರಿದ್ದುದರಿಂದ, ಅವರಲ್ಲಿ ರಾಮರಾಜನನ್ನಿರಿಸಬೇಕೆಂದು ತಾರಾಬಾಯಿಯವರು ಯೋಚನೆ ಮಾಡಿದರು. ಶಿವರಾಮಪಂತರ ದಾಸಿಯಾದ ಜನಾಬಾಯಿಗೆ ಹತ್ತುತಿಂಗಳ ಮಗನಿದ್ದನು. ಅವನು ಬೇನೆಯಿಂದ ಅಕಸ್ಮಾತ್ತಾಗಿ ಮರಣ ಹೊಂದಲು, ವಿನಿಮಯ ರೀತಿಯಿಂದ ನಾನು ರಾಮರಾಜನನ್ನು ದೊರಕಿಸಿ, ಶಿವರಾಮಪಂತರ ಸ್ವಾಧೀನ ಮಾಡಿದೆನು. ಕೂಡಲೆ ರಾಮರಾಜನು ಮಡಿದನೆಂಬ ವಾರ್ತೆಯನ್ನು ತಾರಾಬಾಯಿಯವರು ಹಬ್ಬಿಸಿದರು. ನಾನು ಜನಿಯ ಮೃತಬಾಲಕನನ್ನು ಹಾಲಿನ ಪುಟ್ಟಿಯಲ್ಲೊಯ್ದು ಕೊಟ್ಟು, ರಾಮರಾಜನನ್ನು ಅದೇ ಪುಟ್ಟಿಯಲ್ಲಿ ತೆಗೆದುಕೊಂಡು ಹೋಗಿ ಬಾವಡೆಗೆ ಮುಟ್ಟಿಸಿದೆನು. ತಾರಾಬಾಯಿಯವರ ವಂಶವು ತಾನಾಗಿ ಉಚ್ಛೇದವಾದ ಬಗ್ಗೆ ರಾಜಸಬಾಯಿಯವರು ಕೃತಕೃತ್ಯರಾದೆವೆಂದು ಬಗೆದರು. ಈ ಎಲ್ಲ ಸಂಗತಿಗಳು ಬಂಕಟಸ್ವಾಮಿಗಳಿಗೆ ವಿದಿತವಿರುವವು.''

"ಸಗುಣಾಬಾಯಿಯು ಹೇಳಿದ ಸಂಗತಿಯು ಅಕ್ಷರಶಃ ನಿಜವಿರುವದು" ಎಂದು ಬಂಕಟಸ್ವಾಗಳು ನುಡಿದರು. ಆಗ ತಾರಾಬಾಯಿಯು ಸಗುಣಾಬಾಯಿಯನ್ನು ಕುರಿತು—"ಸಗುಣಾತಾಯಿ, ನಾನು ಇಂದಿನ ವರೆಗೆ ಎಲ್ಲ ಸಂಗತಿಯನ್ನು ನಿಮಗೆ ತಿಳಿಸುತ್ತ ಬಂದಿದ್ದರೂ, ನೀವು ನಿಮ್ಮ ಚರಿತ್ರವನ್ನು ಗುಪ್ತವಾಗಿರಿಸಿದ್ದು ಯೋಗ್ಯವೆ?''

"ಅಮ್ಮನವರೆ, ನನ್ನ ಈ ವರ್ತನವು ನಿಮ್ಮ ಮನಸ್ಸಿಗೆ ಸರಿಯಾಗಿ ಕಾಣುವದಿಲ್ಲವೆಂಬದು ನಿಜವು. ಆಗ ನನ್ನ ಆತ್ಮಕಥೆಯನ್ನು ಗುಪ್ತವಾಗಿರಿಸುವದು ಅತ್ಯಂತ ಯೋಗ್ಯವಾಗಿತ್ತು. ನನ್ನ ಪತಿಯು ಪುರಂದರಗಡದಲ್ಲಿ ಸೆರೆಯಾಳಾಗಿರುವನು. ಮಹಾರಾಜರು ಅವನನ್ನು ಮುಕ್ತಗೊಳಿಸುವರೆಂದು ನಂಬಿರುವೆನು"

ಕೂಡಲೆ ಶಾಹೂರಾಜನು ದಮಾಜಿ ಥೋರಾತನ ಬಿಡುಗಡೆ ಮಾಡಬೇಕೆಂದು ಪುರಂದರದ ದುರ್ಗಾಧಿಪತಿಗೆ ಆಜ್ಞಾಪತ್ರ ಕಳುಹಿಸಿದನು. ಅನಂತರದಲ್ಲಿ ತಾರಾಬಾಯಿಯು ದರ್ಯಾಬಾಯಿಯನ್ನು ಕುರಿತು—"ಬನ್ನಿರಿ ಗವಳತಿ!" ಎಂದು ನಗುತ್ತ ನುಡಿದು, ಅವಳನ್ನು ತನ್ನ ಬಳಿಯಲ್ಲಿ ಕುಳ್ಳಿರಿಸಿಕೊಂಡಳು. ತರುವಾಯ ಚಂದ್ರಿಕೆಯನ್ನು ಕರೆದು:—

"ಸದ್ಗುರುಮಹಾರಾಜರ ಮಾನಸಪುತ್ರಿಯಾದ ಸದ್ಬೋಧ ಚಂದ್ರಿಕೆ! ನಿನಗೆ ಗೊತ್ತಿದ್ದ ಸಂಗತಿಯನ್ನು ನಿನ್ನ ಸದ್ಬೋಧವಾಣಿಯಿಂದ ತಿಳಿಸು!''

ಚಂದ್ರಿಕೆಯು ತನಗೆ ಗೊತ್ತಿದ್ದ ಎಲ್ಲ ಸಂಗತಿಯನ್ನು ಸುಸಂಗತವಾಗಿ ಶಾಹೂರಾಜನೆದುರಿಗೆ ಅರಿಕೆಮಾಡಿಕೊಂಡಳು. ಅವಳ ಗೊತ್ತುವಳಿಯ ಎಲ್ಲ ಸಂಗತಿಗಳು ವಾಚಕಮಹಾಶಯರಿಗೆ ತಿಳಿದವುಗಳಾಗಿರುವದರಿಂದ ಪುನರುಕ್ತಿ ಮಾಡಲವಶ್ಯವಿಲ್ಲ. ಸುಭಾನರಾಯನ ಪ್ರಕರಣದಲ್ಲಿ ಅವಳು ತೋರಿಸಿದ ಶೌರ್ಯ ಧೈರ್ಯ ಸಾಹಸಗಳನ್ನೂ, ಅವಳ ದಿವ್ಯವಾದ ಚಾರಿತ್ರ್ಯವನ್ನೂ, ಪಾವಿತ್ರ್ಯವನ್ನೂ, ಸ್ವಾಮಿನಿಷ್ಠೆಯನ್ನೂ ನೋಡಿ, ಎಲ್ಲ ಜನರು ಅವಳನ್ನು ಬಹು ಪರಿಯಾಗಿ ಹೊಗಳಿದರು. ಪ್ರತ್ಯಕ್ಷ ಶಾಹೂಮಹಾರಾಜನು ಅವಳ ವಿಷಯ ವಾಗಿ ಅನಂತ ಧನ್ಯೋದ್ಗಾರ ತೆಗೆದನು. ದರ್ಯಾಬಾಯಿಯು ತನ್ನ ಕುಮಾರಿ ಯಾದ ಚಂದ್ರಿಕೆಯ-ಪುತ್ಥಳಿಯ-ಅಲೌಕಿಕ ಗುಣಗಳನ್ನು ಕೇಳಿ, ಆನಂದ ಭರಿತ ಳಾಗಿ ಅವಳನ್ನು ಬಿಗಿದಪ್ಪಿದಳು. ದರ್ಯಾಬಾಯಿಯೇ ತನ್ನ ತಾಯಿಯೆಂಬದು ಪುತ್ಥಳಿಗೆ ತಿಳಿದದ್ದರಿಂದ, ಅವಳು ಸ್ವಾನಂದ ಸಾಮ್ರಾಜ್ಯದಲ್ಲಿ ಮುಳುಗಿದಳು!

ಅನಂತರದಲ್ಲಿ ಶಿವರಾಮಪಂತ-ಜನಾಬಾಯಿಯವರು ತಮ್ಮ ತಮ್ಮ ಸಂಗತಿಗಳನ್ನು ನಿವೇದಿಸಿದರು. ರಾಮರಾಜನನ್ನು ಹಿಡಿದು ತರುವದಕ್ಕಾಗಿ ರಾಜಸಬಾಯಿಯು ಕಳಿಸಿದ ನಾಲ್ವರು ಕೊಲೆಗಡಕರಲ್ಲಿ ಇಬ್ಬರು ಜೀವಂತ ವಾಗಿ ಉಳಿದಿದ್ದರಷ್ಟೆ? ತಾರಾಬಾಯಿಯು ಅವರನ್ನಾದರೂ ಕರೆತರಿಸಿದ್ದಳು. ಶಾಹೂರಾಜನು ಅಭಯದಾನ ಮಾಡಿದ್ದರಿಂದ ಅವರಾದರೂ ತಮಗೆ ಗೊತ್ತಿದ್ದ ಸಂಗತಿಯನ್ನು ಹೇಳಿದರು. ತರುವಾಯ ರಂಭಾಜಿರಾಯನನ್ನು ಕರೆದು ತಾರಾ ಬಾಯಿಯು:—"ರಂಭಾಜಿರಾವ, ನಿಮಗೆ ಗೊತ್ತಿದ್ದ ಸಂಗತಿಯನ್ನು ತಿಳಿಸಿರಿ" ಎಂದು ಹೇಳಲು, ಅವನು ಹೈದ್ರಾಬಾದದಿಂದ ಸಾತಾರೆಗೆ ಬಂದ ಮೇಲೆ ಘಟಿಸಿದ ಎಲ್ಲಸಂಗತಿಯನ್ನೂ ವಿಶದವಾಗಿ ತಿಳಿಸಿದನು. ರಂಭಾಜಿರಾಯನು ದರ್ಯಾಬಾಯಿಗೆ ಪರಿಚಯದವನಾಗಿ ತೋರಲಾರಂಭಿಸಿದನು. ಅವನನ್ನು ಎಲ್ಲಿಯೋ ನೋಡಿದಂತೆ ಅವಳಿಗೆ ಭಾಸವಾಗಿತ್ತು. ರಂಭಾಜಿಯು ತನ್ನ ಸಂಗತಿ ಯನ್ನು ಹೇಳಿದ ಕೂಡಲೆ, ಅವನೇ ತನ್ನ ಅಳಿಯನೆಂದು ದರ್ಯಾಬಾಯಿಯ ಮನವರಿಕೆಯಾಯಿತು. ಆಗ ಅವಳು ಪುತ್ಥಳಿಯನ್ನು ಕರೆದೊಯ್ದು ಅವಳ ಹಸ್ತವನ್ನು ರಂಭಾಜಿರಾಯನ ಕೈಯಲ್ಲಿರಿಸಿ:—"ಪುತ್ಥಳಿ, ಇವನೇ ನಿನ್ನ ಪ್ರಿಯ ಪತಿಯಾದ ಮೋಹನರಾಯನು!" ಎಂದು ಹೇಳಿದಳು.

ರಂಭಾಜೀರಾಯನೇ ತನ್ನ ಪ್ರಿಯಪತಿಯೆಬಂದು ಗೊತ್ತಾದ ಕೂಡಲೆ ಪುತ್ಥಳಿಗಾದ ಆನಂದವನ್ನು ವರ್ಣಿಸುವದು ಅಸಾಧ್ಯವೇ ಸರಿ. "ವ್ಯತಿಷಜತಿ

ಪದಾರ್ಥಾನಾಂತರಃ ಕೋಽಪಿ ಹೇತುಃ'' ಎಂದು ಸ್ವಾಮಿಗಳಾಡಿದ ಭಾಸ ವಾಕ್ಯವು ಈಗ ಅವಳ ನಿದರ್ಶನಕ್ಕೆ ಬಂದಿತು. ತಾನು ಅಪಾತ್ರದಲ್ಲಿ ಪ್ರೇಮಾರ್ಪಣೆ ಮಾಡಿಲ್ಲವೆಂದು ಅವಳು ಸಮಾಧಾನಗೊಂಡಳು. ಅನಂತರದಲ್ಲಿ ತಾರಾಬಾಯಿಯು ಎದ್ದು ಹೋಗಿ, ಅಲ್ಲಿಯೇ ಒಂದು ಕೋಣೆಯಲ್ಲಿದ್ದ ರಾಮರಾಜನನ್ನು ಹೊರಗೆ ಕರೆತಂದಳು. ಏರಿಕೆಯ ತಾರುಣ್ಯದ ಬಾಲರಾಜನ ಸುಂದರವಾದ ಮೂರ್ತಿಯನ್ನು ನೋಡಿ ಶಾಹೂರಾಜನು ಹರ್ಷಗೊಂಡನು. 'ರಾಮರಾಜನ ಮುಖದಲ್ಲಿ ಉಕ್ಕಿ ಹೊರಸೂಸುವ ರಾಜತೇಜವೇ ಅವನು ರಾಜಕುಮಾರನೆಂಬದಕ್ಕೆ ಪ್ರಮಾಣಭೂತವಾಗಿರಲು ಮಿಕ್ಕ ಸಾಕ್ಷಿಗಳ ಅವಶ್ಯಕತೆಯಿದ್ದಿಲ್ಲವೆ'ಂದು ಅವನು ಉದ್ಗಾರ ತೆಗೆದನು.

ರಾಮರಾಜನು ಶಾಹೂಮಹಾರಾಜ, ಬಂಕಟಸ್ವಾಮಿ ಮೊದಲಾದ ಜನರಿಗೆ ವಂದನೆಗಳನ್ನರ್ಪಿಸಿದನು. ಭಾವೀ ಛತ್ರಪತಿಯು ದೀರ್ಘಾಯುವಾಗಲೆಂದು ಅವರು ಆಶೀರ್ವಾದ ಮಾಡಿದರು. ಅವನನ್ನು ದತ್ತಪುತ್ರನನ್ನಾಗ ಮಾಡಿಕೊಳ್ಳುವೆನೆಂದು ಶಾಹೂರಾಜನು ಎಲ್ಲ ಜನರ ಸಮ್ಮುಖದಲ್ಲಿ ಅಭಿವಚನವಿತ್ತನು.

.... .... .... .... ....

ದಮಾಜಿ ಥೋರಾತನನ್ನು ಕಾರಾಗೃಹದಿಂದ ಮುಕ್ತಮಾಡಿ ಶಾಹೂರಾಜನು ಅವನ ಪೂರ್ವ ವೈಭವವನ್ನು ಅವನಿಗೆ ಕೊಟ್ಟನು. ರಂಭಾಜಿರಾಯ ಅಥವಾ ಮೋಹನರಾಯನಿಗೆ ದೊಡ್ಡ ಜಹಾಗೀರಿಯು ದೊರೆಯಿತು. ಶಿವರಾಮಪಂತನಿಗಾದರೂ ಜಹಾಗೀರಿಯು ಕೊಡಲ್ಪಟ್ಟಿತು. ರಾಮರಾಜನು ಜನಾಬಾಯಿಯನ್ನು ಹಡೆದ ತಾಯಿಯೆಂದು ಭಾವಿಸಿ, ಅವಳಿಗೆ ಮನ್ನಣೆ ಕೊಡುತ್ತಿದ್ದನು.

‡ ‡ ‡ ‡ ‡ ‡

ಒಂದು ಸುಮುಹೂರ್ತವನ್ನು ನೋಡಿ ಶಾಹೂರಾಜನು ರಾಮರಾಜನ ದತ್ತವಿಧಾನವನ್ನು ವಿಧಿಪೂರ್ವಕವಾಗಿ ಪೂರ್ತಿಗೊಳಿಸಿದನು.

× × × × × × × ×

ಸ್ವಲ್ಪ ದಿವಸಗಳಲ್ಲಿ ಶಾಹೂರಾಜನು ಮರಣಹೊಂದಿದನು. ರಾಮರಾಜನು ಸಾತಾರೆಯ ಸ್ವರಾಜ್ಯ ಸಿಂಹಾಸನದ ಮೇಲೆ ಅಧಿಷ್ಠಿತನಾದನು.

\+ + + + +

ದಮಾಜಿ ಥೋರಾತನು ತನ್ನ ಪತ್ನಿಯೊಡನೆ ಹಿಂಗಣಗಾಂವದಲ್ಲಿರತೊಡಗಿದನು. ಪುತ್ಥಳಿಯು ಮೋಹನರಾಯನೊಡನೆ ಅವನ ಜಹಾಗೀರಿಯ ಗ್ರಾಮ

ದಲ್ಲಿ ಆನಂದದಿಂದ ಕಾಲಹರಣ ಮಾಡತೊಡಗಿದಳು. ಅವಳಿಗೆ ಮೋಹನ ರಾಯನು 'ಸಾಧುಮಹಾರಾಜರೇ,' ಎಂದು ಆಗಿಂದಾಗ ವಿನೋದ ಮಾಡುತ್ತಿದ್ದನು.

* * * *

ಆಯಿತು! ಎಲ್ಲ ಜನರ ಭಾಗ್ಯೋದಯವಾಯಿತು! ಗೊಂದಲಿಗರ ವೇಷದಿಂದ ತಿರುಗತೊಡಗಿದ್ದ ರಾಮರಾಜನಿಗೆ ಭಾಗ್ಯೋದಯವಾಗಿ, ಅವನು ಶಿವ ಛತ್ರಪತಿಯಿಂದ ಪ್ರಸ್ಥಾಪಿತವಾದ ಹಿಂದಪದ ಪಾತಶಾಹಿಯ ಸ್ವಾಮಿಯಾದನು.

.... .... .... .... ....

ಭಾಗ್ಯೋದಯವಾದ ಮೇಲೆ ಎಲ್ಲ ಜನರು ಹಿಂದೆ ಅನುಭವಿಸಿದ ದುಃಖವನ್ನು ಮರೆತು ಬಿಟ್ಟರು.

\+ \+ \+ \+ \+

ಸರ್ವಾಂತರ್ಯಾಮಿಯಾದ ಪರಮಾತ್ಮನ ಅನುಗ್ರಹದಿಂದ ರಾಮರಾಜನಿಗೆ ಭಾಗ್ಯೋದಯವಾದ್ದರಿಂದ, ತಾರಾಬಾಯಿಯು ಯಾವಾಗಲೂ ಆ ಜಗನ್ನಿಯಾಮಕನ ಗುಣಗಾನ ಮಾಡಹತ್ತಿದಳು.

ಸಂಪೂರ್ಣ.

ತ್ವರೆ ಮಾಡಿರಿ!]   [ಬೇಗನೆ ಆರ್ಡರ ಕಳಿಸಿರಿ!!

# ಶ್ರೀ ಶೇಷಾಚಲ ಗ್ರಂಥಮಾಲೆಯ

# ಹೊಸ ಪುಸ್ತಕಗಳು.

[೧] **ರಾಜಕೀಯ ಗುಪ್ತರಹಸ್ಯ:**- ಈ ಅತ್ಯುತ್ತಮ ಪತ್ತೇದಾರೀ ಕಥೆಯು ನಭೂತಪೂರ್ವ ಪಾತ್ರ ಪಾತ್ರ್ಯ ಘಟನಾ ಸುಧಾರಣೆಗಳಿಂದ ಯುಕ್ತವಾಗಿರುವದರಿಂದ ಕನ್ನಡ ವಾಚಕ ವರ್ಗವನ್ನು ದಂಗುಗೊಳಿಸಿ ಬಿಡುವದು. ಕ್ರೌನ ಪುಟ ಸುಮಾರು ೨೦೦ ಬೆಲೆ ೧ ರೂ.

[೨] **ಈಶಸಂಕಲ್ಪ:**- ಕರ್ನಾಟಕ ಸಾರ್ವಭೌಮನಾಗಿದ್ದ ಸತ್ಯಾಶ್ರಯ ಪುಲಿಕೇಶಿಯ ಕಾಲದ ವಿಶ್ವಸನೀಯ ಐತಿಹಾಸಿಕ ಸಂಗತಿಗಳನ್ನೊಳಗೊಂಡ ಹೃದಯಂಗಮವಾದ ಕಾದಂಬರಿಯಿದು. ಉತ್ತರಾಪಥದ ಸಾರ್ವಭೌಮನಾದ ಕನೋಜದ ಹರ್ಷವರ್ಧನನ ಗರ್ವಭಂಗ ಮಾಡಿ, ಅವನನ್ನು ಸಮುದ್ರದಂತಹ ಸೇನೆಯೊಡನೆ ಓಡಿಸಿ, ಕರ್ನಾಟಕ ಸಾಮ್ರಾಜ್ಯದ ಮೇರೆಯನ್ನು ನರ್ಮದಾ ತೀರದ ವರೆಗೆ ಸ್ಥಿರಪಡಿಸಿದ ಐತಿಹಾಸಿಕ ಸಂಗತಿಗಳಿಂದ ಪರಿಪೂರ್ಣವಾಗಿದೆ. ರೇವತಿಯೆಂಬ ಷೋಡಶ ವರ್ಷದ ತರುಣಿಯು ದೇವತಸೇನನೆಂಬ ಹೆಸರಿನಿಂದ ತೋರಿದ ಧೈರ್ಯ-ಸಾಹಸಗಳೂ, ಒಳ್ಳೇ ನಿಕರದ ಕಾಲಕ್ಕೆ ಪುಲಿಕೇಶಿ ಮಹಾರಾಜನಿಗೆ ಮಾಡಿದ ಅಪೂರ್ವ ಸಹಾಯವೂ ವಾಚಕರನ್ನು ಆಶ್ಚರ್ಯಗೊಳಿಸದಿರಲಾರವು. ಕ್ರೌನ ಅಳತೆಯ ಸುಮಾರು ೧೫೦ ಪುಟ ಬೆಲೆ ೧೨ ಆಣೆ.

ಇವೆರಡೂ ಪುಸ್ತಕಗಳನ್ನೂ ನಮ್ಮ ಗ್ರಂಥಮಾಲೆಯೊಳಗಿನ ಮತ್ತೆ ಬೇಕಾದ ಪುಸ್ತಕಗಳನ್ನೂ ಒಟ್ಟಿಗೆ ತಾ|| ೩೦-೧೧-೩೩ರೊಳಗೆ ತರಿಸುವವರಿಗೆ ಟಪಾಲ ಖರ್ಚನ್ನು ನಾವೇ ವಹಿಸಿ ಮೂಲ ಬೆಲೆಗೇ ಕಳಿಸುವೆವು. ಕಾರಣ ಪುಸ್ತಕ ಬೇಕಾದವರು ಕೂಡಲೆ ಪು. ಆ. ಮಾಡಿ ಬರೆಯಬೇಕು. ಆ ಮೇಲೆ ಟಪಾಲು ಖರ್ಚಿನ ಈ ರಿಯಾಯತಿಯು ದೊರೆಯದು. ಕ್ಯಾಟಲಾಗ ತರಿಸಿ ಆರ್ಡರು ಕಳಿಸಿರಿ.

ಇವಲ್ಲದೆ ನಮ್ಮಲ್ಲಿ ನೂರಾರು ಅತ್ಯುತ್ತಮ ಐತಿಹಾಸಿಕ-ಸಾಮಾಜಿಕ-ಪೌರಾಣಿಕ-ಪತ್ತೆದಾರಿ ಕಾದಂಬರಿಗಳೂ, ಚರಿತ್ರ- ನಾಟಕ- ವೈದ್ಯಕೀಯ ಗ್ರಂಥ ಮುಂತಾದ ನಾನಾ ಬಗೆಯ ಪುಸ್ತಕಗಳೂ ದೊರೆಯುತ್ತವೆ.

**ಶ್ರೀ ಶೇಷಾಚಲ ಗ್ರಂಥಮಾಲೆ,**
**ಪೊ. ಆನಂದವನ,** (ಧಾರವಾಡ.)